ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Friday, 24th March 1972.

The House met in the Assembly Chamber, Vidhana Soudha, at Thirty Minutes past Twelve of the Clock.

SRI T. TARE GOWDA *(SPEAKER *Pro-Tem*) in the Chair.

OATH OR AFFIRMATION BY MEMBERS

ಅಧ್ಯಕ್ಷರು :—ಮಾನ್ಯ ಸದಸ್ಯರೆಲ್ಲರನ್ನೂ ಈ ಮಹಾ ಸಭೆಗೆ ಸ್ವಾಗತಿಸುತ್ತೇನೆ. ವಿಧಾನ ಸಭೆಯವರು ಅಧ್ಯಕ್ಷರನ್ನು ಚುನಾಯಿಸುವವರೆಗೆ, ಅಧ್ಯಕ್ಷರ ಕರ್ತವ್ಯಗಳನ್ನು ನಿರ್ವಹಿಸಲು ರಾಜ್ಯಪಾಲರು ನನ್ನನ್ನು ನೇಮಿಸಿರುವ ವಿಚಾರವು ಮಾನ್ಯ ಸದಸ್ಯರಿಗೆ ಗೊತ್ತಿದೆ. ಮಾನ್ಯ ಸದಸ್ಯರು ಪ್ರಮಾಣ ಅಥವಾ ಪ್ರತಿಜ್ಞಾ ವಚನವನ್ನು ನನ್ನ ಮುಂದೆ ಸ್ವೀಕರಿಸುವ ಅಧಿಕಾರವನ್ನೂ ರಾಜ್ಯಪಾಲರು ನನಗೆ ನೀಡಿದ್ದಾರೆ. ಸದಸ್ಯರು ಪ್ರಮಾಣ ವಚನವನ್ನು ಸ್ವೀಕರಿಸುವುದು ಸಭೆಯ ಮುಂದಿರುವ ಮೊದಲನೆಯ ಕಾರ್ಯಕ್ರಮವಾಗಿದೆ. ಮಾನ್ಯ ಸದಸ್ಯರುಗಳು ಈಗ ಸದಸ್ಯರುಗಳಾಗಿ ಪ್ರಮಾಣ ವಚನವನ್ನು ಸ್ವೀಕರಿಸಬೇಕು. ಪ್ರಮಾಣ ವಚನವನ್ನು ಸ್ವೀಕರಿಸುವ ಕ್ರಮ ಈ ಕೆಳಗೆ ಕಂಡಂತಿದೆ :

ಅಧ್ಯಕ್ಷ ಸ್ಥಾನಕ್ಕೆ ನೂತನವಲ್ಲಿಟ್ಟಿದ್ದ ಸದಸ್ಯರುಗಳು, ಮಂತ್ರಿಗಳು, ನಂತರ ಅಕಾರಾದಿ ಕ್ರಮದಲ್ಲಿ ಇತರ ಸದಸ್ಯರುಗಳು.

ಸದಸ್ಯರ ಹೆಸರುಗಳನ್ನು ಕಾರ್ಯದರ್ಶಿಯವರು ಕರೆದಾಗ ಅವರು ತಮ್ಮ ಸ್ಥಾನವನ್ನು ಬಿಟ್ಟು ತಮಗೆ ಮೊದಲೇ ಕೊಡಲಾಗುವ ಪ್ರಮಾಣ ವಚನ ಅಥವಾ ಪ್ರತಿಜ್ಞಾ ವಚನದ ನಮೂನೆಯ ಪ್ರತಿಯೊಂದಿಗೆ ಕಾರ್ಯದರ್ಶಿಯವರ ಮೇಜಿನ ಬಲಭಾಗಕ್ಕೆ ಬರತಕ್ಕುದು. 1951ನೇ ಇನವಿಯ ಚುನಾವಣೆಗಳನ್ನು ನಡೆಸುವುದಕ್ಕೆ ಸಂಬಂಧಪಟ್ಟ ನಿಯಮಗಳ ಪ್ರಕಾರ 66ನೇ ನಿಯಮದ ಮೇರೆಗೆ ಚುನಾವಣಾಧಿಕಾರಿಯವರು ಸದಸ್ಯರು ಚುನಾಯಿತರಾದ ಬಗ್ಗೆ ನೀಡಿರತಕ್ಕ ಘೋಷಣಾ ಪತ್ರವನ್ನು ಕಾರ್ಯದರ್ಶಿಯವರಿಗೆ ಕೊಡತಕ್ಕುದು. ಸದಸ್ಯರು ಅಧ್ಯಕ್ಷ ಪೀಠಕ್ಕೆ ಅಭಿಮುಖವಾಗಿದ್ದು ಪ್ರಮಾಣ ವಚನ ಅಥವಾ ಪ್ರತಿಜ್ಞಾ ವಚನವನ್ನು ಸ್ವೀಕರಿಸತಕ್ಕುದು. ನಂತರ ಅಧ್ಯಕ್ಷ ಸ್ಥಾನದಲ್ಲಿರುವವರ ಬಳಿ ಹೋಗಿ ಅವರಿಗೆ ಹಸ್ತಲಾಘವವನ್ನು ಕೊಡತಕ್ಕುದು ಅಥವಾ ವಂದಿಸತಕ್ಕುದು. ತದನಂತರ ಸದಸ್ಯರು ಅಧ್ಯಕ್ಷ ಪೀಠದ ಹಿಂಬದಿಯಿಂದ ಕಾರ್ಯದರ್ಶಿಯವರ ಮೇಜಿನ ಮತ್ತೊಂದು ಭಾಗಕ್ಕೆ ಬಂದು ಅಲ್ಲಿಟ್ಟಿರುವ ಸದಸ್ಯರ ನಾಮಾವಳಿ ಪುಸ್ತಕದಲ್ಲಿ ಸಹಿ ಮಾಡಿ ಸದನದಲ್ಲಿನ ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳತಕ್ಕುದು.

ಈಗ ಕಾರ್ಯದರ್ಶಿಯವರು ಸದಸ್ಯರ ಹೆಸರುಗಳನ್ನು ಕರೆಯಬಹುದು.

---

* Sri T. Tare Gowda (Kallambella) took the Oath before the Governor at Raj Bhavan on 24th March 1972.

Sriyuths : Mohamed Ali Mehatab Ali and M. K. Surpur took Oath in the Chambers of the Speaker on the day.

ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ).—ಸ್ವಾಮಿ, ತಾವು 'ನಾನು' ಎಂದು ಹೇಳಿದಿರಿ. ತಮ್ಮ ಹೆಸರೇನು ?

ಅಧ್ಯಕ್ಷರು.— ಟಿ. ತಾರೇಗೌಡ.

The Secretary called the names of members to take the Oath and the following members took the prescribed oath or made the affirmation :

	Sriyuths :		*Constituency*
1.	K. M. Naganna	...	Chickpet
2.	*Smt. K. S. Nagarathnamma*	...	Gundlupet
3.	H. Siddaveerappa	...	Harihar
4.	A. R. Badarinarayana Iyengar	...	Shimoga
5.	A. Shankara Alva	...	Puttur
6.	N. Hutchamasthy Gowda	...	Huliyurdurga
7.	Patil Krishtagouda Hanumanthagouda	...	Gadag
8.	Naikar Dyamappa Kallappa	...	Dharwar
9.	Koujalgi V. S.	...	Arbhavi
10.	H. N. Nanje gowda	...	Arakalgud

Sri C. M. ARUMUGHAM (Kolar Gold Fields).—On a point of clarification, Sir, I know I have not taken the oath or affirmation ; still I want to know whether the oath is being taken as per the constituency of the members or according to alphabetical order.

Mr. SPEAKER.—It is according to alphabetical order.

Sri C. M. ARUMUGHAM.—It is not.

ಅಧ್ಯಕ್ಷರು.—ಅಧ್ಯಕ್ಷ ಸ್ಥಾನಕ್ಕೆ ನೂತನವಲ್ಲಿಟ್ಟಿದ್ದ ಸದಸ್ಯರುಗಳು, ಮಂತ್ರಿಗಳು ನಂತರ ಇತರ ಸದಸ್ಯರು ಆಕಾರಾದಿ ಕ್ರಮದಲ್ಲಿ ಪ್ರಮಾಣ ವಚನವನ್ನು ತೆಗೆದುಕೊಳ್ಳುತ್ತಾರೆಂದು ನಾನು ಮೊದಲೇ ತಿಳಿಸಿದ್ದೇನೆ.

Sri C. M. ARUMUGHAM :—I want to make it clear, Sir, that Chair cannot make any distinction between Ministers and members in oath-taking. I know you are appointed temporarily.

Mr. SPEAKER.—It is a convention which we are following.

Sri C. M. ARUMUGHAM:—Where is the Convention ?

ಶ್ರೀ ಪಾಟಾಳ್ ನಾಗರಾಜ್.—ಐದು ಜನ ಶಾಸಕರು ಚುನಾವಣೆಯಲ್ಲಿ ಗೆದ್ದು ಬಂದಿದ್ದರೂ, ನಿರಾಶರಾಗಿ ಬಾಗಿಲಲ್ಲಿ ಕುಳಿತಿದ್ದಾರೆ. ಅವರಿಗೆ ವಸತಿ ಸೌಕರ್ಯವನ್ನು ಕಲ್ಪಿಸಿಲ್ಲ ಎಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು.—ಅವರಿಗೆ ವಸತಿ ಸೌಕರ್ಯವನ್ನು ಕೊಟ್ಟಿದೆ. ಅವರನ್ನು ಇಲ್ಲಿಗೆ ಬರಬೇಕು ಎಂದು ಹೇಳಿದ್ದೇನೆ, ಬರುತ್ತಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಅವರು ಬಂದಿಲ್ಲ. ಯಾರನ್ನಾದರೂ ಕಳುಹಿಸಿ ಅವರು ಇಲ್ಲಿಗೆ ಬರುವಂತೆ ಒಂದು ಮಾತು ಹೇಳಿ.

Sri C. M. ARUMUGHAM.—Is Sri Naganna also a Minister ?

Mr. SPEAKER.—He is a candidate for Speakership.

Sri C. M. ARUMUGHAM.—So, you are giving him the first preference simply because he is contesting for the Speakership.

ಶ್ರೀ ವಿಶ್ವನಾಥರೆಡ್ಡಿ (ಯಾದಗಿರಿ).—ಮಾನ್ಯ ಮಿತ್ರರು ಕನ್‌ವೆನ್‌ಷನ್ ವಿಷಯ ಕೇಳಿದರು. ಅದರ ಬಗ್ಗೆ ರೂಲಿಂಗ್ ಕೊಟ್ಟರೆ ಒಳ್ಳೆಯದಿರುತ್ತದೆ.

ಕೆಲವು ಮಿತ್ರರು ಹೇಳಿದಂತೆ ಕೆಲವು ಜನ ಶಾಸಕರು ಹೊರಗೆ ಕುಳಿತಿದ್ದಾರೆ. ಅವರ ಬಗೆ ತಕ್ಷಣ ಒಂದು ವ್ಯವಸ್ಥೆ ಮಾಡಿ, ಅವರಿಗೆ ಒಂದು ಸೌಜನ್ಯದ ಮಾತು ಹೇಳಿ ಅವರೂ ನಮ್ಮೊಡನೆ ಬಂದು ಕುಳಿತುಕೊಳ್ಳುವಂತೆ ಮಾಡಿದರೆ ಮನಸ್ಸಿಗೆ ನೆಮ್ಮದಿಯಾಗುತ್ತದೆ. ಆ ದೃಷ್ಟಿಯಿಂದ ಅಧ್ಯಕ್ಷರು, ಒಂದೆರಡು ನಿಮಿಷ ತಡವಾದರೂ ಚಿಂತೆ ಇಲ್ಲ, ಹೊರಗೆ ಇರುವ ನಮ್ಮ ಮಿತ್ರರನ್ನು ಕರೆದುಕೊಂಡು ಬರುವ ವ್ಯವಸ್ಥೆ ಮಾಡುವುದು ಒಳ್ಳೆಯದು.

ಅಧ್ಯಕ್ಷರು.—ಪಾಯಿಂಟ್ ಸೆಕ್ರೆಟರಿಯವರನ್ನು ಕಳುಹಿಸಿದ್ದೇನೆ, ಅವರು ಕರೆದುಕೊಂಡು ಬರುತ್ತಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ (ರೋಕೋಪಯೋಗಿ ಶಾಖೆಯ ಮಂತ್ರಿಗಳು).—ನಿಯಮಾವಳಿಯಲ್ಲಿ ಯಾವ ಕ್ರಮದಲ್ಲಿ ಸದಸ್ಯರು ಪ್ರಮಾಣ ವಚನವನ್ನು ತೆಗೆದುಕೊಳ್ಳಬೇಕೆಂದು ಹೇಳದೆ ಇರುವುದರಿಂದ ಅಧ್ಯಕ್ಷರಿಗೆ ರೂಲ್ 325 ಪ್ರಕಾರ ಯಾವ ಕ್ರಮವನ್ನು ಅನುಸರಿಸಬೇಕೆಂದು ಹೇಳಲು ಅಧಿಕಾರವಿದೆ. ಅವರು ಹೇಳುವುದೇ ಇದರಲ್ಲಿ ಅಖೈರು ತೀರ್ಮಾನ.

Oath or Affirmation by Members—*(contd.)*

Name		*Constituency*
Sriyuths:		
11. Kittur Raghunath Dhulappa	...	Kagwad
12. Shivanna Bheemappa	...	Kalmala
13. *Smt. E. E. Vaz*	...	Chickmagalur
14. Devendrappa Ghalappa	...	Chincholi
15. N. Chikke Gowda	...	Hosakote
16. Nagaral Sangappa Palappa	...	Hungund
17. *Smt. Addy Saldanha*	...	Mangalore–I
18. Ammannavar Jayakumar Shripal	...	Sadalga
19. Andanaiah	...	Kunigal
20. Andaneppa, C.	...	Hadagalli

ಅಧ್ಯಕ್ಷರು.—ಈ ಅಕಾರಾದಿ ಕ್ರಮದಲ್ಲಿ ಇತರ ಸದಸ್ಯರುಗಳು.

Name		*Constituency*
Sriyuths:		
21. C. M. Arumugham	...	Kolar Gold Fields
22. C. H. Aswatha Reddy	...	Jagalur
23. S. Bachi Reddy	...	Srinivasapur
24. S. Bangarappa	...	Sorab
25. P. D. Bangera	...	Sullia
26. K. H. Ranganath	...	Hiriyur
27. H. M. Channabasappa	...	Periyapatna

Sri H. S. SIDDAPPA (Arsikere).—Sir, Is it pick and choose ? Where is the convention ? When members are called upon, some Ministers are allowed to take the oath.

Sri C. M. ARUMUGHAM.—Sir, when I raised objection you were pleased to say that the ministers will have the first priority and they will be first called to take oath. Now the members are taking oath. Some of the ministers whose names were called were not present then and now you are calling them. The very first day of the Assembly Session they have come late. Now you are giving them chance. Are we here to obey to whatever you do and say? We must know your directions. Now, when the members are taking oath you are calling the ministers. Let us know what exactly is the procedure.

Mr. SPEAKER.—That is a concession I have allowed to the ministers?

Sri H. S. SIDDAPPA.—Then where is the convention?

Sri C. M. ARUMUGHAM.—Is it your direction that as and when ministers come, their names will be called?

Sri D. DEVARAJ URS (Chief Minister).—Sir, I should like to submit one thing. As the hon'ble Speaker said there is the convention to call the Ministers first and then the hon. Members. That convention is there from the very beginning. As regards the other point raised by the hon. Opposition members that.....

(At this stage there were interruptions and some of the hon. members wanted the Chief Minister to speak in Kannada)

I think there is some relevancy in the other point raised by the hon'ble member Sri C. M. Arumugham. Once the names of ministers are called if they are in the House they may take oath. If at the time of calling the ministers they are not in the House and other members are called upon to take oath, that order may be kept. After the members take oath, the ministers who were absent when called may take their oath. I think there is some force in what the hon. member Sri C. M. Arumugham says. I submit it is your discretion to call ministers who feel that they have some other work and they may take oath in the middle. That discretion is with the Speaker. Otherwise I think those who come late may take their chance.

ಅಧ್ಯಕ್ಷರು :— ಹೆಸರುಗಳನ್ನು ಕರೆದಾಗ ಮಂತ್ರಿಗಳಿಗೆ ಬೇರೆ ಕಾರ್ಯವಿದ್ದು ಅವರು ಬಾರದೆ ಹೋದರೆ ಸಭೆಯು ಕಾಲವನ್ನು ವ್ಯರ್ಥ ಮಾಡದ ರೀತಿಯಲ್ಲಿ ಇತರೇ ಸದಸ್ಯರು ಪ್ರಮಾಣ ವಚನವನ್ನು ತೆಗೆದುಕೊಳ್ಳುತ್ತಾರೆ. ಮಾನ್ಯ ಸಭೆಯು ನಾಯಕರು ಹೇಳಿದಂತೆ ಮಂತ್ರಿಗಳೇ ಆಗಲೀ, ಯಾರೇ ಆಗಲೀ ತಡವಾಗಿ ಬಂದರೆ ಅಂಥವರು ಕೊನೆಯಲ್ಲಿ ಪ್ರಮಾಣ ವಚನ ತೆಗೆದು ಕೊಳ್ಳಬೇಕಾಗುತ್ತದೆ. ಈ ಸಭೆಯಲ್ಲಿ ಎಲ್ಲರನ್ನೂ ಒಂದೇ ದೃಷ್ಟಿಯಿಂದ ನೋಡುತ್ತೇನೆ.

Name	*Constituency*
28. Sri B. Basavalingappa	Uttarahalli

(At this stage the Speaker called Sri M. Y. Ghorpade to take the Oath)

	Name		*Constituencies*
	Sriyuths :		
29.	Sri M. Y. Ghorpade	...	Sandur
30.	Sri P. M. Bangi	...	Jamkhandi
31.	Sri Bapu Rao Ananda Rao	...	Basavakalyan
32.	Sri Bapu Rao Patil	...	Aurad
33.	Sri N. Basaviah	...	Chikkanayakanahal
34.	Sri Basavantha Rao Basangouda	...	Sindhanoor
35.	A. M. Belliappa	...	Mercara
36.	Bettaswami Gowda	...	Kudur
37.	B. Bhaskar Shetty	...	Kaup
38.	Bhimanna Narasappa	...	Manvi
39.	B. Byrappaji	...	Turuvekere
40.	A. D. Biligowda	...	Maddur
41.	M. H. Boriah	...	Mandya
42.	C. Byre Gowda	...	Vemgal
43.	Chandrashekar N. Patil	...	Lingsugur
44.	H. G. Channappa	...	Magadi
45.	R. Chikkaiah	...	Madhugiri
46.	Chowda Reddy	...	Chintamani
47.	*Smt. Damayanthi Bore Gowda*	...	Srirangapatna
48.	Damodar Moolky	...	Mudabidri
49.	A. A. Desai	...	Athani
50.	R. S. Desai	...	Badami

1-30 P.M.

51.	H. D. Deve Gowda	...	Holenarasipura
52.	Dharmasingh Narayansingh	...	Jewargi
53.	Digambar Rao Balwant Rao	...	Afzalpur
54.	Doddathimmaiah	...	Gulur
55.	K. M. Doreswamy Naidu	...	Bethamangala
56.	U. T. Fareed	...	Mangalore-II
57.	K. M. Gangal	...	Bilgi
58.	Gatti Chandrashekhar	...	Gubbi
59.	Ghadi Virupaksha Mallappa	...	Haliyal
60.	Gopinath Rangaswamy Sandra	...	Hubli Rural
61.	C. T. Guddakayu	...	Gokak (ST)
62.	R. Gundu Rao	...	Somawarpet
63.	N. S. Gurusiddappa	...	Biligere
64.	D. Halage Gowda	...	Pandavapura
65.	N. G. Halappa	...	Channagiri
66.	S. Hameed Shah	...	Shivajinagar
67.	Hanji Shivanna	...	Tarikere
68.	H. K. Hanume Gowda	...	Hassan
69.	Hegre Parashuram Padmanna	...	Chikkodi (SC)

(ಅಧ್ಯಕ್ಷರು)

	Name		*Constituencies*
	Sriyuths :		
70.	K. R. Honnappa	...	Kadur
71.	B. D. Inamdar	...	Kittur
72.	M. R. Jayaram	...	Devanahalli
73.	M. H. Jayaprakash Narayan	...	Sirsi (SC)
74.	Jayaprakash Shetty	...	Brahmavar
75.	Jogannavar Yellappa Venkappa	...	Nargund (SC)
76.	J. L. Kabade	...	Ballolli (SC)
77.	B. P. Kadam	...	Karwar
78.	R. V. Kadam	...	Nipani
79.	H. B. Kadasiddappa	...	Honnali
80.	Kagodu Thimmappa	...	Sagar
81.	B. V. Kakkilaya	...	Bantwal
82.	Kantha Rao Bhim Rao Desai	...	Kushtagi
83.	S. Kariappa	...	Kanakapura
84.	D. Kariappa Gowda	...	Hunsur
85.	H. B. Kenche Gowda	...	Krishnarajanagar
86.	A. G. Kodgi	...	Baindur
87.	K. B. Koliwad	...	Ranibennur
88.	Konandur Lingappa	...	Thirthahalli
89.	M. S. Krishnan	...	Malleswaram
90.	T. V. Krishnappa	...	Channapatna
91.	V. Krishna Rao	...	Gowribidanur
92.	M. K. Kulakarni	...	Navalgund
93.	K. H. Kuradagi	...	Mundargi
94.	H. B. Lakshmana	...	Bharmasagara (SC)
95.	S. M. Lingappa	...	Krishnarajpet
96.	H. Linga Reddy	...	Kurugodu
97.	T. N. Madappa Gowda	...	Nagamangala
98.	G. Made Gowda	...	Kirugavalu
99.	K. Made Gowda	...	Bannur
100.	Mahendrakumar Kallappa	...	Hulsoor (SC)
101.	M. Mallappa	...	Birur
102.	Mallikarjun	...	Gurmitkal (SC)
103.	Manik Rao Ramachandra Rao Phulekar	...	Bidar
104.	T. M. Manjunath	...	Tiptur
105.	*Smt. Manorama Madhvaraj*	...	Udipi
106.	H. Mare Gowda	...	Nelamangala
107.	V. Masiyappa	...	Challakere
108.	C. R. Mohamed Saifuddin	...	Chitradurga
109.	Muddramaiah	...	Koratagere
110.	A. V. Muniswamy	...	Malur

	Name		*Constituency*
	Sriyuths :		
111.	P. Muniyappa	...	Mulbagal (S.C.)
112.	B. T. Murnal	...	Bagalkot
113.	Nadaf Mohammed Kasimsab Mardansab	...	Shiggaon
114.	K. P. Nadagouda	...	Mudhol
115.	*Smt. C. Nagamma Keshavamurthy*	....	Davangere
116.	V. Nagappa	....	Bellary
117.	S. V. Naik	...	Kumta
2-00 P.M.			
118.	G. P. Nanjayyanamath	....	Guledgud
119.	M. Nanje Gowda	....	Gandasi
120.	D. Narayana Das	...	Harapanahalli (S.C.)
121.	Nazeer Ahmed Siddiqui	...	Raichur
122.	V. B. Nooli	....	Hukkeri
123.	S. B. Padaki	....	Parasgad
124.	Patel Papa Naika	...	Molakalmuru
125.	B. Parameswarappa	...	Holalkere
126.	A. V. Patil	...	Ron
127.	B. S. Patil	...	Bagewad
128.	G. N. Patil	...	Tikota
129.	G. C. Patil	...	Kalghatgi
130.	K. B. Patil	...	Sankeswar
131.	K. F. Patil	...	Byadgi
132.	K. D. Patil	...	Huvina Hippargi
133.	P. B. Patil	...	Bailhongal
134.	V. N. Patil	...	Hunnabad
135.	R. S. Patil	...	Ramdurg
136.	S. A. Patil	...	Bagewadi
137.	S. Y. Patil	...	Sindgi
138.	V. L. Patil	...	Raibag
139.	P. A. Pawashe	...	Uchagaon
140.	R. Peeranna	...	Heggadadevana-kote (S.C.)
141.	D. Poosalingam	...	Bharathinagar
142.	K. Prabhakar	...	Varthur (S.C.)
143.	Prabhakar Telker	...	Kalgi
144.	Prabhu Raj Lingangouda	...	Yelburga
145.	H. Puttadasa	...	Sathanur (S.C.)
146.	B. Puttakamaiah	...	Sira
147.	S. H. Puttaranganath	...	Belur (S.C.)
148.	B. Puttaswamaiah	...	Ramanagaram
149.	G. Puttaswamy	...	Mudigere (S.C.)
150.	K. Puttaswamy	...	Chamundeswari

(ಅಧ್ಯಕ್ಷರು)

	Name	*Constituency*
	Sriyuths:	
151.	S. Puttaswamy	... Chamarajanagar
152.	R. Rache Gowda	... Hanur
153.	*Smt. Radha Kom Mahabaleshwar Bhatt*	... Ankola
154.	Raja Pid Naik	... Shorapur
155.	M. Rajashekara Murthy	... T. Narasipur
156.	B. E. Ramaiah	... Siruguppa
157.	M. B. Ramaswamy	... Anekal (S.C.)
158.	G. Rame Gowda	... Doddaballapur
159.	Rangangoudra Venkangouda Rangangouda	... Kundgol
160.	*Smt. Renuka Rajendran*	... Bagepalli (S.C.)
161.	K. M. Rudrappa	... Saklespur
162.	M. V. Rudrappa	... Hosadurga
163.	M. M. Sajjan	... Muddebihal

2-30 P. M.

164.	I. G. Sanadi	... Hubli
165.	J. P. Sarwesh	... Serum
166.	B. Satyanarayana Singh	... Hospet
167.	B. B. Sayanak	... Belgaum
168.	T. R. Shamanna	... Fort
169.	Sharanappa	... Deodurg
170.	Sheeranaly Chandrasekhar, S. M.	... Hosanagar
171.	P. C. Shettar	... Hangal
172.	K. B. Shivaiah	... Nanjangud
173.	M. Siddamadaiah	... Kollegal (S.C.)
174.	H. S. Siddappa	... Arsikere
175.	K. Siddaiah	... Santhemarahalli
176.	S. M. Yahya	... Bhatkal
177.	N. B. Sirdesai	... Khanapur
178.	S. C. Srikantaiah	... Sravanabelagola
179.	K. R. Srinivasulu Nayadu	... Shanthinagar
180.	K. Sriramulu	... Gandhinagar
181.	H. R. Sriramulu	... Gangavathi
182.	G. K. Subbaiah	... Virajpet
183.	B. Subbayya Shetty	... Surathkal
184.	Subhash Asture	... Bhalki
185.	Subhash Shankershetty Patil	... Kamalapur
186.	K. Subramanya Gowda	... Belthangady
187.	*Smt. Sumati Bhalachandra Madiman*	... Dharwar Rural

	Name	*Constituency*
	Sriyuths :	
188.	D. Suryanarayana	... Krishnaraja
189.	A. M. Suryanarayana Gowda	... Yelahanka
190.	F. S. Taware	... Haveri
191.	K. R. Thimmarayappa	... Pavagada
192.	Vatal Nagaraj	... Chamarajpet
193.	B. S. Veerabhadrappa	... Kudligi
194.	K. N. Veerappa Gowda	... Sringeri
195.	M. Veerappa Moily	... Karkal
196.	J. Venkatappa	... Sidlaghatta
197.	D. Venkataramaiah	... Kolar
198.	C. V. Venkatarayappa	... Chickballapur
199.	*Smt. Vijaya Desai*	... Chitapur
200.	M. Virupakshappa Shivappa	... Koppal
201.	Vishwanath Reddy	... Yadgir
202.	V. V. Wai	... Shirahatti
203.	*Smt. Winnifred F. Fernandes*	... Coondapur
204.	K. Yenkatappa	... Shikaripur
205.	Azeez Sait	... Narasimharaja
206.	M. Mallikarjunaswamy	... Malavalli (S.C.)
207.	K. T. Rathod	... Bijapur
208.	Abdul Khudus Anwar	... Bhadravati
209.	K. Abdul Subhan	... Tumkur
210.	Amir Rahamathulla Khan	... Basavanagudi
211.	B. G. Banakar	... Hirekerur
212.	Bapu Gowda Rayappa	... Shahapur

3-00 P.M.

Election of Speaker

ಅಧ್ಯಕ್ಷರು.—ಮಾನ್ಯ ಸದಸ್ಯರಲ್ಲಿ ಯಾರಾದರೂ ಪ್ರಮಾಣವಚನ ತೆಗೆದುಕೊಳ್ಳದೆ ಇರುವವರು ಇದ್ದರೆ ದಯವಿಟ್ಟು ಬಂದು ಪ್ರಮಾಣವಚನ ತೆಗೆದುಕೊಳ್ಳಬೇಕು.

ಯಾರೂ ಇಲ್ಲವೆಂದು ಕಾಣುತ್ತದೆ. ಆದ್ದರಿಂದ ಮುಂದಿನ ಕಾರ್ಯಕ್ರಮ ಅಧ್ಯಕ್ಷರ ಚುನಾವಣೆ ಈಗ ಅದನ್ನು ತೆಗೆದುಕೊಳ್ಳೋಣ.

ಅಧ್ಯಕ್ಷ ಸ್ಥಾನಕ್ಕೆ ಮೂವರ ಹೆಸರುಗಳನ್ನು ಸೂಚಿಸುವ ನಾಲ್ಕು ಪ್ರಸ್ತಾವಗಳಿವೆ. ಕಾರ್ಯಕ್ರಮದ ಪಟ್ಟಿಯಲ್ಲಿ ಸೂಚಿಸಲಾದ ಕ್ರಮದಲ್ಲಿಯೇ ಅವರ ಹೆಸರಿನಲ್ಲಿರತಕ್ಕ ಪ್ರಸ್ತಾವಗಳನ್ನು ಸೂಚಿಸಲು ಸೂಚಕರ ಹೆಸರುಗಳನ್ನು ಕರೆಯುತ್ತೇನೆ. ಎಲ್ಲ ಪ್ರಸ್ತಾವಗಳನ್ನು ಸೂಚಿಸಿದ ನಂತರ ಅವುಗಳನ್ನು ಒಂದಾದ ನಂತರ ಒಂದರಂತೆ ಮತಕ್ಕೆ ಹಾಕುತ್ತೇನೆ. ಯಾವುದಾದರೊಂದು ಪ್ರಸ್ತಾವವನ್ನು ಸಭೆಯು ಅಂಗೀಕರಿಸಿದಲ್ಲಿ ಇತರ ಪ್ರಸ್ತಾವಗಳನ್ನು ಸಭೆಯ ಮತಕ್ಕೆ ಹಾಕಲಾಗುವುದಿಲ್ಲ.

ಶ್ರೀ ಟಿ. ಆರ್. ಶಾಮಣ್ಣ.—ಅವರ ಹೆಸರಿನಲ್ಲಿರುವ ಪ್ರಸ್ತಾವವನ್ನು ಸೂಚಿಸುವಂತೆ ಕೋರಿ ಪ್ರಸ್ತಾವವನ್ನು ಅನುಮೋದಿಸುವಂತೆ ಶ್ರೀ ಬಾಪೂಗೌಡ ಅವರನ್ನು ಕೋರುತ್ತೇನೆ.

Sri T. R. SHAMANNA (Fort).—Sir, I move "That Sri K. M. Naganna be elected as Speaker of the Legislative Assembly."

Sri C. M. ARUMUGHAM.—Sir, I rise to a Point of Order. This notice of proposing the name of Sri K. M. Naganna was given by Sri T. R. Shamanna yesterday. It is a question of participating in the proceedings of the Assembly. A member, unless he takes the oath or affirmation, cannot take part in the proceedings of the Assembly. Both Sri Naganna and Sri Shamanna have taken oath today. Therefore, the notice should have been given today and the election should take place tomorrow only. The notice was given yesterday by Sri T. R. Shamanna even before taking the oath in the Assembly. He was not a member of this House yesterday. As per rules of Procedure, one becomes a member of the Assembly when he takes the oath, otherwise he is a member-elect. Election of Speaker is a part of the proceedings of the House. Therefore I submit that the procedure followed so far with regard to the election of Speaker is void and should be cancelled, and that the election of Speaker should not be held today. I request you to give a ruling on this.

Sri K. H. PATIL (Minister for Agriculture and Forests).—One becomes a member the moment the certificate of election has been given and he has the right to participate in the Assembly. I am sure my friend Sri Arumugam will agree that today all the persons have taken oath and it is only after taking oath that the name has been proposed and duly seconded. The same procedure has been followed in the case of Smt. K. S. Nagarathnamma, who has been proposed for the Speakership.

Sri C. M. ARUMUGHAM.—Sir, what I said was, proposing the name of any person for the election of Speaker is a matter of participating in the proceedings of the House. The Speaker's election is entirely the responsibility of this House. I am not questioning as to how some members have become Ministers. My point is that unless a member takes the oath, he cannot participate in the proceedings, and the election of the Speaker is a part of the proceedings.

Sri H. N. NANJE GOWDA.—(Minister of State for Major Irrigation) Sir, I would like to draw your kind attention to rule 7 (1), which says :—

> "The election of a Speaker shall be held on such date as the Governor may fix, and the Secretary shall thereupon send to every member notice of the date so fixed."

The date for election of the Speaker is fixed by the Governor. It is not the precedent of this House to question whether the Governor has done a good thing or a bad thing.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಈ ಸಭೆಯ ಸದಸ್ಯರು ಯಾವಾಗ ಆಗುತ್ತಾರೆಂದರೆ ಈ ಸಭೆಯಲ್ಲಿ ಪ್ರಮಾಣವಚನವನ್ನು ತೆಗೆದುಕೊಂಡಮೇಲೆ ಮಾತ್ರ ಈ ಸಭೆಯ ಸದಸ್ಯರಾಗುತ್ತಾರೆ. ಅದಕ್ಕೆ ಮುಂಚೆ ನೀವೇ ಆಗಲೀ ಯಾರೇ ಆಗಲಿ ಈ ಸಭೆಯ ಸದಸ್ಯರೆಂಬುದಾಗಿ ಪರಿಗಣಿಸುವುದಿಲ್ಲ. ಹಾಗಿರಬೇಕಾದರೆ ಮೊದಲೇ ನಮಗೆ ನೋಟೀಸ್ ಕೊಡಬೇಕಾಗುತ್ತದೆ.

ಆದ್ದರಿಂದ ಈ ದಿನದ ಪ್ರಶ್ನೆವನೆಗಳು ವ್ಯಾಲಿಡ್ ಆಗಿರುವುದಿಲ್ಲ. ಕಾನೂನಿಗೆ ವಿರೋಧವಾಗಿವೆ ಮತ್ತು ರೂಲ್ಸ್ ಆಫ್ ಪ್ರೊಸೀಜರ್‌ಗೂ ವಿರೋಧವಾಗುತ್ತವೆ.

ಶ್ರೀ ಕೆ. ಎಚ್. ಪಾಟೀಲ್.—ಶ್ರೀಮಾನ್ ಕೃಷ್ಣನ್ ಅವರು ಹೇಳಿದ್ದರೊಳಗೆ ಸ್ವಲ್ಪ ವ್ಯತ್ಯಾಸ ವಿದೆಯೆಂದು ನನಗನ್ನಿಸುತ್ತದೆ. ಎರೆಕ್ಷನ್ ಅಧಿಕಾರಿಗಳು ಸದಸ್ಯರುಗಳಿಗೆ ಸರ್ಟಿಫಿಕೇಟ್ ಕೊಟ್ಟ ದಿನವೇ ಮೆಂಬರ್ ಆಗುತ್ತಾರೆ. ಈ ಸಭೆಯಲ್ಲಿ ಭಾಗವಹಿಸುವುದಕ್ಕೆ ಅರ್ಹರಾಗಿರುತ್ತಾರೆ. ಆದ್ದರಿಂದ ಪ್ರಾಮುಖ್ಯವಾಗಿ ಅವರು ಈ ಸಭೆಯಲ್ಲಿ ಯಾವುದಾದರೂ ಒಂದು ಸೂಚನೆ ಮಾಡುವುದು ಮತ್ತು ಅದನ್ನು ಅನುಮೋದನೆ ಮಾಡುವುದರಲ್ಲಿ ಏನೂ ಅನುಮಾನವಿಲ್ಲ. ಈಗ ಮಾಡಿರತಕ್ಕದ್ದು ಸಮರ್ಪಕವಾಗಿದೆ. ಈ ಸಭೆಯಲ್ಲಿ ಅವರು ಎಂ. ಎಲ್. ಎ. ಆಗಿ ಪ್ರಮಾಣವಚನ ತೆಗೆದುಕೊಂಡನಂತರ ಸೂಚನೆ ಮಾಡಿದ್ದಾರೆ, ಮತ್ತು ಅನುಮೋದನೆ ಮಾಡಿದ್ದಾರೆ. ಆದ್ದರಿಂದ ಅವರ ಸೂಚನೆ ಸರಿಯಾಗಿದೆ, ನ್ಯಾಯವಾಗಿದೆ. The notice has been given to you; the agenda has been sent to you. Is it to be sent to the non-members? It can be sent only to members. Members are those who have got the certificates from the Returning officers. Members are expected to do the ministerial duty without taking the oath also. The mo nent they take oath they can participate in the Assembly. Therefore, it is perfectly in order, legal and therefore it should be accepted.

Sri S. BANGARAPPA (Sorab).—Sir, I rise to a point of order. Rule 7 (1) says :

> "The election of a Speaker shall be held on such date as the Governor may fix, and the Secretary shall thereupon send to every member notice of the date so fixed."

So, it is the bounden duty of the Secretary to send notice to each member. So, if any member has not received such a notice from the Secretary, the proceedings will be illegal. The Hon. Friend on my right side has not received the notice. ಅದೇ ರೀತಿಯಲ್ಲಿ ಅನೇಕ ಜನ ಸದಸ್ಯರಿಗೆ ನೋಟೀಸು ತಲುಪಿದೆಯೋ ಇಲ್ಲವೋ ಗೊತ್ತಿಲ್ಲ. ರೂಲ್ 7, ಕ್ಲಾಸ್ 1ರ ಪ್ರಕಾರ ನೋಟೀಸನ್ನು ಕಳುಹಿಸಲೇಬೇಕಾಗುತ್ತದೆ. ನೋಟೀಸನ್ನು ಕಳುಹಿಸದೆ ಇರುವುದರಿಂದ ಅಧ್ಯಕ್ಷರ ಚುನಾವಣೆಯನ್ನು ನಡೆಸಿದರೆ ಅದು ಇಲ್ಲೀಗರ್ ಆಗುತ್ತದೆ. ಆದ್ದರಿಂದ ಈಗ ಚುನಾವಣೆಯನ್ನು ನಡೆಸುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಜೆ).—ನನ್ನ ಹೆಸರನ್ನು ಸೂಚಿಸಿದವರು ಶ್ರೀ ಟಿ. ಆರ್. ಶಾಮಣ್ಣ ಅವರು. ಆ ಸೂಚನೆಯನ್ನು ಯಾರೂ ಅನುಮೋದಿಸಿಲ್ಲ. ಸೂಚನೆಯನ್ನು ಅನುಮೋದಿಸಿದರೆ ಮಾತ್ರ ಅದು ಸಭೆಯ ಮುಂದೆ ಬರುತ್ತದೆ. ವಿಷಯ ಸಭೆಯ ಮುಂದೆ ಇಲ್ಲದೆ ಇರುವುದರಿಂದ ಕ್ರಿಯಾರೋಪ ಬರುವುದಿಲ್ಲ. The point of order raised by my Hon. Friend Sri Arumugham is out of order. A point of order should not be argumentative. Besides, it should say what the point is. On these two counts, the point of order is out of order.

Sri H. M. CHANNABASAPPA (Minister for Public Works).—Sir, I am sorry to say that there appears to be a certain misapprehension about this matter. Immediately after the election, the Returning Officer issues a certificate that so and so has been elected from such and such a constituency. Immediately after that, the Government issues a notification declaring him to be the member of the Assembly. So, by virtue of the notification he becomes a member of the Assembly. To become a member of the Assembly is one thing and to participate in the Assembly proceedings is another thing. Here, under Rule 7 of the

(SRI H. M. CHANNABASAPPA)

Rules of Procedure and Conduct of Business, it is clearly stated that the nomination has to be filed by a member on the previous day. The Governor in the exercise of his powers has iseued the notification and in accordance with that. a member of the Assembly has nominated another member to be the Speaker. Thereore, it is perfectly in order that a member may nominate another member to be the Speaker of the Assembly. And in order that a member may participate in the proceedings it is necessary that he should take the oath as required under the Constitution. After having been elected and duly notified to be the member of the Assembly, nominations have been called for and have been made. After making affirmation of oath, it is open to any member to participate in the proceedings of this Assembly. Therefore, I humbly submit that there is no substance in the point of order raised by Sri Arumugham.

ಶ್ರೀ ಕೆ. ಎಂ. ನಾಗಣ್ಣ.—ನಾನು ಎತ್ತಿರುವ ಕ್ರಿಯಾಲೋಪದ ಬಗ್ಗೆ ತಾವು ರೂಲಿಂಗ್ ದಯಪಾಲಿಸಬೇಕು, ಅದಾದಮೇಲೆ ಚರ್ಚೆ ನಡೆಯಬೇಕು. ಕ್ರಿಯಾಲೋಪವನ್ನು ಎತ್ತಿದ್ದು, ಅದರ ಮೇಲೆ ಅಧ್ಯಕ್ಷರು ರೂಲಿಂಗ್ ಕೊಡುವವರೆಗೂ ಚರ್ಚೆ ನಡೆಯುವ ಹಾಗೆಯೇ ಇಲ್ಲ. ಆದ್ದರಿಂದ ನನ್ನ ಕ್ರಿಯಾಲೋಪದ ಬಗ್ಗೆ ರೂಲಿಂಗ್ ಕೊಡಬೇಕು. My contention is that nobody should be allowed to speak on the merits of the resolution.

Sri C. M. ARUMUGHAM.—The hon. Member Sri Naganna cannot direct in that way. The Chair can use its discretion and can allow or disallow.

Sri K. M. NAGANNA.—The Speaker has certain limits.

Sri C. M. ARUMUGHAM.—Sir, I was submitting that proposing the name of a person to be the Speaker is part of the proceedings of the House. Whatever paper was sent by a member yesterday in connection with the election of the Speaker, which is fixed for today, is part of the proceedings. Of Course, Sri Channabasappa knows the rules of procedure very well and he can argue for and against. Members of the Assembly should be given an opportunity to second the name of a member for speakership after taking oath in the House. You, Sir, are going to give a very important ruling on this issue. I request you to kindly study all aspects of the matter, and then give a considered ruling. Till then you may adjourn the House if necessary.

Sri B. SUBBAYYA SHETTY (Suratkal).—Sir, a person becomes a member of the Legislative Assembly as soon as the certificate of election is issued to him. Regarding the election of the Speaker, there are two portions : one is to give a notice as contemplated under rule 7 (2). Any member, who has been elected, can give notice to the Secretary. My submission is that giving of notice is not part of the proceedings ; it, however, becomes part of the proceedings after the oath is taken. If a member proposes the name of a person for speakership and another person seconds it and then election takes place, then that becomes part of the proceedings. Hence my submission is that the present mode of election is valid.

SRI S. M. SHEERANALY CHANDRASEKHAR.—The hon. member Sri S. Bangarappa must be aware of the fact that Section 15 of the Evidence Act clearly says that registered notice is not necessary. If delivery is proved, it is enough. Every hon. member has got notice in his room. When there is gazette notification and certificate issued to the hon. members they have become members without taking any oath. That is my submission.

ಶ್ರೀ ಎಸ್. ಬಂಗಾರಪ್ಪ.—ಎವಿಡೆನ್ಸ್ ಆಕ್ಟ್ ಪ್ರಕಾರ ನೋಟೀಸ್ ಕೊಡುವ ವಿಷಯ ನನಗೆ ಮಾನ್ಯ ಸದಸ್ಯರು ಹೇಳಿ ಕೊಡಬೇಕಾಗಿಲ್ಲ, ಆ ಸೆಕ್ಷನ್‌ಗಳೆಲ್ಲ ಇಲ್ಲಿ ಬರುವುದಿಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ಈ ಸಭೆಯ ಸದಸ್ಯರು ಹೌದೋ ಅಲ್ಲವೋ ಎನ್ನುವ ವಿಷಯದಲ್ಲಿ ಪೀಪಲ್ಸ್ ರೆಪ್ರೆಸೆಂಟೇಷನ್ ಆಕ್ಟಿನ ಸೆಕ್ಷನ್ 73ರ ಪ್ರಕಾರ ನೋಟಿಫಿಕೇಷನ್ ಆದ ನಂತರ ಎಲ್ಲರೂ ಇಲ್ಲಿ ಸದಸ್ಯರಾದರು ಎಂದು ನನ್ನ ಅಭಿಪ್ರಾಯ. ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸುವುದಕ್ಕೆ ಮಾತ್ರ ಇಲ್ಲಿ ಪ್ರಮಾಣವಚನವನ್ನು ಸ್ವೀಕರಿಸಬೇಕಾಗಿದೆ. ಕಾರ್ಯದರ್ಶಿಯವರು ನೋಟೀಸನ್ನು ಕಳುಹಿಸುತ್ತಾರೆ. ಅದೆಲ್ಲ ಈ ಸಭೆಯ ಕಾರ್ಯಕಲಾಪದ ಭಾಗವಾಗುವುದಿಲ್ಲ. ಆದು ಸೆಕ್ರೆಟೇರಿಯಟ್‌ನಲ್ಲಿ ಆಗತಕ್ಕ ಕೆಲಸ ಮಾತ್ರ. ಪ್ರಮಾಣವಚನವನ್ನು ಸ್ವೀಕಾರ ಮಾಡುವುದರಿಂದ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಲು ಅರ್ಹತೆ ಬರುತ್ತದೆ. 73ನೇ ಸೆಕ್ಷನ್ ಪ್ರಕಾರ ನೋಟಿಫಿಕೇಷನ್ ಆದಕೂಡಲೇ ನಾವೆಲ್ಲ ಸದಸ್ಯರಾದೆವು. ಹಾಗಿಲ್ಲದೆ ಹೋದರೆ ನಮಗೆ ಕಾರ್ಯದರ್ಶಿಯವರು ಸಮನ್ಸ್ ಕಳುಹಿಸುವುದಕ್ಕೆ ಅವಕಾಶವಿಲ್ಲ. ರಾಜ್ಯಪಾಲರು ಈ ದಿನ ಚುನಾವಣೆ ನಡೆಯಬೇಕು ಎಂದು ತೀರ್ಮಾನಿಸಿ ಆಜ್ಞೆ ಮಾಡಿದ್ದಾರೆ. ಪ್ರತಿ ಚುನಾವಣೆಯಾದ ನಂತರ ಅಧ್ಯಕ್ಷರ ಚುನಾವಣೆ ಕೂಡ ಆಗಲೇಬೇಕು. ಇದು ಒಂದು ಸತ್ಸಂಪ್ರದಾಯ.

ಶ್ರೀ ಎಸ್. ಬಂಗಾರಪ್ಪ.—ರೂಲ್ 7(1)ರ ಪ್ರಕಾರ ನೋಟೀಸ್ ತಲುಪದೆ ಇದ್ದಾಗ ಏನು ಮಾಡಬೇಕು ಎನ್ನುವುದಕ್ಕೆ ಉತ್ತರ ಕೊಟ್ಟು ಮುಂದೆ ಮಾತನಾಡಬಹುದು.

ಶ್ರೀ ಎಚ್. ಎನ್. ನಂಜೇಗೌಡ.—ಚುನಾವಣೆ ಇಂಥ ದಿನ ನಡೆಯಬೇಕು ಎಂದು ರಾಜ್ಯಪಾಲರು ಸೂಚಿಸಿ ತಮಗೆ ಅನುಮತಿಯನ್ನು ಕೊಟ್ಟಿರುವುದರಿಂದ ತಾವು ನೋಟೀಸುಗಳನ್ನು ಕಳುಹಿಸಿಕೊಟ್ಟಿದ್ದೀರಿ ಎಂದು ಭಾವನೆ ಮಾಡುತ್ತೇನೆ. ರಾಜ್ಯಪಾಲರು ಅಧ್ಯಕ್ಷರ ಚುನಾವಣೆಗೆ ಈ ದಿನವನ್ನು ನಿಗದಿ ಮಾಡಿದ್ದಾರೆ. ಈಗ ಮಾನ್ಯ ಸದಸ್ಯರು ಏನು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ ಅದರಲ್ಲಿ ತಿರುಳಿಲ್ಲ, ಅವರು ಹೇಳಿದಂತೆ ಯಾವ ವಿಧಿಯನ್ನೂ ಕೂಡ ಮೀರಿಲ್ಲ, ಎಲ್ಲ ವಿಧಿಪೂರ್ವಕವಾಗಿ, ಸಮರ್ಪಕವಾಗಿ ಇರುವುದರಿಂದ ಕ್ರಿಯಲೋಪವನ್ನು ತಳ್ಳಿ ಹಾಕಿ ಚುನಾವಣೆಯನ್ನು ನಡೆಸಬಹುದು ಎಂದು ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ (ವೇಮಗಲ್).—ಇಲ್ಲಿಯವರೆಗೂ ನನಗೆ ಒಂದು ಟೆಲಿಗ್ರಾಂ ಬಟ್ಟರೆ ಮತ್ತೇನೂ ಬಂದಿಲ್ಲ. ಅಧ್ಯಕ್ಷರ ಚುನಾವಣೆ ವಿಷಯ ನನಗೆ ಗೊತ್ತಿಲ್ಲ. ನಾನು ಈಗತಾನೇ ಸಭೆಯಲ್ಲಿ ಪ್ರಮಾಣವಚನ ತೆಗೆದುಕೊಂಡಿದ್ದೇನೆ. ಈಗಲೂ ಪ್ರಮಾಣ ಮಾಡಿ ಹೇಳುತ್ತೇನೆ, ಯಾವ ನೋಟೀಸುಕೂಡ ಬಂದಿಲ್ಲ. ಸಭೆಯ ಸದಸ್ಯನಾಗಿ, ನನಗೆ ಗೊತ್ತಿಲ್ಲದೆ ಇರುವ ವಿಷಯದಲ್ಲಿ ನಾನು ಭಾಗವಹಿಸುವುದಕ್ಕೆ ಕಷ್ಟವಾಗುತ್ತದೆ. ರೂಲ್ಸ್ ಪ್ರಕಾರ ಪ್ರತಿಯೊಬ್ಬ ಸದಸ್ಯನಿಗೂ ನೋಟಿಫಿಕೇಷನ್ ತಲುಪಬೇಕು ಎಂದಿದೆ. ಆದ್ದರಿಂದ ಸಭೆಯಲ್ಲಿ ಚುನಾವಣೆಯನ್ನು ನಡೆಸುವುದಕ್ಕೆ ಹೊರಡುವುದು ಖಂಡಿತವಾಗಿ ಕಾನೂನು ಬಾಹಿರವಾಗುತ್ತದೆ. ಚುನಾವಣೆಯನ್ನು ಖಂಡಿತ ಮಾಡಕೂಡದೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ವಿಶ್ವನಾಥರೆಡ್ಡಿ (ಯಾದ್ಗಿರ್).—ಪಾಯಿಂಟ್ ಆಫ್ ಆರ್ಡರ್ ಮೇರೆ ಪರವಾಗಿ ಮತ್ತು ವಿರೋಧವಾಗಿ ಮಾತನಾಡಿದ್ದನ್ನು ಕೇಳಿದ್ದೇನೆ. ಆ ದೃಷ್ಟಿಯಿಂದ ಇದರಲ್ಲಿ ಎರಡು ಸೂಚನೆಗಳಿವೆ. ಒಂದು, ಪ್ರಮಾಣ ವಚನ ಸ್ವೀಕರಿಸುವವರೆಗೆ ಸದಸ್ಯನು ಸದಸ್ಯನಾಗುತ್ತಾನೆಯೋ ಇಲ್ಲವೋ ಎಂಬುದು. ಎರಡನೆಯದು ಪ್ರಪೋಸ್ ಮಾಡುವ ಅಧಿಕಾರ ಇದೆಯೋ ಇಲ್ಲವೋ ಎನ್ನುವುದು. ಪ್ರತಿಯೊಬ್ಬ ಸದಸ್ಯನಿಗೂ ಕಾರ್ಯದರ್ಶಿಯವರು ಚುನಾವಣೆಯ ದಿನದ ಬಗ್ಗೆ ನೋಟೀಸನ್ನು ಕಳುಹಿಸಬೇಕು ಎಂದಿದೆ. ಇದು ಬಹಳ ಮಹತ್ವದ ವಿಷಯ. ಕಾರ್ಯದರ್ಶಿಯವರು ಕಳುಹಿಸಿದ ನೋಟೀಸ್ ಮುಟ್ಟಿತೇ ಎನ್ನುವ ವಿಷಯ ಬೇರೆ. ಕಾರ್ಯದರ್ಶಿಯವರು 24ನೇ ತಾರೀಖಿನ ದಿನ ಮೀಟಿಂಗ್ ಇದೆ ಎನ್ನುತಕ್ಕ ಸೂಚನೆಯನ್ನು ಟೆಲಿಗ್ರಾಂ ಮೂಲಕ ಕಳುಹಿಸಿದ್ದಾರೆ. ಅಂದಮೇಲೆ 24ನೇ ತಾರೀಖಿನವರೆಗೂ ನಾವು ಇಲ್ಲಿಗೆ ಬರುವುದಿಲ್ಲ ಎನ್ನುವ ಮಾತು ಪರ್ಯಾಯವಾಗಿ ಅರ್ಥವಾಗುತ್ತದೆ,

(ಶ್ರೀ ವಿಶ್ವನಾಥರೆಡ್ಡಿ)

ನಮಗೆ ಮುಟ್ಟುವಂತೆ ನೋಟೀಸ್‌ಗಳನ್ನು ನಮ್ಮ ಊರುಗಳಿಗೆ ಕಳುಹಿಸಿದ್ದಾವೆಯೋ ಇಲ್ಲವೋ ಎನ್ನುವುದನ್ನು ವಿಚಾರಮಾಡಬೇಕಾಗುತ್ತದೆ. ಇಂಥ ನೋಟೀಸ್ ಯಾರಿಗಾದರೂ ಮುಟ್ಟಿದೆಯೋ ಇಲ್ಲವೋ, ನನಗಂತೂ ಮುಟ್ಟಿಲ್ಲ. ನೋಟೀಸ್ ಕೊಟ್ಟರೇ ಇಲ್ಲವೇ ಎನ್ನುವುದು ಮಹತ್ವದ್ದು. ಈ ಎರಡು ಪಾಯಿಂಟ್ಸ್ ಯೋಚನೆ ಮಾಡಿ ತೀರ್ಮಾನ ಕೊಡಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

ನಾನು ತಮ್ಮ ಮೂಲಕ ಸದನದ ನಾಯಕರಿಗೆ ಒಂದು ವಿಷಯವನ್ನು ವಿನಂತಿ ಮಾಡಿಕೊಳ್ಳುತ್ತೇನೆ. ಮಂತ್ರಿಗಳು ತಡವಾಗಿ ಬಂದರೆ ಅವರಿಗೆ ಮಧ್ಯದಲ್ಲಿ ಅವಕಾಶ ಕೊಡಬಾರದು, ಆ ಮೇಲೆ ಅವಕಾಶ ಕೊಡಬೇಕು ಎನ್ನುವ ಸತ್ಸಂಪ್ರದಾಯವನ್ನು ಹಾಕಿದ್ದಕ್ಕಾಗಿ ಅವರಿಗೆ ನಾನು ಅಭಾರ ಮನ್ನಿಸುತ್ತೇನೆ, ಅಂಥ ಸತ್ಸಂಪ್ರದಾಯಗಳನ್ನು ಈ ಸದನ ಇಡೀ ಭಾರತಕ್ಕೆ ಮಾರ್ಗದರ್ಶನವಾಗುವಂಥ ರೀತಿಯಲ್ಲಿ ಹಾಕಬೇಕು ಎನ್ನುವ ಭಾವನೆ ನನಗೆ ಇದೆ. ಆ ದೃಷ್ಟಿಯಿಂದ ಅಧ್ಯಕ್ಷರ ಚುನಾವಣೆಯಾಗುವಾಗ ಇಡೀ ಮನೆಗೆ, ಎಲ್ಲರಿಗೂ ಒಮ್ಮತವಾಗತಕ್ಕಂಥ ಒಬ್ಬ ಸದಸ್ಯರನ್ನು ಅಧ್ಯಕ್ಷರನ್ನಾಗಿ ಆರಿಸಿದರೆ ಚೆನ್ನಾಗಿರುತ್ತದೆ. ಇಗ್ಲೆಂಡಿನಲ್ಲಿ ಪಾರ್ಲಮೆಂಟರಿ ಡೆಮೋಕ್ರೆಸಿಯಲ್ಲಿ ಒಂದು ಸತ್ಸಂಪ್ರದಾಯವನ್ನು ಆಚರಿಸಿಕೊಂಡು ಬರುತ್ತಿದ್ದಾರೆ. ಒಮ್ಮೆ ಅಧ್ಯಕ್ಷರಾದವರು ಕೊನೆಯವರೆಗೂ ಅಧ್ಯಕ್ಷರಾಗಿಯೇ ಇರುತ್ತಾರೆ. ಅವರ ವಿರುದ್ಧ ಚುನಾವಣೆಯಲ್ಲಿ ಯಾರೂ ಸ್ಪರ್ಧಿಸಬಾರದು ಎನ್ನುವ ಒಂದು ಸತ್ಸಂಪ್ರದಾಯವಿದೆ. ಅಂಥ ಸತ್ಸಂಪ್ರದಾಯವನ್ನು ಹಾಕಿ ಒಳ್ಳೆಯ ಅಧ್ಯಕ್ಷರನ್ನು ಆರಿಸಬೇಕು. ಆದರೆ ಸಭಾ ನಾಯಕರು ಈ ಭಾಗದ ಸದಸ್ಯರನ್ನು ಸಮಾಲೋಚನೆ ಮಾಡಿಲ್ಲ. ಅಧ್ಯಕ್ಷರನ್ನು ಮತ್ತು ಉಪಾಧ್ಯಕ್ಷರನ್ನು ಆರಿಸುವಾಗ ವಿರೋಧಪಕ್ಷದ ಸದಸ್ಯರೊಡನೆ ಸಭಾನಾಯಕರು—ಸಮಾಲೋಚನೆ ನಡೆಸಿ ನಂತರ ಹೆಸರುಗಳನ್ನು ಇಲ್ಲಿ ಸೂಚಿಸುವಂತಹ ಸಂತ'ಸಂಪ್ರದಾಯಗಳನ್ನು ಪಾಲಿಸಿದರೆ ಮುಂದೆಯೂ ಸಹ ಈ ಸಭೆಗೆ ಗೌರವ ಬರುತ್ತದೆಂಬ ಮಾತನ್ನು ನಾನು ಇಲ್ಲಿ ಹೇಳುತ್ತಿದ್ದೇನೆ. ಆದಕಾರಣ ಈಗ ಅಧ್ಯಕ್ಷರ ಚುನಾವಣೆಯನ್ನು ತಡೆದು ಮುಂದೆ ವಿರೋಧಪಕ್ಷದ ಸದಸ್ಯರೊಡನೆ ಮಾತುಕತೆ ನಡೆಸಿ ಎಲ್ಲರಿಗೂ ಒಪ್ಪಿಗೆಯಾಗುವಂತ ಪವರ ಹೆಸರನ್ನು ಇಲ್ಲಿ ಸೂಚಿಸಬೇಕೆಂದು ಹೇಳುತ್ತೇನೆ.

3-20 P.M.

† ಶ್ರೀ ಡಿ. ದೇವರಾಜ ಅರಸ್ (ಮುಖ್ಯ ಮಂತ್ರಿಗಳು).—ಸತ್'ಸಂಪ್ರದಾಯವನ್ನು ಪಾಲಿಸಬೇಕಾದರೆ ಒಂದೊಂದು ವಿಚಾರಕ್ಕೂ ಮತ್ತೆ ಮತ್ತೆ ಹೇಳಿದ್ದನ್ನೇ ಮಾತನಾಡುವುದು ಅಷ್ಟು ಯೋಗ್ಯವಲ್ಲ. ಇದರಿಂದ ಕಾಲಹರಣವಾಗುತ್ತದೆ. ಎದುರುಪಕ್ಷದ ಮಾನ್ಯ ಸದಸ್ಯರಲ್ಲಿ ನನ್ನ ವಿನಂತಿ ಏನೆಂದರೆ ಸತ'ಸಂಪ್ರದಾಯವನ್ನು ಈಗಿನಿಂದಲೇ ಪ್ರಾರಂಭ ಮಾಡೋಣ. ನನ್ನ ಅಭಿಪ್ರಾಯದಲ್ಲಿ ಸತ'ಸಂಪ್ರದಾಯ ಇರಬೇಕಾದುದು ಯಾವುದಕ್ಕೆ ಎಂದರೆ, ಯಾವ ವಿಷಯಕ್ಕೆ ಎಷ್ಟು ಕಾಲ ತೆಗೆದುಕೊಳ್ಳಬೇಕು ಎಂಬುದು ಬಹಳ ಮುಖ್ಯವಾದ ವಿಷಯ. ಈ ಸಭೆ ನಡೆಯತಕ್ಕದ್ದು ದೇಶದ ಕಾರ್ಯಕಲಾಪಗಳನ್ನು ನಡೆಸುವುದಕ್ಕಾಗಿ. ದೇಶದ ಜನರಿಗೆ ಸಂಬಂಧಪಟ್ಟಂಥ ವಿಚಾರಗಳನ್ನು ತೀರ್ಮಾನ ಮಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಆದ್ದರಿಂದ ಕಾಲಕ್ಕೆ ನಾವು ಬಹಳ ಮಹತ್ವ ಕೊಡಬೇಕಾಗಿದೆ. ಈ ಒಂದು ವಿಚಾರಕ್ಕೆ ನಾವು ಇಷ್ಟೊಂದು ಕಾಲವನ್ನು ತೆಗೆದುಕೊಳ್ಳಬೇಕಾದ ಅಗತ್ಯವಿಲ್ಲ. ದಯಮಾಡಿ ಮಾನ್ಯಸದಸ್ಯರು ಇದನ್ನು ತಿಳಿದುಕೊಳ್ಳಬೇಕಾಗಿ ವಿನಂತಿ. ಮಾನ್ಯ ಅಧ್ಯಕ್ಷರ ಚುನಾವಣೆಯ ಬಗ್ಗೆ ಮಾನ್ಯ ಸದಸ್ಯರುಗಳು ಎತ್ತಿದಂಥ ಕ್ರಿಯಾಲೋಪಗಳಿಗೆ ಸಮಂಜಸವಾದ ರೀತಿಯಲ್ಲಿ ಉತ್ತರಗಳನ್ನು ಈಗಾಗಲೇ ಹೇಳಿದ್ದಾರೆಂದು ನನಗೆ ಗೊತ್ತಾಗಿದೆ. ಆದ್ದರಿಂದ ಈಗ ಮುಂದಿನ ಕಾರ್ಯ ನಡೆಯುವುದಕ್ಕೆ ಮಾನ್ಯ ಸದಸ್ಯರು ಅವಕಾಶ ಮಾಡಿಕೊಡುವುದರಿಂದ ಸತ'ಸಂಪ್ರದಾಯ ಬೆಳೆಯುತ್ತದೆಂದು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

†ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾನಾಯಕರು ಬಹಳ ದೊಡ್ಡ ಮಾತನ್ನು ಹೇಳಿದ್ದಾರೆ ಬಹಳ ಸಂತೋಷ. ಕಾಲಹರಣ ಮಾಡಬಾರದು, ಈ ಸದನವು ಜನತೆಯ ಅಶೋತ್ತರಗಳನ್ನು ಈಡೇರಿಸುವುದಕ್ಕೆ ಇದೆ, ಜನರ ಆಶೋತ್ತರಗಳನ್ನು ಈಡೇರಿಸುವುದಕ್ಕೆ ನಾವು ಬಂದಿದ್ದೇವೆಂಬ ಮಾತನ್ನು ನಾನು ಒಪ್ಪುತ್ತೇನೆ. ಅದಕ್ಕೆ ಸತ'ಸಂಪ್ರದಾಯದ ಮೂಲ ಬ್ಯಾನರ್ ಹಾಕಿ ಮಾತನಾಡಿರಿ. ಮಾನ್ಯ ಸದಸ್ಯರಾದ ಶ್ರೀ ವಿಶ್ವನಾಥ ರೆಡ್ಡಿಯವರು ಒಳ್ಳೆಯ ಸತ' ಸಂಪ್ರದಾಯವನ್ನು ಹಾಕಿಕೊಳ್ಳಬೇಕೆಂಬ ಬಗ್ಗೆ ಪ್ರಸ್ತಾಪ ಮಾಡಿದರು.

† Indicates that remarks or speeches have not been revised by the member concerned.

ಇಂಗ್ಲೆಂಡಿನಲ್ಲಿ ಕೂಡ ಸಭಾಧ್ಯಕ್ಷರನ್ನು ಚುನಾಯಿಸುವಾಗ ವಿರೋಧಪಕ್ಷದವರೊಡನೆ ಸಮಾಲೋಚನೆ ಮಾಡತಕ್ಕಂಥ ಸತ್‌ಸಂಪ್ರದಾಯವಿದೆ. ಈ ದೃಷ್ಟಿಯಿಂದ ನಮ್ಮ ಸಭಾನಾಯಕರು ನಮ್ಮಲ್ಲಿ ಸಭಾಧ್ಯಕ್ಷರನ್ನು ಚುನಾಯಿಸುವಾಗ ವಿರೋಧಪಕ್ಷದವರೊಡನೆ ಸಮಾಲೋಚನೆ ಬಗ್ಗೆ ಏನೂ ಹೇಳಲಿಲ್ಲ. ಇಂಗ್ಲೆಂಡಿನಲ್ಲಿ ಅನುಸರಿಸತಕ್ಕಂಥ ಒಂದು ಸತ್ ಸಂಪ್ರದಾಯವನ್ನು ನಮ್ಮ ಸಭಾನಾಯಕರು ಇಲ್ಲಿ ಏತಕ್ಕೆ ಮಾಡಬಾರದು ? ಈ ವಿಷಯದ ಬಗ್ಗೆ ಮಾನ್ಯ ಸಭಾನಾಯಕರು ಈಗಲಾದರೂ ಹೇಳಬೇಕು.

ಎರಡನೆಯ ವಿಷಯ ನೋಟೀಸ್ ಕೊಡತಕ್ಕ ವಿಷಯದಲ್ಲಿ ಪ್ರೊಸೀಜರ್ ಸರಿಯಾಗಿಲ್ಲ. ಆದ್ದರಿಂದ ಶ್ರೀಮಾನ್ ಆರ್‌ಮುಗಂ ಅವರು ಹೇಳಿದ ಹಾಗೆ ಅಧ್ಯಕ್ಷರ ಚುನಾವಣೆಯನ್ನು ಮಾಡುವುದು ಬೇಡ. ಇದನ್ನು ಮುಂದಕ್ಕೆ ಹಾಕಿ. ತಾತ್ಕಾಲಿಕವಾಗಿ ತಾವು ಅಧ್ಯಕ್ಷರಾಗಿದ್ದೀರಿ. ತಾವೇ ಇನ್ನೂ ಸ್ವಲ್ಪ ದಿವಸ ಇರಬಹುದು. ತಾವೇ ಈ ಸಭೆಯ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗಬಹುದು. ಸಭಾನಾಯಕರಿಗೆ ಎಷ್ಟು ಜವಾಬ್ದಾರಿ ಇದೆಯೋ ಅಷ್ಟೇ ಜವಾಬ್ದಾರಿ ಈ ಸದನವನ್ನು ಪ್ರವೇಶ ಮಾಡಿರತಕ್ಕ ನಮಗೂ ಇದೆ. ಆದ್ದರಿಂದ ಈಗಲಾದರೂ ತಾವು ಈ ಒಂದು ಸತ್‌ಸಂಪ್ರದಾಯವನ್ನು ಹಾಕಿಕೊಂಡು ಸಭಾಧ್ಯಕ್ಷರ ಚುನಾವಣೆಯ ಬಗ್ಗೆ ವಿರೋಧಪಕ್ಷದವರೊಡನೆ ಸಮಾಲೋಚನೆ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಮಾನ್ಯ ಮುಖ್ಯ ಮಂತ್ರಿಗಳು ತಿಳಿಸಿದರೆ ಅದು ಒಂದು ಒಳ್ಳೆಯ ಸತ್‌ಸಂಪ್ರದಾಯವನ್ನು ಹಾಕಿದಹಾಗಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಇದುವರೆಗೂ ಅನೇಕ ಮಾನ್ಯ ಸ್ನೇಹಿತರು ಕ್ರಿಯಾ ರೋಪವನ್ನು ಎತ್ತಿ, ಅಧ್ಯಕ್ಷರ ಚುನಾವಣೆಯಲ್ಲಿ ಅನುಸರಿಸತಕ್ಕಂಥ ಸತ್ ಸಂಪ್ರದಾಯದ ಬಗ್ಗೆ ಬಹಳವಾಗಿ ಹೇಳಿದ್ದಾರೆ. ಮಾನ್ಯ ವಿಶ್ವನಾಥರೆಡ್ಡಿಯವರು ಸತ್ ಸಂಪ್ರದಾಯದ ಬಗ್ಗೆ ಮಾತನಾಡಿದರು ನಾನಾದರೂ ತಿಳಿದುಕೊಂಡಿದ್ದೇನೆ, ಅಧ್ಯಕ್ಷರಾಗಿತಕ್ಕಂಥವರು ಯಾವ ಒಂದು ಪಾರ್ಟಿ ಲೇಬಲ್ ಅನ್ನೂ ಹಚ್ಚಿಕೊಳ್ಳದೇ ಇರುವವರು ಅಧ್ಯಕ್ಷರಾಗಬೇಕೆಂದು. ಈಗ ಅಧ್ಯಕ್ಷಸ್ಥಾನಕ್ಕೆ ಉಮೇದುವಾರರಾಗಿ ನಿಂತಿರುವ ಶ್ರೀಮಾನ್ ಕೆ. ಎಂ. ನಾಗಣ್ಣನವರು ಜನತಾ ಪಾರ್ಟಿಗೆ ರಾಜೀನಾಮೆಯನ್ನು ಕೊಟ್ಟಿಲ್ಲ. ಅದೇ ರೀತಿ ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರು ಮತ್ತು ಶ್ರೀ ಕೆ. ಎಚ್. ರಂಗನಾಥ್ ಅವರು ಕಾಂಗ್ರೆಸ್ 'ಆರ್' ಪಾರ್ಟಿಗೆ ರಾಜೀನಾಮೆ ಕೊಟ್ಟಿಲ್ಲ. ಈ ದೃಷ್ಟಿಯಿಂದ ಅವರ ನಾಮಿನೇಷನ್ ಪತ್ರವನ್ನು ಆಕ್ಸೆಪ್ಟ್ ಮಾಡಿಕೊಳ್ಳಲೇ ಬೇಕಾಗಿರಲಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರು ಈ ಸಭೆಯ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಸಹಕಾರ ನೀಡುವುದು ಈ ರೀತಿಯಲ್ಲ. ಆದ್ದರಿಂದ ಮಾನ್ಯ ಸದಸ್ಯರು ಸಹಕರಿಸಿ ಅಧ್ಯಕ್ಷರ ಚುನಾವಣೆಗೆ ಅವಕಾಶ ಮಾಡಿಕೊಡುವುದು ಒಳ್ಳೆಯದು.

ಅಧ್ಯಕ್ಷರು.—ಈಗ ನಾನು ಇದುವರೆಗೂ ಸನ್ಮಾನ್ಯ ಸದಸ್ಯರ ವಾದವಿವಾದಗಳನ್ನು ತಿಳಿದು ಕೊಂಡಿದ್ದೇನೆ. ಅಧ್ಯಕ್ಷರ ಚುನಾವಣೆಗೆ ಸಂಬಂಧಪಟ್ಟಂತೆ ಎಲ್ಲಾ ಪ್ರೊಸೀಜರ್ ಕೂಡ ಕ್ರಮ ಬದ್ಧವಾಗಿದೆ ಮತ್ತು ಕಾನೂನು ಬದ್ಧವಾಗಿದೆ, ಎಲ್ಲವೂ ಸರಿಯಾಗಿದೆ. ಆದ್ದರಿಂದ ಎಲ್ಲಾ ಕ್ರಿಯಾರೋಪಗಳನ್ನೂ ತಳ್ಳಿ ಹಾಕಿದ್ದೇನೆ. ಇನ್ನು ಮುಂದೆ ಅಧ್ಯಕ್ಷರ ಚುನಾವಣೆ ನಡೆಯಬಹುದು.

ಶ್ರೀಮಾನ್ ಟಿ. ಆರ್. ಶಾಮಣ್ಣನವರು ಅವರ ಪ್ರಸ್ತಾವವನ್ನು ಸೂಚಿಸಬೇಕೆಂದೂ ಅದನ್ನು ಶ್ರೀ ಬಾಪುಗೌಡರು ಅನುಮೋದಿಸುವಂತೆ ಕೋರುತ್ತೇನೆ.

Sri T. R. SHAMANNA (Fort).—Sir, I beg to move:

"That Sri K. M. Naganna be elected as Speaker of the Legislative Assembly".

Sri BAPUGOWDA (Shahapur).—Sir, I beg to second the motion moved by my friend Sri T. R. Shamanna.

ಅಧ್ಯಕ್ಷರು.—ಶ್ರೀ ಕೆ. ಎಂ. ನಾಗಣ್ಣ ಅವರನ್ನು ವಿಧಾನಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸ ಬೇಕು' ಎನ್ನುವ ಪ್ರಸ್ತಾವವನ್ನು ಮಂಡಿಸಲಾಗಿದೆ.

ಶ್ರೀ ಎನ್. ಪುಟ್ಟಸ್ವಾಮಿಗೌಡರು ಅವರ ಹೆಸರಿನಲ್ಲಿರುವ ಪ್ರಸ್ತಾವವನ್ನು ಸೂಚಿಸುವಂತೆ ಕೋರಿ ಈ ಪ್ರಸ್ತಾವವನ್ನು ಅನುಮೋದಿಸುವಂತೆ ಶ್ರೀ ಎಚ್. ಎಂ. ಚನ್ನಬಸಪ್ಪನವರನ್ನು ಕೋರುತ್ತೇನೆ.

Sri N. HUTCHAMASTHY GOWDA (Minister for Revenue).—Sir, I beg to move :

"That Smt. K. S. Nagarathnamma be elected as Speaker of the Legislative Assembly."

Sri H. M. CHANNABASAPPA (Minister for Public Works).—Sir, I beg to second the motion moved by my friend Sri N. Hutchamasthy Gowda.

ಅಧ್ಯಕ್ಷರು.—"ಶ್ರೀಮತಿ ಕೆ. ಎಸ್. ನಾಗರತ್ನಮ್ಮ ಅವರನ್ನು ವಿಧಾನ ಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸಬೇಕು" ಎನ್ನುವ ಪ್ರಸ್ತಾವವನ್ನು ಮಂಡಿಸಲಾಗಿದೆ.

ಶ್ರೀ ಎನ್. ಚಿಕ್ಕೇಗೌಡರು ಅವರ ಹೆಸರಿನಲ್ಲಿರತಕ್ಕ ಪ್ರಸ್ತಾವವನ್ನು ಸೂಚಿಸುವಂತೆಯೂ ಅದನ್ನು ಶ್ರೀ ಕೆ. ಹೆಚ್. ಪಾಟೀಲ್‌ರು ಅನುಮೋದಿಸುವಂತೆಯೂ ಕೋರುತ್ತೇನೆ.

Sri N. CHIKKEGOWDA (Minister of State for Animal Husbandry and Veterinary Services):—Sir, I beg to move :

"That Smt. K. S. Nagarathnamma be elected as Speaker of the Legislative Assembly."

Sri K. H. PATIL (Minister for Agriculture and Forests).—Sir, I beg to second the motion moved by my friend Sri N. Chikkegowda.

ಅಧ್ಯಕ್ಷರು.—"ಶ್ರೀಮತಿ ಕೆ. ಎಸ್. ನಾಗರತ್ನಮ್ಮ ಅವರನ್ನು ವಿಧಾನ ಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸಬೇಕು" ಎನ್ನುವ ಪ್ರಸ್ತಾವವನ್ನು ಮಂಡಿಸಲಾಗಿದೆ.

ಶ್ರೀ ಎ. ಎಂ. ಸೂರ್ಯನಾರಾಯಣಗೌಡ ಅವರು ಅವರ ಹೆಸರಿನಲ್ಲಿರತಕ್ಕ ಪ್ರಸ್ತಾವವನ್ನು ಸೂಚಿಸುವಂತೆ ಮತ್ತು ಅದನ್ನು ಶ್ರೀ ಎ. ಎಂ. ಬೆಳ್ಳಿಯಪ್ಪನವರು ಅನುಮೋದಿಸುವಂತೆ ಕೋರುತ್ತೇನೆ.

ಶ್ರೀ ಎ. ಎಂ. ಸೂರ್ಯನಾರಾಯಣಗೌಡ.—ನಾನು ನನ್ನ ಪ್ರಸ್ತಾವವನ್ನು ಸೂಚಿಸುವುದಿಲ್ಲ.

ಅಧ್ಯಕ್ಷರು.—ಪ್ರಸ್ತಾವ ಹೀಗಿದೆ. "ಶ್ರೀ ಕೆ. ಎಂ. ನಾಗಣ್ಣ ಅವರನ್ನು ಅಧ್ಯಕ್ಷರನ್ನಾಗಿ ಚುನಾಯಿಸಬೇಕು" ಪ್ರಸ್ತಾವದ ಪರವಾಗಿರುವವರು 'ಹೌದು' ಎಂದು ಹೇಳಬೇಕು, ವಿರೋಧ ಮಾಡುವವರು ಇಲ್ಲ, ಎಂಬುದಾಗಿ ಹೇಳಬೇಕಾಗಿ ಕೋರುತ್ತೇನೆ. (ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕಲಾಯಿತು) ಸಭೆಯು 'ಇಲ್ಲ' ಎಂಬುವವರ ಪರವಾಗಿದೆ ಎಂದು ನಾನು ಭಾವಿಸುತ್ತೇನೆ. ಪ್ರಸ್ತಾವವು ಬಿದ್ದುಹೋಯಿತು ಎಂದು ಘೋಷಿಸುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡರು ಸೂಚಿಸಿದ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಹೀಗಿದೆ: "ಶ್ರೀಮತಿ ಕೆ. ಎಸ್. ನಾಗರತ್ನಮ್ಮ ಅವರನ್ನು ಅಧ್ಯಕ್ಷರನ್ನಾಗಿ ಚುನಾಯಿಸ ಬೇಕು." ಈ ಪ್ರಸ್ತಾವದ ಪರವಾಗಿರುವವರು 'ಹೌದು' ಎಂದೂ, ವಿರೋಧವಾಗಿರುವವರು 'ಇಲ್ಲ' ಎಂಬುದಾಗಿ ಹೇಳಬೇಕಾಗಿ ಕೋರುತ್ತೇನೆ. ಸಭೆಯು ಹೌದು ಎನ್ನುವವರ ಪರವಾಗಿದೆ ಎಂದು ನಾನು ಭಾವಿಸುತ್ತೇನೆ.

ಈ ಪ್ರಸ್ತಾವವನ್ನು ಈ ಸಭೆಯು ಅಂಗೀಕರಿಸಿದ್ದು, ಶ್ರೀಮತಿ ಕೆ. ಎಸ್. ನಾಗರತ್ನಮ್ಮ ಅವರು ಅಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ.

ಈ ಪ್ರಸ್ತಾವವನ್ನು ಸಭೆಯು ಅಂಗೀಕರಿಸಿರುವುದರಿಂದ ಇನ್ನುಳಿದ ಪ್ರಸ್ತಾವವನ್ನು ಮತಕ್ಕೆ ಹಾಕಬೇಕಾಗಿಲ್ಲ.

ಶ್ರೀಮತಿ ನಾಗರತ್ನಮ್ಮ ಅವರನ್ನು ಸೂಚಕರಾದ ಶ್ರೀ ಹುಚ್ಚಮಾಸ್ತಿಗೌಡ ಹಾಗೂ ಅನುಮೋದಕರಾದ ಶ್ರೀ ಎಚ್. ಎಂ. ಚನ್ನಬಸಪ್ಪ ಅವರು ಶ್ರೀಮತಿ ನಾಗರತ್ನಮ್ಮ ಅವರನ್ನು ಅಧ್ಯಕ್ಷ ಪೀಠಕ್ಕೆ ಕರೆತರಬೇಕೆಂದು ಕೋರುತ್ತೇನೆ.

(ಶ್ರೀ ಎನ್. ಹುಚ್ಚಮಾಸ್ತಿ ಗೌಡ ಅವರು ಮತ್ತು ಶ್ರಿ ಎಚ್. ಎಂ. ಚನ್ನಬಸಪ್ಪ ಅವರು ಶ್ರೀಮತಿ ನಾಗರತ್ನಮ್ಮ ಅವರನ್ನು ಅಧ್ಯಕ್ಷ ಪೀಠಕ್ಕೆ ಕರೆದುಕೊಂಡು ಬಂದರು.)

ಮಾನ್ಯ ಅಧ್ಯಕ್ಷರಿಗೆ ಹಸ್ತರಾಘವ ಕೊಟ್ಟನಂತರ ತಾತ್ಕಾಲಿಕ ಅಧ್ಯಕ್ಷರು ಅವರಿಗೆ ಪೀಠವನ್ನು ಬಿಟ್ಟುಕೊಟ್ಟರು. ಶ್ರೀಮತಿ ನಾಗರತ್ನಮ್ಮ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

MADAM SPEAKER (SMT. K. S. NAGARATHNAMMA) in the Chair.

Felicitations to the Speaker.

† ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಬೇಟೆ).—ಮಾನ್ಯ ಅಧ್ಯಕ್ಷಣಿಯವರೇ ತಮ್ಮನ್ನು ಬಹು ಮಟ್ಟಿಗೆ ಸರ್ವಾನುಮತದಿಂದ ಈ ಸ್ಥಾನಕ್ಕೆ ಆರಿಸಿದ್ದಾರೆ. ನಾನಾದರೂ ಈ ಅಧ್ಯಕ್ಷಸ್ಥಾನಕ್ಕೆ ಸ್ಪರ್ಧಿಸಿದ್ದು ಜಯಗಳಿಸುವ ಭರವಸೆಯಿಂದಲ್ಲ. ಒಂದು ಸಂಪ್ರದಾಯಕ್ಕೆ ಸ್ಪರ್ಧಿಸಿದ್ದೇನೆ. ನಾನು ಪೊನ್ನೆತಾನೆ ರೇಡಿಯೋ ಅನ್ನು ಕೇಳುತ್ತಾ ಕುಳಿತುಕೊಂಡಿದ್ದೆ. ಎರ್ನಾ ಪ್ರಾಂತ್ಯದಲ್ಲಿಯೂ ಕೂಡ ಅಧ್ಯಕ್ಷರು ಅವಿರೋಧವಾಗಿ ಚುನಾಯಿತರಾದರು ಎಂದು ಕೇಳಿಬರುತ್ತಿತ್ತು. ಇದನ್ನು ನೋಡಿದರೆ ಮನಸ್ಸಿಗೆ ಸ್ವಲ್ಪ ಅಸಮಧಾನವಾಯಿತು. ಭಾರತದೇಶದಲ್ಲಿ ಕಾಂಗ್ರೆಸ್ಸಿಗೆ ವಿರೋಧವಾಗಿ ಆರಿಸಿ ಬರುವುದಕ್ಕೆ ಯಾರೂ ಇಲ್ಲವೇ ಇಲ್ಲ ಎನ್ನುವ ಮಟ್ಟಕ್ಕೆ ಮುಟ್ಟಿದೆ. ನಮ್ಮ ಮೈಸೂರು ರಾಜ್ಯದಲ್ಲಿ ನಡೆದ ಚುನಾವಣೆಯನ್ನು ತೆಗೆದುಕೊಂಡು ನೋಡಿದರೆ ಕಾಂಗ್ರೆಸ್ಸಿಗೆ ಕೇವಲ ಶೇಕಡಾ 54 ರಷ್ಟು ಮತನೀಡಿದ್ದಾರೆ. ಶೇಕಡ 46 ಮಂದಿ ಕಾಂಗ್ರೆಸ್ಸಿಗೆ ವಿರೋಧವಾಗಿ ಮತ ನೀಡಿದ್ದಾರೆ. ಜನತೆ ಕಾಂಗ್ರೆಸ್‌ಗೆ ವಿರೋಧವಾಗಿಯೂ ಮತವನ್ನು ಕೊಟ್ಟಿದ್ದರಿಂದ ನಾನು ಇವೊತ್ತಿನ ದಿವಸ ಇಲ್ಲಿ ಸ್ಪರ್ಧಿಸಬೇಕಾಯಿತು.

ಶ್ರೀ ಬಿ. ಧಾಸ್ಕರ ಶೆಟ್ಟಿ.—ತಾವು ತಪ್ಪು ಅಭಿಪ್ರಾಯವನ್ನು ಹೇಳುತ್ತಿದ್ದೀರಿ. ಜನತೆ ಕಾಂಗ್ರೆಸ್ಸಿಗೆ 54 ಪರ್‌ಸೆಂಟ್ ಮತವನ್ನು ಕೊಟ್ಟಿದೆ.

ಶ್ರೀ ಕೆ. ಎಂ. ನಾಗಣ್ಣ.—ಆದರೂ ಜನತೆ 46 ಪರ್‌ಸೆಂಟ್ ಕಾಂಗ್ರೆಸ್ಸಿಗೆ ವಿರುದ್ಧವಾಗಿ ತಮ್ಮ ಮತವನ್ನು ಕೊಟ್ಟಿದ್ದಾರೆ. ಆ ಒಂದು ದೃಷ್ಟಿಯಿಂದ ವಿರೋಧ ಪಕ್ಷದವರಿಂದ ಯಾರೂ ಸ್ಪರ್ಧೆ ಮಾಡದಿದ್ದರೆ, ಈ 46 ಪರ್‌ಸೆಂಟ್ ಜನರು ಏನು ತಪ್ಪು ಕಲ್ಪನೆ ಮಾಡುತ್ತಾರೆ, ಮತ್ತು ಅದರಿಂದ ಏನು ಒಂದು ವಿರೋಧ ಪಕ್ಷಕ್ಕೆ ಅವಮಾನ ಮಾಡಿದ ಹಾಗೆ ಆಗುತ್ತದೆ, ಅದನ್ನು ನಿವಾರಿಸುವ ನಲುವಾಗಿ ಇಂದು ನಾನು ಚುನಾವಣೆಗೆ ನಿಲ್ಲಬೇಕಾಯಿತು. ಅಲ್ಲದೆ, ಚುನಾವಣೆಯಲ್ಲಿ ನಾನು ಗೆಲ್ಲುತ್ತೇನೆ ಎಂಬ ಭರವಸೆಯಿಂದ ನಿಂತಿಲ್ಲ.

ಇನ್ನು ಸಭಾ ನಾಯಕರಲ್ಲಿ ಕೂಡ ತಮ್ಮ ಮೂಲಕ ಒಂದು ವಿಜ್ಞಾಪನೆಯನ್ನು ಮಾಡುವುದೇನೆಂದರೆ, ಇಲ್ಲಿ ಕೆಲಸ ಕಾರ್ಯಗಳನ್ನು ಸುಗಮವಾಗಿ, ಸುಸೂತ್ರವಾಗಿ, ಮಾಡಿಕೊಂಡು ಬರಬೇಕಾದರೆ, ವಿರೋಧ ಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಆ ರೀತಿ ವಿರೋಧಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಈ ಒಂದು ಚುನಾವಣೆಯನ್ನು ಮಾಡಿದ್ದರೆ, ಈ ಪದವಿಗೆ ಯಾವ ಒಂದು ಸ್ಪರ್ಧೆಯೂ ಇಲ್ಲದೆ ಅಧ್ಯಕ್ಷರನ್ನು ಆರಿಸಿ ಬಹುದಾಗಿತ್ತು. ನಮ್ಮ ಮಾನ್ಯ ಪಿತ್ರರನೇಕರು ಹೇಳಿದಹಾಗೆ, ಇಂಗ್ಲೆಂಡ್ ಮುಂತಾದ ದೇಶಗಳಲ್ಲಿ ಈ ಸಂಪ್ರದಾಯವನ್ನು ಬೆಳೆಸಿಕೊಂಡು ಬಂದಿದ್ದಾರೆ. ಅದೇ ರೀತಿ ಇಲ್ಲಿಯೂ ಸಮಾರೋಚನೆ ಮಾಡಿದರೆ ಒಳ್ಳೆಯದು. ಏಕೆಂದರೆ, ಇವತ್ತು ನಮಗೆ ''ಬ್ಯೂಟ್ ಪೆಜಾರಿಟಿ'' ಇದೆಯೆಂದು ತಿಳಿದುಕೊಂಡು, ವಿರೋಧ ಪಕ್ಷದವರನ್ನು ಏಕೆ ಸಮಾಲೋಚನೆ ಮಾಡಬೇಕೆಂದು ತಿಳಿದುಕೊಳ್ಳಬಾರದು ?

ಒಬ್ಬ ಮಾನ್ಯ ಸದಸ್ಯರು.—ಬ್ಯೂಟ್ ಪೆಜಾರಿಟಿ ಎಂಬುದು ಅನ್‌ಪಾರ್ಲಮೆಂಟರಿ.

ಶ್ರೀ ಕೆ. ಎಂ. ನಾಗಣ್ಣ.—ಯಾವುದು ಅನ್‌ಪಾರ್ಲಮೆಂಟರಿ ಅದನ್ನು ಕಿತ್ತು ಹಾಕಿಬಿಡಿ, ಯಾವುದು ಪಾರ್ಲಮೆಂಟರಿ ಅದನ್ನು ಇಟ್ಟುಕೊಳ್ಳಿ. ನಾನು ಈ ಸಭೆಗೆ ಇನ್ನೂ ಹೊಸಬ.

ಸಭಾ ನಾಯಕರಲ್ಲಿ ನನ್ನ ಮನವಿ ಇಷ್ಟೆ. ವಿರೋಧ ಪಕ್ಷದವರು ಬರೇ ಕೆಲವು ಮಂದಿ ಇದ್ದಾರೆ ಎಂದು ಅವರನ್ನು ಕಡೆಗಣಿಸಬಾರದು, ಅವರಿಗೂ ಸಾಕಷ್ಟು ಮರ್ಯಾದೆ ಗೌರವಗಳನ್ನು ಕೊಟ್ಟು ನೋಡಿಕೊಳ್ಳಬೇಕು. ಇದಲ್ಲದೆ ಇನ್ನೂ ಹೆಚ್ಚಿನ ಸಂಪ್ರದಾಯವನ್ನು ಕಾಪಾಡಿಕೊಂಡು ಬರುವುದಾದರೆ, ಸಭೆಯ ಉಪಾಧ್ಯಕ್ಷರ ಸ್ಥಾನವನ್ನು ವಿರೋಧ ಪಕ್ಷದವರಿಗೆ ಒದಗಿಸಿ ಕೊಟ್ಟರೆ, ಅದಕ್ಕಿಂತ ಹೆಚ್ಚಿನ ಗೌರವ ಮತ್ತು ಮರ್ಯಾದೆ ಬೇರೆ ಯಾವುದೂ ಇಲ್ಲ. ಇದನ್ನು ಇಡೀ ದೇಶವೇ ಸ್ವಾಗತಿಸಬಹುದು. ಮುಖ್ಯವಾಗಿ ಸಭೆಯ ಕಾರ್ಯಕಲಾಪಗಳಿಗೆ ಎಲ್ಲರ ಸಹಕಾರ ಬೇಕೇ ಬೇಕು.

ಇನ್ನು ಸಭಾಧ್ಯಕ್ಷಣಿಯವರಿಗೆ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ತಾವು ನಮ್ಮನ್ನೆಲ್ಲಾ ವಿನಯಶೀಲರಾಗಿ ಹೆಚ್ಚಿನ ಮಮತೆಯಿಂದ ನೋಡಿಕೊಂಡು ಇವರು ಆಡಳಿತ ಪಕ್ಷದವರು, ಇವರು ವಿರೋಧ ಪಕ್ಷದವರು ಎಂಬ ಭಾವನೆಯನ್ನು ಇಟ್ಟುಕೊಳ್ಳದೆ, ಎಲ್ಲರನ್ನು ಒಂದೇ ಸಮನಾಗಿ

(ಶ್ರೀ ಕೆ. ಎಂ. ನಾಗಣ್ಣ)

ನೋಡಿಕೊಳ್ಳಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ವಿರೋಧ ಪಕ್ಷದವರು ಸರಿಯಾದ ವಿಚಾರವನ್ನು ತಂದು ಮಾತನಾಡಿದಾಗ, ಅದಕ್ಕೆ ಸರಿಯಾದ ಉತ್ತರವನ್ನು ಆಡಳಿತ ಪಕ್ಷದವರು ಕೊಡಬೇಕು, ಅದರ ಬದಲು ಇವರು ಆಡಳಿತ ಪಕ್ಷದವರು, ಇವರು ಏನು ಹೇಳಿದರೂ ನಡೆಯುತ್ತದೆ ಎಂದು ತಿಳಿದುಕೊಳ್ಳಬಾರದು. ನ್ಯಾಯವಾದ ಬೇಡಿಕೆಗಳು ಬಂದಾಗ, ಅದರ ಬಗ್ಗೆ ಯಾವ ಒಂದು ಥೇದ ಭಾವವಿಲ್ಲದೆ ನಿಮ್ಮ ತೀರ್ಪನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇವರು ಆಡಳಿತ ಪಕ್ಷದವರು, ಇವರು ವಿರೋಧ ಪಕ್ಷದವರು ಎಂಬ ಯಾವ ಒಂದು ತಾರತಮ್ಯವಿಲ್ಲದೆ ನಿಮ್ಮ ಆತ್ಮಸಾಕ್ಷಿಯಾಗಿ, ನ್ಯಾಯವಾದ ತೀರ್ಪನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಆದ್ದರಿಂದ ತಾವು ಇಂದು ಈ ಸಭೆಯ ಅಧ್ಯಕ್ಷರಾಗಿ ಆಯ್ಕೆಯಾದುದು ನನಗೆ ತುಂಬಾ ಸಂತೋಷವನ್ನುಂಟುಮಾಡಿದೆ. ತಮ್ಮ ವಿರುದ್ಧವಾಗಿ ನಾನು ಸ್ಪರ್ಧಿಸಿದ್ದು ಕೇವಲ ಸಾಂಕೇತಿಕವಾಗಿಯಲ್ಲದೆ, ಬೇರೆ ಯಾವ ರೀತಿಯಿಂದಲೂ ಅಲ್ಲ. ಕೊನೆಯದಾಗಿ ತಮ್ಮನ್ನು ಸ್ವಾಗತಿಸಿ ವಿರೋಧ ಪಕ್ಷಗಳವರ ಕೇಳಿಕೆಗಳಿಗೂ ಗಮನ ಕೊಟ್ಟು ಸಹಾಯ ಮಾಡಬೇಕೆಂದು ಹೇಳಿ ತಮಗೆ ವಂದಿಸಿ, ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸಭಾಧ್ಯಕ್ಷಣಿಯವರೆ, ತಾವು ಈ ದಿವಸ ಸಭೆಯ ಅಧ್ಯಕ್ಷರಾಗಿ ಚುನಾಯಿತರಾಗಿರುವುದು ನಮಗೆಲ್ಲರಿಗೂ ಒಂದು ದೊಡ್ಡ ಸಂತೋಷವಾಗಿದೆ; ಅದೇ ರೀತಿಯಾಗಿ ಇದು ದೇಶಕ್ಕೂ ಒಂದು ದೊಡ್ಡ ಗೌರವವನ್ನು ತಂದಿದೆಯೆಂದು ನಾನು ಭಾವಿಸುತ್ತೇನೆ. ಪ್ರಥಮವಾಗಿ ಇಡೀ ಭಾರತ ದೇಶದಲ್ಲಯೇ ತಾವು ಒಬ್ಬರು ಹೆಣ್ಣು ಮಗಳು ಸಭಾಧ್ಯಕ್ಷರಾಗಿ ಚುನಾಯಿತರಾಗಿರತಕ್ಕಂಥದ್ದು ನಮ್ಮ ಇಡೀ ಮೈಸೂರು ರಾಜ್ಯಕ್ಕೆ ಹೆಮ್ಮೆ ತರತಕ್ಕಂತಹ ವಿಚಾರವಾಗಿದೆ. ನಮ್ಮ ದೇಶದಲ್ಲಿ ಒಬ್ಬರು ಪ್ರಧಾನ ಮಂತ್ರಿಯವರು ಹೆಣ್ಣು ಮಗಳು ಇದ್ದಾರೆ. ಅದೇ ರೀತಿ ಮುಖ್ಯಮಂತ್ರಿಯಾಗಿಯೂ ಹೆಣ್ಣು ಮಕ್ಕಳು ಕೆಲಸ ಮಾಡಿದ್ದಾರೆ. ಆದರೆ ವಿಧಾನ ಸಭೆಯ ಅಧ್ಯಕ್ಷಣಿಯರಾಗಿ, ನನಗೆ ಗೊತ್ತಿರುವ ಹಾಗೆ ಯಾರೂ, ಯಾವ ರಾಜ್ಯದಲ್ಲೂ ಕೆಲಸ ಮಾಡಿಲ್ಲ. ಇದು ಒಂದು ಹೆಮ್ಮೆಯ ವಿಷಯ. ತಾವು ಈ ಸಭೆಯಲ್ಲಿ 14 ವರ್ಷಗಳಿಂದಲೂ ಕೆಲಸ ಮಾಡಿಕೊಂಡು ಬಂದಿದ್ದೀರಿ. ನಮಗೆಲ್ಲಾ ತಮ್ಮ ಜೊತೆ ಕೆಲಸ ಮಾಡತಕ್ಕಂತಹ ಒಂದು ಸುಯೋಗ ದೊರಕಿತ್ತು. ನೀವು ಸ್ಪರ್ಧೆ ಮಾಡಿದ ಚುನಾವಣೆಗಳಲ್ಲಿ ಗೆದ್ದುಕೊಂಡು ಬಂದಿದ್ದೀರಿ. ಇದರಿಂದ ತಮ್ಮ ಕ್ಷೇತ್ರದ ಜನರು ತಮ್ಮಲ್ಲಿ ಯಾವ ಒಂದು ವಿಶ್ವಾಸ ಪ್ರೇಮವನ್ನು ಇಟ್ಟುಕೊಂಡಿದ್ದಾರೆಂಬುದು ವ್ಯಕ್ತವಾಗುತ್ತದೆ. ಆದರೆ, ಈ ಸಾರಿ ಚುನಾವಣೆಯಲ್ಲಿ ತಮ್ಮ ಚುನಾವಣೆಯ ಫಲಿತಾಂಶದ ಬಗ್ಗೆ ಕೆಲವರು ಅನುಮಾನ ಪಡುತ್ತಿದ್ದರು. ಆದರೆ ತಾವು ಚುನಾವಣೆಯಲ್ಲಿ ಪ್ರತಿಸ್ಪರ್ಧಿಯನ್ನು ಸೋಲಿಸುತ್ತೇನೆ ಎಂಬ ನಂಬಿಕೆಯನ್ನು ಹೊಂದಿದ್ದಿರೇನೋ ಎಂಬುದು ನನಗೆ ಗೊತ್ತಿಲ್ಲ. ಏನೇ ಆದರೂ ತಾವು ಈ ಚುನಾವಣೆಯಲ್ಲಿ ಕೂಡ ಬಹಳ ದೊಡ್ಡ ಪ್ರಮಾಣದಲ್ಲಿ ಮತಗಳನ್ನು ಗಳಿಸಿ ಜನರ ವಿಶ್ವಾಸ ಎಷ್ಟುಮಟ್ಟಿಗೆ ಇಟ್ಟುಕೊಂಡಿದ್ದೀರಿ ಎಂಬುದನ್ನು ಪ್ರದರ್ಶನ ಮಾಡಿದ್ದೀರಿ. ಹದಿನಾಲ್ಕು ವರ್ಷಗಳ ಕಾಲ ಸಭೆಯ ಸದಸ್ಯರಾಗಿ ಕೆಲಸ ಮಾಡಿದಂತಹ ಕಾಲದಲ್ಲಿ ತಾವು ಹಿಂದೆ ಕುಳಿತುಕೊಂಡಿದ್ದಂತಹ ವ್ಯಕ್ತಿ ಏನಲ್ಲ ಇಂಗ್ಲಿಷಿನಲ್ಲಿ 'ಬ್ಯಾಕ್ ಬೆಂಚರ್' ಎಂದು ಏನು ಹೇಳುತ್ತೇವೆ ಆ ರೀತಿಯೇನೂ ಇರಲಿಲ್ಲ. ಸಭೆಯ ಯಾವ ಕಾರ್ಯಕಲಾಪಗಳಲ್ಲೂ ಭಾಗವಹಿಸದೇ ಇದ್ದಂತಹವರೇನಲ್ಲ. ಎಲ್ಲ ಮುಖ್ಯ ವಿಷಯಗಳಲ್ಲೂ ತುಂಬಾ ಶ್ರದ್ಧೆಯಿಂದ ಹಾಗೂ ಆಸಕ್ತಿಯಿಂದ ಭಾಗವಹಿಸುತ್ತಿದ್ದವರು ಎನ್ನುವುದು ಎಲ್ಲರಿಗೂ ಗೊತ್ತಿದೆ. ಮತ್ತು ಕೆಲವು ಸಂದರ್ಭಗಳಲ್ಲಿ ತಾವು ಈ ಅಸೆಂಬ್ಲಿಯಲ್ಲಿ ಮಾತನಾಡುವಾಗ ಸದಸ್ಯರು ರೌಂಜಿನಲ್ಲಿದ್ದು ವಿರಾಮ ತೆಗೆದುಕೊಳ್ಳುತ್ತಿದ್ದರೂ ಶ್ರೀಮತಿ ನಾಗರತ್ನಮ್ಮನವರು ಮಾತನಾಡುತ್ತಿದ್ದಾರೆಂದಕೂಡಲೇ ಎಲ್ಲರೂ ಹೊರಗಿನಿಂದ ಬಂದು ಬಹಳ ಆಸಕ್ತಿಯಿಂದ ತಮ್ಮ ಭಾಷಣಗಳನ್ನು ಕೇಳುತ್ತಿದ್ದರು. ಮತ್ತೆ ನಮ್ಮ ಮಾನ್ಯ ಸ್ನೇಹಿತರಾದ ಶ್ರೀಮಾನ್ ಪಾಟಾಳ್ ನಾಗರಾಜ್‌ರವರು ಹೇಳಿದಂತೆ ತಮಗೆ ಎರಡು ಕಡೆಗಳಲ್ಲೂ ಕುಳಿತು ಕಾರ್ಯಕರಾಪಗಳನ್ನು ನಡೆಸಿರುವ ಅನುಭವ ಇದೆ. ಈ ಕಡೆ ಕುಳಿತು ಕೆಲಸ ಮಾಡಿರುವ ಅನುಭವವೂ ಇದೆ ಮತ್ತು ವಾಮ ಭಾಗದಲ್ಲಿ ಕೂಡ ಕುಳಿತು ಕೆಲಸ ಮಾಡಿರುವ ಅನುಭವವೂ ಇದೆ. ಹೀಗೆ ತಮಗೆ ಎಲ್ಲ ರೀತಿಯ ಅನುಭವವೂ ಇದೆ. ನೀರಿನ ಮೇಲೂ ಈಜಬಲ್ಲರು ಹಾಗೂ ನೀರಿನ ಒಳಗೂ ಈಜಬಲ್ಲರು ಎಂದು ಹೇಳುವಂತೆ, ಈ ರೀತಿಯಾದ ಎರಡು ಅನುಭವಗಳಿಗೂ ತಾವು ಪಾತ್ರರಾಗಿದ್ದು ಎಲ್ಲರ ಗೌರವವನ್ನೂ ಪಡೆದಿದ್ದೀರಿ. ಈ ಕಾರ್ಯ ಮಾಡುವುದರಲ್ಲಿ ಇದುವರೆಗೂ ತಾವು ಪಡೆದಿರುವ ಅನುಭವದ ಹನ್ನೆರೆಯಲ್ಲಿ ತಾವು ತಕ್ಕವರಾಗಿದ್ದೀರಿ ಎನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ, ಮತ್ತು ತಮಗೆ ಲೌಕಿಕ ವ್ಯವಹಾರ ಜ್ಞಾನ ಕೂಡ ತುಂಬಾ ದೊಡ್ಡದು ಇದೆ ಮತ್ತು ಇಡೀ

ಇಂಡಿಯಾ ದೇಶದಲ್ಲಿ ಅನೇಕ ಕಡೆ ತಾವು ಪ್ರಯಾಣ ಮಾಡಿದ್ದೀರಿ, ಮತ್ತು ಭಾರತದ ಹೊರಗಡೆ ದೇಶಗಳಿಗೂ ಎಂದರೆ ಜಪಾನ್, ಫಿಲಿಫೈನ್ಸ್, ಆಸ್ಟ್ರೇಲಿಯಾ, ಅಮೆರಿಕಾ, ಹೀಗೆ ಇತರ ಎಲ್ಲಾ ಪ್ರದೇಶಗಳಿಗೂ ಹೋಗಿ ಅಲ್ಲಿನ ಅನುಭವಗಳನ್ನು ಪಡೆದು ಬಂದಿದ್ದೀರಿ. ಇದಕ್ಕಿಂತ ಹೆಚ್ಚಾಗಿ ವ್ಯವಸಾಯಗಾರರ ವಿಚಾರವಾಗಿ ತುಂಬಾ ಅನುಭವವನ್ನು ಪಡೆದಿದ್ದೀರಿ, ತಾವೇ ಸ್ವತಃ ಖುದ್ದು ವ್ಯವಸಾಯಗಾರರೂ ಆಗಿದ್ದೀರಿ, ಈಗಲೂ ಕೂಡ ವ್ಯವಸಾಯಗಾರರಾಗಿಯೂ ಉಳಿದುಕೊಂಡು ಬಂದಿದ್ದೀರಿ. ಹೀಗೆ ತಮ್ಮ ವ್ಯವಹಾರಿಕ ಅನುಭವಗಳು, ಈ ಸಭೆಯಲ್ಲಿ ಕೆಲಸ ಮಾಡಿರತಕ್ಕ ಅನುಭವ ಮತ್ತು ವಿದೇಶ ಪರ್ಯಟನದಿಂದ ಬಂದಿರುವ ಅನುಭವ ಇವೆಲ್ಲಾ ಅನುಭವಗಳೂ ತಮ್ಮಲ್ಲಿವೆ; ಆದುದರಿಂದ ತಾವು ಈ ಸಭೆಯ ಅಧ್ಯಕ್ಷರಾಗಿ ಚೆನ್ನಾಗಿ ಕೆಲಸ ಮಾಡುತ್ತೀರಿ ಎನ್ನುವ ನಂಪೂರ್ಣ ನಂಬಿಕೆ ನಮಗೆ ಇದೆ, ತಮಗೆ ಈ ಮನೆಯಲ್ಲಿ ಕೆಲಸ ಮಾಡಿರುವುದರ ಜೊತೆಗೆ ಅನೇಕ ಸಮಿತಿ ಗಳಲ್ಲಿಯೂ ಕೆಲಸ ಮಾಡಿರುವುದರ ಅನುಭವವೂ ಇದೆ, ಎಸ್ಟಿಮೇಟ್ಸ್ ಕಮಿಟಿ, ಇನ್ನೂ ಬೇರೆ ಬೇರೆ ಸಮಿತಿಗಳಲ್ಲಿ ಎಂದರೆ ನ್ಯಾಷನಲ್ ರೈಲ್ವೆ ಯೂಸರ್ಸ್ ಕನ್‌ಸಲ್ಟೇಟೀವ್ ಕಮಿಟಿಗಳಲ್ಲಿ ಕೆಲಸ ಮಾಡಿದ್ದೀರಿ, ಹಾಗೂ ಸೆನೇಟ್‌ನಲ್ಲಿ ಮೆಂಬರಾಗಿ ಕೆಲಸ ಮಾಡಿದ್ದೀರಿ, ಶಾಸನ ಸಭೆಗಳಲ್ಲಿ ಕೆಲಸ ಮಾಡಿರುವ ಅನುಭವ; ಸಮಿತಿಗಳಲ್ಲಿ ಕೆಲಸ ಮಾಡಿರತಕ್ಕ ಅನುಭವ ಹೀಗೆ ಎಲ್ಲಾ ಅನುಭವಗಳನ್ನೂ ಪಡೆದಿರುವುದರಿಂದ ಈ ಸಭೆಯ ಕಾರ್ಯಕಲಾಪಗಳನ್ನು ಚೆನ್ನಾಗಿ ನಡೆಸುತ್ತೀರಿ ಎನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ.

ಈ ಸಭೆಯಲ್ಲಿ ಇದ್ದು ಅನುಭವ ಪಡೆದು ಇರುವುದರ ಜೊತೆಗೆ ಇನ್ನೂ ಒಂದು ವಿಶೇಷ ಗುಣ ತಮ್ಮಲ್ಲಿರತಕ್ಕದ್ದು ಎಂದರೆ, ಎಲ್ಲಿ ಯಾವುದು ನರಿ, ಯಾವುದು ನ್ಯಾಯ ಎನ್ನುವುದನ್ನು ಹೇಳುವುದರಲ್ಲಿ ಮತ್ತು ಎತ್ತಿ ಹಿಡಿಯುವುದರಲ್ಲಿ, ತಾವು ಯಾವ ಗಂಡಸಿಗಿಂತ ಕಡಿಮೆ ಏನೂ ಇಲ್ಲ, ಮತ್ತೆ ಇನ್ನೂ ಒಂದು ಮಾತು ಮುಂದೆ ಹೋಗಿ ಹೇಳುವುದಾದರೆ, ತಾವು ಹೆಣ್ಣು ಮಗಳಾಗಿದ್ದರೂ ತಮಗೆ ಇರತಕ್ಕ ಧೈರ್ಯ ಯಾವ ಗಂಡಸಿಗಿಂತ ಕಡಿಮೆ ಏನೂ ಇಲ್ಲ, ಅಂತಹ ಧೈರ್ಯ ಇದೆ. ನ್ಯಾಯ ವನ್ನು ಎತ್ತಿ ಹಿಡಿಯತಕ್ಕ ಕೆಚ್ಚೆದೆ ಹಾಗೂ ಧೈರ್ಯ ಎನ್ನತಕ್ಕ ಗುಣ ಇಲ್ಲಿ ಬಹಳ ಮುಖ್ಯ. ಆ ಮುಖ್ಯವಾದ ಗುಣ ತಮ್ಮಲ್ಲಿ ಇದೆ, ಆದುದರಿಂದ ನನಗೆ ತಮ್ಮಲ್ಲಿ ಪೂರ್ಣ ನಂಬಿಕೆ ಇದೆ.

ಮತ್ತೆ, ಈ ಸಭೆಯಲ್ಲಿ ತಮ್ಮ ಮೇಲೆ ತಕ್ಕಡಿಯ ಗುರುತು ಇದೆ, ಆ ತಕ್ಕಡಿ ಯಾವ ರೀತಿ ನ್ಯಾಯವನ್ನು ಸಮವಾಗಿ ಎತ್ತಿ ಹಿಡಿಯುತ್ತದೆಯೋ ಅಂತಹ ಗುಣವನ್ನು ಶಾಶ್ವತವಾಗಿ ತಾವು ಉಳಿಸಿಕೊಂಡು ಬರುತ್ತೀರಿ ಎನ್ನುವ ನಂಬಿಕೆ ಇದೆ. ಅದರಲ್ಲೂ ತಾವು ಹೆಣ್ಣು ಮಗಳಾಗಿರುವುದ ರಿಂದ ಮತ್ತು ಎಲ್ಲ ಅನುಭಗಳನ್ನೂ ಪಡೆದಿರುವುದರಿಂದ ತಮ್ಮ ಕೆಲಸಗಳನ್ನು ಇಲ್ಲಿ ಚೆನ್ನಾಗಿ ಮಾಡುತ್ತೀರಿ ಎನ್ನುವುದರಲ್ಲಿ ನನಗೆ ಸಂಪೂರ್ಣ ನಂಬಿಕೆ ಇದೆ. ಇಂತಹ ನಂಬಿಕೆಯನ್ನು ನಿಮ್ಮಲ್ಲಿ ಕಾಣಬೇಕಾದರೆ ಇದಕ್ಕೆ ಇನ್ನೂ ಒಂದು ಮುಖ್ಯವಾದ ಕಾರಣವೇನೆಂದರೆ ಈಗ ತಾವು ಹೆಣ್ಣು ಮಗಳೂ ಆಗಿರುವುದರಿಂದ ನಮ್ಮ ವಿರೋಧ ಪಕ್ಷದ ಸದಸ್ಯರುಗಳು ಹೆಣ್ಣು ಮಕ್ಕಳಿಗೆ ಕೊಡ ಬೇಕಾದ ಗೌರವಗಳನ್ನು ಇನ್ನೂ ಹೆಚ್ಚು ರೀತಿಯಲ್ಲಿ ಕೊಡುತ್ತಾರೆ ಮತ್ತು ತಾವು ಷಿವಲ್ರಸ್ (Chivolrous) ಆಗಿರುತ್ತೀರಿ, ಮತ್ತು ತಾವು ಈ ಇನ್ನು ನದನದಲ್ಲಿ ಐದು ವರ್ಷಗಳ ಕಾಲ ಅಧ್ಯಕ್ಷರಾಗಿರುತ್ತೀರಿ, ಮತ್ತು ಈ ಒಂದು ವಿಶೇಷ ಗೌರವವೂ ಇದೆ ಮತ್ತು ಹೆಣ್ಣು ಮಕ್ಕಳಿಗೆ ಸಲ್ಲಬೇಕಾದ ಗೌರವಗಳನ್ನು ನಾವೆಲ್ಲ ಸಲ್ಲಿಸಲೇಬೇಕು, ಇದರ ಜೊತೆಯಲ್ಲಿ ಹೆಣ್ಣುಮಗಳಾಗಿ ರುವವರು ಅಧ್ಯಕ್ಷರಾಗಿರುವುದರಿಂದ ಇವರಿಗೆ ವಿಶೇಷ ರೀತಿಯಲ್ಲಿ ನಾವೆಲ್ಲ ವಿಶ್ವಾಸ ಹಾಗೂ ಗೌರವಗಳನ್ನು ಕೊಡಬೇಕು. ಇದಕ್ಕಿಂತ ಹೆಚ್ಚಾಗಿ ಇನ್ನೊಂದು ವೈಶಿಷ್ಟ್ಯ ಎಂದರೆ ನಾವೆಲ್ಲರೂ ಈ ಸಭೆಯು ನದನ್ಯರಾಗಿರುವ ಐದು ವರ್ಷಗಳ ಕಾಲದಲ್ಲಿ ಈ ದೇಶದ ಹಿರಿಮೆಯನ್ನು ಎತ್ತಿ ಹಿಡಿದು ಎಲ್ಲರಿಗೂ ಒಂದು ಮಾದರಿಯಾಗುವ ರೀತಿಯಲ್ಲಿ ನಡೆಯುವಂತೆ ನಾವೆಲ್ಲರೂ ಅವರಿಗೆ ಸಹಕಾರ ಕೊಟ್ಟು ಕೆಲಸ ಮಾಡಲು ಸಹಾಯ ಮಾಡಬೇಕೆಂದು ತಮ್ಮ ಮುಖೇನ ಎಲ್ಲರನ್ನೂ ಇಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ನನ್ನ ಮಾತನ್ನು ಮುಗಿಸುವುದಕ್ಕೆ ಮುಂಚೆ ನಮ್ಮ ಮಾನ್ಯ ನದನ್ಯರಾದ ಶ್ರೀಮಾನ್ ನಾಗಣ್ಣನವರು ಹೇಳಿದಂತಹ ಒಂದು ವಿಚಾರ ಅದೇನೆಂದರೆ ಅವಿರೋಧವಾಗಿ ಅಧ್ಯಕ್ಷರನ್ನು ಚುನಾವಣೆ ಮಾಡಲು ಅವಕಾಶ ಮಾಡಬೇಕಾಗಿತ್ತು. ಅದಕ್ಕಾಗಿ ವಿರೋಧಪಕ್ಷದವರನ್ನು ಪೂರ್ವ ಭಾವಿಯಾಗಿ ವಿಚಾರ ಮಾಡಬೇಕಾಗಿತ್ತು ಎನ್ನುವುದು. ಈ ತತ್ವವೇನೋ ಒಳ್ಳೆಯದು, ನಾನೂ ಇದನ್ನು ಒಪ್ಪುತ್ತೇನೆ, ಆದರೆ ಇವೊತ್ತಿನ ನಂದರ್ಭದಲ್ಲಿ ಇನ್ನೂ ವಿರೋಧ ಪಕ್ಷದ ನಾಯಕರು ಯಾರು ಎನ್ನುವುದು ನಮಗೆ ಗೊತ್ತಾಗಲಿಲ್ಲ, ನಾವು ಎಲ್ಲರೊಡನೆಯೂ ಕುಳಿತುಕೊಂಡು ಮಾತನಾಡುವುದು ಕಷ್ಟ. ವಿರೋಧ ಪಕ್ಷದ ನಾಯಕರು ಇದ್ದರೆ ಅವರೊಡನೆ ಪ್ರನ್ಯಾಸ ಮಾಡ ಬಹುದಾಗಿತ್ತು. ಇನ್ನು ಮುಂದೆ ವಿರೋಧ ಪಕ್ಷದ ನಾಯಕರುಗಳೊಡನೆ ಇಂತಹ ಒಂದು

(ಶ್ರೀ ಡಿ. ದೇವರಾಜ ಅರಸ್)

ನಂಪ್ರದಾಯಗಳನ್ನು ತರಲು ನಾವು ಪ್ರಯತ್ನ ಮಾಡಬಹುದು, ಇನ್ನು ಮುಂದೆ ಇದನ್ನು ಪ್ರಯತ್ನ ಮಾಡಿ ನೋಡೋಣ, ಈಗ ಇದ್ದಂತಹ ಅನಿವಾರ್ಯ ನಂಗತಿಗಳಿಂದಾಗಿ ಇಷ್ಟು ಮಾತ್ರ ಆದರೂ ಶ್ರೀಮಾನ್ ನಾಗಣ್ಣನವರು ಹೇಳಿದಂತಹ ವಿಚಾರಗಳನ್ನು ನಾವೆಲ್ಲರೂ ಯೋಚನೆ ಮಾಡಬೇಕಾದ್ದು ಅವಶ್ಯಕ ಮತ್ತು ಇದು ಯೋಗ್ಯವಾದ ವಿಚಾರ, ಒಮ್ಮತದಿಂದ ಇಲ್ಲಿ ಚುನಾವಣೆ ಆಗಿದೆ ಎಂತಲೇ ಹೇಳಬಹುದು, ಆದರೂ ಬಹುಮತದಿಂದ ಈ ನಭೆಯು ನಾಯಕರಾಗಿ ಶ್ರೀಮತಿ ನಾಗರತ್ನಮ್ಮನವರು ಚುನಾಯಿತರಾಗಿರುತ್ತಾರೆ, ಅವರಿಗೆ ನಮ್ಮ ಗೌರವವನ್ನು ಸಲ್ಲಿಸಿ ನಭೆ ನಡೆಯುವ ಕಾಲದಲ್ಲಿ ಸಂಪೂರ್ಣ ಸಹಕಾರವನ್ನು ನಾವು ಕೊಡುತ್ತೇವೆಂದು ಹೇಳಿ ತಮ್ಮಲ್ಲಿ ನಿವೇದಿಸಿಕೊಂಡು ಈ ನನ್ನ ಮಾತುಗಳನ್ನು ಮುಗಿಸುತ್ತೇನೆ.

4-00 P.M.

†ಶ್ರೀ ಗಟ್ಟಿ ಚಂದ್ರಶೇಖರ್ (ಗುಬ್ಬಿ).—ಅಧ್ಯಕ್ಷಣಿಯವರೇ, ಸ್ವಾತಂತ್ರ್ಯ ಬಂದು 25 ವರ್ಷ ಗಳು ಕಳೆದಮೇಲೆ ಪೊಟ್ಟಮೊದಲನೆಯದಾಗಿ ತಾವು ಈ ನಭೆಯ ಅಧ್ಯಕ್ಷಣಿಯಾಗಿದ್ದೀರಿ. ಈಗಾಗಲೇ ತಮ್ಮ ಅನುಭವದ ಬಗ್ಗೆ, ತಮ್ಮ ರಾಜಕೀಯ ಕ್ಷೇತ್ರದ ಬಗ್ಗೆ ನಮ್ಮ ನಭಾ ನಾಯಕರು ನಾಕಷ್ಟು ಹೇಳಿದ್ದಾರೆ. ಆದರೆ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರ ಬಯಸುತ್ತೇನೆ. 216 ಮಂದಿ ಇರತಕ್ಕಂಥ ಈ ನಭೆಯಲ್ಲಿ ನಮದೇ ಬಹುಮತ. ಈ ವಿಚಾರ ವನ್ನು ಪಕ್ಷದ ಕಡೆಯಿಂದ ಹೇಳುತ್ತಾ ಇಲ್ಲ. ನಾವು ಹೊಸದಾಗಿ ಚುನಾವಣೆಯಾಗಿ ಬಂದಿರತಕ್ಕ ನದಸ್ಯರು, ಹಳಬರಿಗಿಂತಲೂ ನಮ್ಮಲ್ಲಿ ಬಹಳ ಜನರು ಇದ್ದಾರೆ. ಹಳಬರು ಮೊದಲಿನಿಂದಲೂ ಈ ನಭೆ ಯಲ್ಲಿ ಮಾತನಾಡಿರುತ್ತಾರೆ. ಆದ್ದರಿಂದ ಹೊಸದಾಗಿ ಬಂದಿರುವವರ ಕಡೆಗೆ ತಾವು ಹೆಚ್ಚು ಗಮನ ಕೊಡಬೇಕು. ತಾವು ಹೊಸದಾಗಿ ಬಂದಿರುವವರಿಗೆ ಹಳಬರಿಗಿಂತ ಹೆಚ್ಚಿಗೆ ಮಾತನಾಡಲು ಅವಕಾಶ ಕೊಡಬೇಕು. ತಮ್ಮ ವೈಯಕ್ತಿಕವಾದ ಈ ಚುನಾವಣೆಯಿಂದ ಒಂದು ಅಂಶವನ್ನು ಹೇಳಬೇಕೆಂದರೆ, ಈ ಬೃಹದಾಕಾರವಾದ ಆನನದ ತುಂಬ ತಾವು ಕೂತುಕೊಂಡಿರುತ್ತೀರಿ. (ನಗು) ಈ ನಭೆಯಲ್ಲಿ ಮೊದಲಿನಿಂದಲೂ ಅಧ್ಯಕ್ಷರನ್ನು ಸಂಭೋದಿಸಬೇಕಾದರೆ, ಸ್ವಾಮಿ, ಮಿಸ್ಟರ್ ಸ್ಪೀಕರ್ ಎಂದು ಹೇಳುತ್ತಿದ್ದರು. ಈಗಿನ ಒಂದು ಸಂದರ್ಭದಲ್ಲಿ ತಮ್ಮನ್ನು ಅಮ್ಮಾವರೆ, ಎಂದು ಕರೆಯಬೇಕೋ ಅಥವಾ ಸ್ವಾಮಿ ಎಂದುದಾಗಿ ಕರೆಯಬೇಕೋ ತಿಳಿಯದು. ತಾವು ಈ ನಭಾಧ್ಯಕ್ಷ ಸ್ಥಾನಕ್ಕೆ ಈಗ ಚುನಾಯಿತರಾಗಿರುವುದರಿಂದ ತಮಗೆ ಅಭಿನಂದಿಸುತ್ತೇನೆ.

Smt. VIJAYA DESAI (Chitapur).—Madam Speaker, I associate myself with the sentiments expressed by our Chief Minister. It is a matter of pride for the whole of women folk because you are the second lady to occupy this post in the whole of India and the first lady in Mysore. Madam, people become great because of their good qualities, because of their towering personality and because of their organising capacity. I feel that you are the unique mixture of all these qualities. You are the embodiment of ability, capacity, strength and courage. I pray God to give you more strength and more courage to discharge your duties efficiently and become the best Speaker of Mysore. I assure you that I co-operative in all the proceedings of the Assembly.

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಶ್ರೀಮತಿ ನಾಗರತ್ನಮ್ಮ ಅವರನ್ನು ಈ ನಭೆ ಬಹುಮತದಿಂದ ಅಧ್ಯಕ್ಷರನ್ನಾಗಿ ಆಯ್ಕೆಮಾಡಿದ್ದನ್ನು ನಾನು ಮನಸಾರೆ ಬಹಳ ನಂತೋಷದಿಂದ ಹಾಗೂ ಅಭಿಮಾನದಿಂದ ಸ್ವಾಗತಿಸುತ್ತೇನೆ. ನಾನು ಹೇಳಬೇಕೆಂದಿದ್ದ ಒಂದು ವಿಷಯವನ್ನು ಮಾನ್ಯ ಮುಖ್ಯಮಂತ್ರಿಯವರು ನನಗಿಂತ ಮೊದಲೇ ಹೇಳಿದರು. ಈ ರಾಜ್ಯ ದಲ್ಲಿ ಅದರಲ್ಲಿಯೂ ಇಡೀ ದೇಶದಲ್ಲಿ ಪ್ರಪ್ರಥಮವಾಗಿ ಒಬ್ಬ ಮಹಿಳೆಯರಿಗೆ ಈ ಒಂದು ಅಧ್ಯಕ್ಷಸ್ಥಾನವನ್ನು ಕೊಟ್ಟಿರುವುದು ಇಡೀ ಕನ್ನಡನಾಡಿಗೆ ಒಂದು ರೀತಿ ಗೌರವ ತರತಕ್ಕದ್ದು. ಆದರೆ ನಮಗೆ ಒಂದು ಬಾಂಬ್ ಹಾಕಿದ ಹಾಗೆ ಒಂದು ಮಾತನ್ನು ಹೇಳಿದರು. ಇದರಿಂದ ಅವರ ಮುಖ ನೋಡಿದರೆ ನಾವು ಗಲಾಟೆ ಮಾಡಬೇಕೇ, ಬೇಡವೇ ಎಂಬ ಪ್ರಶ್ನೆ ಬರುತ್ತದೆ. ಆದ್ದರಿಂದ ನಾವು ಇನ್ನುಮುಂದೆ ಅವರ ಕಡೆ ನೋಡುವುದೇ ಇಲ್ಲ. ಸುಮ್ಮನೆ ಕೆಳಗೆ ಮುಖ ಮಾಡಿಕೊಂಡು ಮಾತ

ನಾಡುತ್ತೇವೆ. ಅವರನ್ನು ನೋಡಿದರೆ ಮುಂದೆ ಯಾವರೀತಿ ಫರ್ಷಣ್ ಮಾಡಬೇಕೆಂಬ ಬಗ್ಗೆ ನಾವು ವಿಚಾರ ಮಾಡಬೇಕಾಗಿದೆ. ತಾವು ನನ್ನನ್ನು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ನೋಡಿದ್ದೀರಿ. ತಾವು ಯಾವ ಪಾರ್ಟಿಯಲ್ಲಿದ್ದರೂ ನನ್ನ ಬಗ್ಗೆ ತಮಗೆ ಬಹಳ ಅಭಿಮಾನವಿದೆ. ನಾನು ಏನೇ ಗರಾಟೆ ಮಾಡಿದರೂ ಪರೋಕ್ಷವಾಗಿಯಾದರೂ ತಮಗೆ ನನ್ನ ಮೇಲೆ ತುಂಬಾ ಅಭಿಮಾನವಿದೆ.

ಶ್ರೀ ಎಚ್. ಸಿದ್ದವೀರಪ್ಪ.—ಆ ಅಭಿಮಾನವನ್ನು ಕಳೆದುಕೊಳ್ಳಬೇಡಿ.

ಶ್ರೀ ಪಾಟಾಳ್ ನಾಗರಾಜ್.—ಮುಂದೆ ನಿಮ್ಮಗಳ ಅಭಿಮಾನವನ್ನು ಕಳೆದುಕೊಳ್ಳಬೇಕಾಗುತ್ತದೆ. ಇವತ್ತು ತಮ್ಮನ್ನು ಅಧ್ಯಕ್ಷರಾಗಿ ಚುನಾಯಿಸಿರುವುದರಿಂದ ನಾನು ಬಹಳ ಸಂತೋಷಪಡುತ್ತೇನೆ. ನಾನು ತಮ್ಮನ್ನು ಪುನಸ್ಕಾರ, ಅತ್ಮೀಯತೆಯಿಂದ ಸ್ವಾಗತಿಸುತ್ತೇನೆ. ತಮ್ಮ ಅಧಿಕಾರದಲ್ಲಿ ನಾವು ಕೊಡತಕ್ಕ ಸಲಹಾ ಸೂಚನೆಗಳನ್ನು ಚೆನ್ನಾಗಿ ಯೋಚನೆಮಾಡಿ, ಯಾವುದೇ ವಿಷಯದ ಬಗ್ಗೆ ನಿಮ್ಮ ಪಕ್ಷದ ಪರವಾಗಿ ಹೊಂದಿಕೊಂಡು ಮಾತನಾಡದೆ ನ್ಯಾಯವಾಗಿ ಪ್ರತಿಯೊಂದು ವಿಷಯವನ್ನು ತೀರ್ಮಾನಮಾಡುತ್ತೀರಿ ಎಂದು ನಾನು ನಂಬಿರುತ್ತೇನೆ. ಬಹುಶಃ ಈ ಸಾರಿ ವಿರೋಧಪಕ್ಷದಲ್ಲಿದ್ದಂಥ ಬಹುತೇಕ ಜನ ಎದುರು ಪಕ್ಷಕ್ಕೆ ಹೋಗಿದ್ದಾರೆ. ನನ್ನನ್ನು ಗರಾಟೆ ಮಾಡು ಎಂಬುದಾಗಿ ಹೇಳುತ್ತಿದ್ದಂಥ ಮಾನ್ಯ ಶ್ರೀ ಚೆನ್ನಬಸಪ್ಪನವರೇ ನಮ್ಮ ಎದರು ಪಕ್ಷದಲ್ಲಿದ್ದಾರೆ. ಕಾಲಚಕ್ರ ಹೇಗೆ ಆಯಿತು ಎಂಬುದಾಗಿ ನಾವು ಈಗ ಹೇಳಬೇಕಾಗುತ್ತದೆ. ಇನ್ನು ಯಾವರೀತಿ ಹೇಳಬೇಕೋ ನನಗಂತೂ ಗೊತ್ತಾಗುವುದಿಲ್ಲ. ಒಂದುಕಡೆ ಮಾನ್ಯ ಶ್ರೀ ನಂಜೇಗೌಡರು ಹಾರಂಗಿ, ಹಾರಂಗಿ ಪ್ರಾಜೆಕ್ಟ್ ಎಂಬುದಾಗಿ ಹೇಳುತ್ತಿದ್ದರು. ಇನ್ನೊಂದು ಕಡೆ ಮಾನ್ಯ ಶ್ರೀ ಜಯಪ್ರಕಾಶ್ ನಾರಾಯಣ್ ಅವರು ಹರಿಜನ ಗಿರಿಜನ ಎಂದು ಹೇಳುತ್ತಿದ್ದರು. ಇನ್ನು ಮಾನ್ಯ ಶ್ರೀ ಕೆ. ಎಚ್. ಪಾಟೀಲ್ ಅವರು, ಮತ್ತು ಮಾನ್ಯ ಶ್ರೀ ಸಿದ್ದವೀರಪ್ಪನವರು ನನ್ನನ್ನು ಎತ್ತಿಕಟ್ಟಿ ನಿಲ್ಲಿಸುವುದು ಮತ್ತೆ ಕೂಡಿಸುವುದು, ಈರೀತಿ ಮಾಡಿ ಮಾಡಿ ಕೊನೆಗೆ 1972ಕ್ಕೆ ಸರ್ಕಾರವನ್ನು ಅವರೇ ಹಿಡಿದುಕೊಂಡು ಕೂತುಕೊಂಡರು. ನಾವು ಈ ಕಡೆಯೇ ಇದ್ದೇವೆ. ನಮ್ಮ ಜೊತೆಯಲ್ಲಿ ಸೇರಿಕೊಂಡು ಗುದ್ದಾಟ ಮಾಡುತ್ತಿದ್ದವರಲ್ಲಿ ಅನೇಕರು ಈಗ ಆಕಡೆ ಇದ್ದಾರೆ. ಅಂತಹವರ ಮೇಲೆ ಇನ್ನುಮುಂದೆ ಯಾವ ರೀತಿಯಲ್ಲಿ ಗುದ್ದಾಟ ಮಾಡಬೇಕೆಂಬುದನ್ನು ನಾವು ಈಗಾಗಲೇ ಯೋಚನೆಮಾಡುತ್ತಿದ್ದೇವೆ. ಹಾಳೂರಿಗೆ ಉಳಿದವನೇ ಗೌಡ ಎಂಬುದಾಗಿ ನಾವು ಇಲ್ಲಿ ಈ ಕಡೆ ಕೂತುಕೊಂಡಿದ್ದೇವೆ. ತಮ್ಮಲ್ಲಿ ನಾನು ಕೈಮುಗಿದು ಕಳಕಳಿಯಿಂದ ಪ್ರಾರ್ಥನೆ ಮಾಡುವುದೇನೆಂದರೆ, ಈ ರಾಜ್ಯದ ಭವ್ಯ ಭವಿಷ್ಯವನ್ನು ನಾವು ವಿಚಾರಮಾಡಿ ನೋಡಿದರೆ, ಇನ್ನು ಮುಂದೆ ಅಷ್ಟಾಗಿ ರಾಜಕೀಯ ಬರಲಾರದೆಂದು ನಾವು ಮನಗಂಡಿರುವುದರಿಂದ ನಾವು ನಮ್ಮ ಕ್ಷೇತ್ರಾದಪ್ಪು ಸೇವೆಯನ್ನು ಮಾಡುವ ಸಂದರ್ಭದಲ್ಲಿ ಏನಾದರೂ ಉಗ್ರ ಘಟನೆಗಳು ನಡೆದರೂ, ಅವನ್ನು ನ್ಯಾಯವಾದ ರೀತಿಯಲ್ಲಿ ತಾವು ತೀರ್ಮಾನ ಮಾಡಿ ನಮ್ಮನ್ನು ಸರಿಯಾದ ರೀತಿಯಲ್ಲಿ ತಗೆದುಕೊಂಡು ಹೋಗಬೇಕು. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ಹಾಗೆ, ತಾವು ನೋಡುವುದಕ್ಕೆ ಸ್ತ್ರೀ ಆಗಿದ್ದರೂ ಒಂದು ರೀತಿ ಗಂಡಸಿನ ರೀತಿಯಲ್ಲಿ ಹೋರಾಟ ನಡೆಸಿಕೊಂಡು ಬಂದಿದ್ದೀರಿ. ತಮ್ಮನ್ನು ಸೋಲಿಸತಕ್ಕ ಒಬ್ಬ ಗಂಡಸೂ ಹುಟ್ಟಲಿಲ್ಲವಲ್ಲಾ ಎಂದು ನನಗನ್ನಿಸುತ್ತದೆ. ಅಂದರೆ ತಾವೇ ಗಂಡಸು ರೂಪ, ಗಂಡಸು ಅವತಾರದಂತೆ ಇದ್ದುಕೊಂಡು ಅಷ್ಟು ವಿನಯವಾಗಿ ಕೆಲಸ ಮಾಡಬಲ್ಲವರಾಗಿ ಇದ್ದೀರಿ. ತಾವು ಮೂರು ಬಾರಿ ಶಾಸಕರಾಗಿ ಬಂದಿದ್ದೀರಿ. ಹಿಂದೆ ಸರ್ಕಾರವನ್ನು ಬೈಯುತ್ತಿದ್ದ ಭಾಷಣಗಳನ್ನು ತಮ್ಮಿಂದ ನಾವು ಕೇಳುತ್ತಿದ್ದೆವು. ಬಹಳ ಸಂತೋಷವಾಗುತ್ತಿತ್ತು. ಇನ್ನುಮುಂದೆ ಸರ್ಕಾರವನ್ನು ಹೊಗಳತಕ್ಕ ನಿಮ್ಮ ರೂಲಿಂಗ್ ನೋಡಿ ನಮಗೆ ವ್ಯಥೆಯಾಗಬಹುದು. ಈ ಎರಡು ವಿಚಾರಗಳ ಬಗ್ಗೆ ತಾವು ಚೆನ್ನಾಗಿ ಯೋಚಿಸಿ, ತಮ್ಮ ಕೆಲಸಕಾರ್ಯಗಳನ್ನು ನಿಷ್ಪಕ್ಷಪಾತವಾಗಿ ನ್ಯಾಯವಾದ ರೀತಿಯಲ್ಲಿ ನಡೆಸಿಕೊಂಡು ಈ ಕಡೆಯಲ್ಲರ ತಕ್ಕ ಸದನ್ಯರಿಗೆ ಸಂಪೂರ್ಣ ನ್ಯಾಯವನ್ನು ಕಲ್ಪಿಸಿಕೊಡಬೇಕೆಂದು ನನ್ನ ಪರವಾಗಿಯೂ ಮತ್ತು ನಾಡಿನ ಪರವಾಗಿಯೂ ತಮಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ (ಆರೋಗ್ಯ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ ಈ ದಿವಸ ತಮ್ಮನ್ನು ಅಭಿನಂದಿಸುವ ಕಾರ್ಯದಲ್ಲಿ ಭಾಗವಹಿಸಲು ನನಗೆ ಬಹಳ ಸಂತೋಷ ಉಂಟಾಗಿದೆ. ನಾನು ತಮ್ಮನ್ನೂ ಮತ್ತು ತಮ್ಮ ಮನೆತನವನ್ನೂ ಅನೇಕ ವರ್ಷಗಳಿಂದ ಬಲ್ಲೆ. ತಮ್ಮ ಮನೆತನ ಮೈಸೂರು ಜಿಲ್ಲೆಯಲ್ಲಿ ಒಂದು ಬಹಳ ಹೆಸರಾದ ಮನೆತನ. ದೇಶಸೇವೆ ಮತ್ತು ಸಮಾಜಸೇವೆಗಳಲ್ಲಿ ತಮ್ಮ ಮನೆತನ ಪ್ರಖ್ಯಾತಿಗಳಿಸಿದೆ. ಮೈಸೂರು ನಗರದಲ್ಲಿ ತಮ್ಮ ಯಜಮಾನರು ಒಂದು ವಿದ್ಯಾರ್ಥಿ ನಿಲಯವನ್ನು ಸ್ಥಾಪಿಸಿ ತನ್ಮೂಲಕ ಬಹಳ ಹೆಚ್ಚಿನ ರೀತಿಯಲ್ಲಿ ಸಮಾಜ ಸೇವೆಯನ್ನು ಮಾಡಿದ್ದಾರೆ. ಆ ತಮ್ಮ ವಿದ್ಯಾರ್ಥಿ ನಿಲಯದಲ್ಲಿ ಹಿಂದೆ ನಾನೂ ಒಬ್ಬ ನ್ಯೂಡೆಂಟಾ

(ಶ್ರೀ ಎಚ್. ಸಿದ್ಧವೀರಪ್ಪ)

ಗಿದ್ದೆ. ನಾವುಗಳು ಯಾರಾದರೂ ತಮ್ಮ ಕ್ಷೇತ್ರಕ್ಕೆ ಹೋಗಿ ನೋಡಿದಾಗ ಮಾತ್ರ ಅಲ್ಲಿ ಜನರು ಎಷ್ಟರಮಟ್ಟಿಗೆ ತಮ್ಮ ಮನೆತನದ ಬಗ್ಗೆ ಒಂದು ಅಭಿಮಾನ ಇಟ್ಟುಕೊಂಡಿದ್ದಾರೆ, ಎಷ್ಟರಮಟ್ಟಿಗೆ ಗೌರವದನ್ನಿಟ್ಟುಕೊಂಡಿದ್ದಾರೆ ಎಂಬುದು ಗೊತ್ತಾಗುತ್ತದೆ. ನಾನು ಒಂದಾವರ್ತಿ ತಮ್ಮ ಕ್ಷೇತ್ರಕ್ಕೆ ಬಂದಿದ್ದಾಗ ಅಲ್ಲಿಯ ಜನರು ತಮ್ಮ ಮನೆತನದ ಬಗ್ಗೆ ಎಷ್ಟರಮಟ್ಟಿನ ಅಭಿಮಾನವನ್ನು ಇಟ್ಟುಕೊಂಡಿದ್ದಾರೆ ಎಂಬುದನ್ನು ನೋಡಿ ನನಗೆ ಬಹಳ ಆನಂದವಾಯಿತು.

ಇನ್ನು ತಮಗಿರತಕ್ಕ ಅಪಾರ ರಾಜಕೀಯ ಜ್ಞಾನದ ಬಗ್ಗೆ ಹಾಗೂ ರಾಜಕೀಯ ಕ್ಷೇತ್ರದಲ್ಲಿ ತಮಗಿರತಕ್ಕ ಅನುಭವದ ಬಗ್ಗೆ ಏನು ಹೇಳಿದ್ದಾರೋ ಅದನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ತಾವು ಈ ದಿವಸ ಈ ಮಾನ್ಯ ಸಭೆಗೆ ಅಧ್ಯಕ್ಷರಾಗಿರತಕ್ಕದ್ದು ಕೇವಲ ಇಲ್ಲಿರತಕ್ಕ ಸದಸ್ಯರಾದ ನಮಗೆ ಮಾತ್ರವೇ ಅಲ್ಲದೆ ಇಡೀ ದೇಶಕ್ಕೇ ಒಂದು ಹೆಮ್ಮೆಯನ್ನು ತರತಕ್ಕದ್ದಾಗಿದೆ. ಐದು ವರ್ಷಗಳ ಕಾಲವಾದ ನಂತರ ಇಂಥವರು ಒಬ್ಬರು ಈ ಮಾನ್ಯ ಸಭೆಗೆ ಅಧ್ಯಕ್ಷರಾಗಿದ್ದರು, ಅಂಥ ಒಂದು ಪ್ರಶಂಶನೀಯವಾದ ರೀತಿಯಲ್ಲಿ ಈ ಸಭೆಯ ಕಾರ್ಯಕಲಾಪಗಳನ್ನು ನಡೆಸಿಕೊಟ್ಟರು ಎಂಬುದನ್ನು ಸುವರ್ಣಾಕ್ಷರಗಳಲ್ಲಿ ಬರೆಯತಕ್ಕ ಕಾಲಬರುತ್ತೆ ಎಂಬುದಾಗಿ ನಾನು ಭಾವಿಸಿದ್ದೇನೆ.

ಹಿಂದೆ ಇದೇ ಸಭೆಯ ಅಧ್ಯಕ್ಷರಾಗಿದ್ದ ಮಾನ್ಯ ಎಚ್. ಸಿದ್ಧಯ್ಯನವರು ಇಲ್ಲಿ ಅಧ್ಯಕ್ಷರಾಗಿದ್ದು, ಬಹಳ ಒಳ್ಳೆಯ ಹೆಸರನ್ನು ಗಳಿಸಿಕೊಂಡರು. ಅಂದರೆ ಬೇರೆಯವರು ಒಳ್ಳೇ ಹೆಸರನ್ನು ಗಳಿಸಿಕೊಳ್ಳಲಿಲ್ಲ ಎಂದು ನಾನು ಹೇಳುತ್ತಿಲ್ಲ. ಶ್ರೀಮಾನ್ ಬಾಳಿಗರವರೂ ಒಳ್ಳೇ ಹೆಸರನ್ನು ತೆಗೆದುಕೊಂಡರು. ತಾವೂ ಕೂಡ ಹಾಗೇ ಒಳ್ಳೇ ಹೆಸರನ್ನು ತೆಗೆದುಕೊಳ್ಳುತ್ತೀರಿ ಎನ್ನುವುದರಲ್ಲಿ ನಮಗೆಲ್ಲರಿಗೂ ನಂಬಿಕೆ ಇದೆ. ಪ್ರಜಾಪ್ರಭುತ್ವವು ಒಂದು ಒಳ್ಳೇ ದಾರಿಯಲ್ಲಿ ಬೆಳೆಯುವುದಕ್ಕೆ ತಾವು ಒಂದು ಒಳ್ಳೇ ದಾರಿಯನ್ನು ಹಾಕಿಕೊಡುತ್ತೀರೆಂಬ ಭರವಸೆ ನಮಗಿದೆ. ಈಗಾಗಲೇ ಮಾತನಾಡಿದ ಮಾನ್ಯ ಸದಸ್ಯರುಗಳಾದ ವಾಟಾಳ್ ನಾಗರಾಜು ಹಾಗೂ ನಾಗಣ್ಣನವರು ಹೇಳಿದಂತೆ ಈ ಸಭೆಯಲ್ಲಿರತಕ್ಕ ಏನು ಎರಡು ಪಕ್ಷಗಳು—ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳು ಇವೆ ಅವು ಒಂದು ನಾಣ್ಯಕ್ಕೆ ಎರಡು ಮುಖಗಳಿದ್ದಂತೆ. ಆಡಳಿತ ಪಕ್ಷ ಮತ್ತು ವಿರೋಧಪಕ್ಷಗಳೇನಿವೆ ಇವೆರೆಡೂ ದೇಶದ ಹಿತದೃಷ್ಟಿಯಿಂದ ಪ್ರಜಾಪ್ರಭುತ್ವವನ್ನು ಒಂದು ಸರಿಯಾದ ರೀತಿಯಲ್ಲಿ ಬೆಳೆಸಿಕೊಂಡು ಬರುವುದು ಅತ್ಯಗತ್ಯ. ಪ್ರಜಾಪ್ರಭುತ್ವದ ಯಶಸ್ಸು. ಈ ಎರಡೂ ಪಕ್ಷಗಳ ಅತ್ಯಯವನ್ನವಲಂಬಿಸಿದೆ. ಅಧ್ಯಕ್ಷರಾದ ತಾವು ಯಾರನ್ನೂ ಎತ್ತಿಕಟ್ಟುವುದೂ ಇಲ್ಲ—ಅಥವಾ ಅತ್ತ ಕಡೆ ಇರತಕ್ಕವರನ್ನೂ ಇಳಿಸುವುದೂ ಇಲ್ಲ. ತಾವು ಉಭಯ ಪಕ್ಷಗಳವರನ್ನೂ ಒಂದೇ ದೃಷ್ಟಿಯಿಂದ ಕಾಣುತ್ತೀರೆಂಬ ಭರವಸೆ ನಮಗಿದೆ. ಈ ದಿವಸ ಆ ಅಧ್ಯಕ್ಷಸ್ಥಾನದಲ್ಲಿರತಕ್ಕವರು ಶ್ರೀಮತಿ ನಾಗರತ್ನಮ್ಮನವರು—ಹೆಣ್ಣುಮಗಳು. ಅವರ ವಿಚಾರದಲ್ಲಿ ಸೌಜನ್ಯತೆಯಿಂದ ವರ್ತಿಸಬೇಕು ಎಂದು ಎಲ್ಲರೂ ಭಾವಿಸತಕ್ಕದ್ದು ಹಾಗಿರಲಿ, ಆದರೆ ತಾವು ಈ ಸಭೆಯಲ್ಲಿ ಏನೇ ಒಂದು ರೂಲಿಂಗನ್ನು ಕೊಡಲಿ ಅದನ್ನು ನಾವೆಲ್ಲರೂ ಶಿರಸಾವಹಿಸಿ ಪಾಲಿಸಿಕೊಂಡು ಬರುತ್ತೇವೆ ಎಂಬ ಭರವಸೆಯನ್ನು ನಾನು ತಮಗೆ ಕೊಡಬಯಸುತ್ತೇನೆ. ತಮ್ಮ ರೂಲಿಂಗುಗಳು ಯಾವತ್ತೂ ನಿಷ್ಪಕ್ಷಪಾತವಾದವುಗಳಾಗಿರುತ್ತವೆಂಬುದನ್ನು ನಾನು ಬಲ್ಲೆ. ಈ ಸಭೆಯಲ್ಲಿ ನಡೆಯತಕ್ಕ ಚರ್ಚೆಗಳ ಬಗ್ಗೆ ಇಲ್ಲಿರತಕ್ಕ ಮಾನ್ಯ ಸದಸ್ಯರುಗಳಿಗೆ ಒಂದು ಗಂಟೆಗೆ ಎಷ್ಟು ದುಡ್ಡು ಖರ್ಚಾಗುತ್ತದೆ ಎಂಬುದನ್ನು ತಾವೆಲ್ಲರೂ ಗಮನಿಸಿ ಆ ವೆಚ್ಚವನ್ನು ಹೇಗೆ ಸದುಪಯೋಗಪಡಿಸಿಕೊಳ್ಳಬೇಕು ಎನ್ನತಕ್ಕ ಬಗ್ಗೆ ವಿರೋಧ ಪಕ್ಷದವರು ಟೀಕೆಗಳನ್ನು ಮಾಡಲೇಬೇಕಾಗುತ್ತದೆ. ಅಂಥ ಟೀಕೆಗಳಿಂದ ದೇಶಕ್ಕೆ ಅನುಕೂಲವಾಗುತ್ತದೆ. ಇಂಥ ಅನೇಕ ವಿಷಯಗಳಲ್ಲಿ ಅಧ್ಯಕ್ಷರಾದ ತಮಗೆ ಅಪಾರವಾದ ಅನುಭವ ಇರುವುದರಿಂದ ತಾವು ಉಭಯ ಪಕ್ಷಗಳವರನ್ನು ಒಂದು ಒಳ್ಳೇ ದಾರಿಯಲ್ಲೇ ತೆಗೆದುಕೊಂಡು ಹೋಗುತ್ತೀರಿ ಎಂಬ ಭರವಸೆ ನಮಗಿದೆ. ಈ ಸಭೆಯು ಕಾರ್ಯಕರಾಪಗಳಲ್ಲಿ ತಮಗೆ ನಮ್ಮಿಂದ ಬೇಕಾಗತಕ್ಕ ಎಲ್ಲ ಸಹಾಯಗಳನ್ನೂ ನಾವು ನೀಡಲು ಸದಾ ಸಿದ್ಧರಾಗಿದ್ದೇವೆ. ಈ ಎರ್ನಾಲ್ ವಿಚಾರಗಳಲ್ಲೂ ಭಗವಂತನು ತಮಗೆ ಒಳ್ಳೆಯ ಮಾರ್ಗದರ್ಶನ ಮಾಡಲೆಂದು ಹಾರೈಸುತ್ತೇನೆ. ಇಂಥ ಅಧಿಕಾರ ಸ್ಥಾನವನ್ನು ಅಲಂಕರಿಸುವುದರಲ್ಲಿ ತಾವು ಎರಡನೆಯವರು, ಎಂದನೆಯವರು ಡಾ. ನುಶೀರಾನಾಯರ್ ಅವರು ಎಂಬುದಾಗಿ ಆಗಲೇ ಹೇಳಿದರು. ಅದರೆ ಹಿಂದೆ ಆ ದೆಹಲಿಯ ಒಂದು (ಸಿ) ರಾಜ್ಯವಾಗಿತ್ತು; ಇದರಂತೆ ಅದು ಒಂದು (ಎ) ಸ್ಟೇಟಾಗಿರಲಿಲ್ಲ. ಈ ದಿವಸ ಇಂಥ ಒಂದು (ಎ) ಸ್ಟೇಟಿನ ಶಾಸನ ಸಭೆಗೆ ಅಧ್ಯಕ್ಷರನ್ನಾಗಿ ಆರಿಸಿದ್ದರ ಬಗ್ಗೆ ನನಗೆ ಬಹಳ ಹೆಮ್ಮೆ ಉಂಟಾಗಿದೆ. ಈ ವಿಚಾರದಲ್ಲಿ ನಾವು ತಮ್ಮನ್ನು ಹೊಗಳುವುದಿರಲಿ—ಇಡೀ ಭಾರತವೇ ತಮ್ಮನ್ನು ಹೊಗಳುತ್ತದೆ ಎಂದು ಹೇಳಿ ಭಗವಂತನು ತಮಗೆ ಒಳ್ಳೆಯದನ್ನು ಮಾಡಲೆಂದು ಹಾರೈಸಿ, ತಮ್ಮನ್ನು ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

† ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).—ಅಧ್ಯಕ್ಷರೇ, ಈ ದಿವಸ ತಮ್ಮನ್ನು ಈ ಮಾನ್ಯ ಸಭೆಯ ಅಧ್ಯಕ್ಷರನ್ನಾಗಿ ಆರಿಸಿರತಕ್ಕ ಬಗ್ಗೆ ಅನೇಕರು ಈಗಾಗಲೇ ತಮಗೆ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ. ನಾನೂ ಕೂಡ ತಮಗೆ ಈ ಸಂದರ್ಭದಲ್ಲಿ ನನ್ನ ಅಭಿನಂದನೆಗಳನ್ನರ್ಪಿಸುತ್ತೇನೆ. ಈಗಾಗಲೇ ಮಾತನಾಡಿರತಕ್ಕ ಮಾನ್ಯ ಸದಸ್ಯರುಗಳಾದ ಶ್ರೀ ವಾಟಾಳ್ ನಾಗರಾಜ್ ಅವರು ಏನು ಹೇಳಿದ್ದಾರೋ ಅದನ್ನು ನಾನೂ ಕೂಡ ಅನುಮೋದಿಸುತ್ತೇನೆ. ಹಾಗೂ ಸಭಾ ನಾಯಕರು ಹೇಳಿದ್ದನ್ನೂ ಕೂಡ ಒಪ್ಪುತ್ತೇನೆ.

ತಮಗೆ ಈ ಶಾಸನ ಸಭಾ ಕಾರ್ಯಗಳಲ್ಲಿ ಅಪಾರ ಜ್ಞಾನವಿದೆ. ಅಷ್ಟೇ ಅಲ್ಲದೆ ತಮಗೆ ಲೌಕಿಕ ವಿಚಾರಗಳಲ್ಲೂ ಅಪಾರ ಜ್ಞಾನವಿದೆ, ಅನುಭವವಿದೆ. ತಾವು ಈ ಸಭೆಯ ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸಿಕೊಂಡು ಹೋಗುತ್ತೀರೆಂಬ ನಂಬಿಕೆ ನನಗೆ ಇದೆ. ತಾವೂ ಕೂಡ ಹಿಂದೆ ವಿರೋಧಪಕ್ಷದಲ್ಲೇ ಇದ್ದವರಾದ್ದರಿಂದ ತಮಗೆ ವಿರೋಧ ಪಕ್ಷದವರ ಬಗ್ಗೆ ಹೇಗೆ ನಡೆದುಕೊಳ್ಳಬೇಕು ಎಂಬುದು ತಿಳಿದೇ ಇದೆ. ಈ ಸಭೆಯ ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸಿಕೊಂಡು ಹೋಗಲು ತಮಗೆ ವಿರೋಧ ಪಕ್ಷದಿಂದ ಏನು ಸಹಕಾರಗಳು ಬೇಕೋ ಅದನ್ನು ಕೊಡುವುದಕ್ಕೆ ನಾವು ಸದಾ ಸಿದ್ಧರಾಗಿದ್ದೇವೆ. ಪ್ರಜಾಪ್ರಭುತ್ವದಲ್ಲಿ ಆಡಳಿತವು ಸುಗಮವಾಗಿ ನಡೆದುಕೊಂಡು ಹೋಗಬೇಕಾದರೆ ಇಡೀ ದೇಶದ ಹಿತರಕ್ಷಣೆಯನ್ನು ಆಡಳಿತ ಪಂದು ಸಮದೃಷ್ಟಿಯಿಂದ ನೋಡಬೇಕು. ಹಾಗೆ ಒಂದು ಸಮದೃಷ್ಟಿಯಿಂದ ಆಡಳಿತ ನಡೆಯುವಂತೆ ಮಾಡಲು ಇಲ್ಲಿ ಒಂದು ಸುವ್ಯವಸ್ಥಿತವಾದ ವಿರೋಧ ಪಕ್ಷ ಇರಬೇಕಾದುದು ಅತ್ಯಗತ್ಯ. ತಾವು ಇಲ್ಲಿರತಕ್ಕ ಎಲ್ಲ ಪಕ್ಷಗಳನ್ನೂ ಒಂದು ಸಮನಾದ ದೃಷ್ಟಿಯಿಂದಲೇ ಕಾಣುತ್ತೀರೆಂದು ನಂಬಿ, ತಮ್ಮನ್ನು ಈ ದಿವಸ ಈ ಅಧ್ಯಕ್ಷಸ್ಥಾನಕ್ಕೆ ಚುನಾಯಿಸಿದುದಕ್ಕೆ ನನ್ನ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತು ಗಳನ್ನು ಮುಗಿಸುತ್ತೇನೆ.

† Smt. WINNIFRED F. FERNANDES (Coondapur).—Hon'ble Madam Speaker, Please accept my hearty congratulations on behalf of the people of our State and on my own behalf. This is the first time in the history of our Legislative Assembly that a lady is elected as a Speaker. So I must thank our Leader and also hon. Members for their generosity and goodwill. May God Almighty grant you His grace and strength to carry on your duties impartially. Thank you.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ಈ ದಿವಸ ತಮ್ಮನ್ನು ಈ ಮಾನ್ಯ ಸಭೆಯ ಅಧ್ಯಕ್ಷ ಸ್ಥಾನಕ್ಕೆ ಆರಿಸಿರತಕ್ಕ ಬಗ್ಗೆ ತಮಗೆ ನಾನು ನಮ್ಮ ಸೋಷಿಯಲಿಸ್ಟ್ ಪಾರ್ಟಿಯ ಪರವಾಗಿ ಅಭಿನಂದನೆಗಳನ್ನರ್ಪಿಸುತ್ತೇನೆ. ಅದರೆ ಹಾಗೇನೇ ಈ ಸಂದರ್ಭದಲ್ಲಿ ನನಗೆ ಅಷ್ಟಾಗಿ ತಮ್ಮ ಗುಣಗಳ ಬಗ್ಗೆ ಮತ್ತು ತಮ್ಮ ಚರಿತ್ರೆಯ ಬಗ್ಗೆ ಹೆಚ್ಚಿನ ವಿಚಾರಗಳು ಗೊತ್ತಿಲ್ಲ. ಆದರೆ ಈಗಾಗಲೆ ಏನು ಕೆಲವರು ಇಲ್ಲಿ ತಮ್ಮ ಗುಣಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಅದನ್ನೇ ನಾನೂ ಕೂಡ ಅನುಮೋದಿಸುತ್ತೇನೆ. ಆದರೆ ಇದೇ ಸಂದರ್ಭದಲ್ಲಿ ನಾನು ಒಂದು ವಿಷಯವನ್ನು ತಮ್ಮ ಅವಗಾಹನೆಗೆ ತರಬೇಕಾಗಿದೆ. ಈ ಹಿಂದೆ ಮಾತನಾಡಿದೆ ಸಭಾ ನಾಯಕರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅದೇನೆಂದರೆ ಇಲ್ಲಿ ನಡೆಯತಕ್ಕ ಕಾರ್ಯಕಲಾಪಗಳ ಬಗ್ಗೆ ಒಂದು ಗಂಟೆಗೆ ಹಲವಾರು ರೂಪಾಯಿಗಳು ಖರ್ಚಾಗುತ್ತವೆ, ಅಂದರೆ ಬಹಳ ಹಣ ಖರ್ಚಾಗುತ್ತದೆ. ಆದ್ದರಿಂದ ಈ ಸಭೆಯ ಪ್ರತಿ ಒಂದು ನಿಮಿಷವನ್ನೂ ಕೂಡ ಬಹಳ ಉಪಯುಕ್ತವಾಗತಕ್ಕ ರೀತಿ ಯಲ್ಲಿ ಕೆಲಸವಾಡಬೇಕು ಎಂಬುದಾಗಿ ಹೇಳಿದ್ದನ್ನು ನಾನೂ ಕೂಡ ಒಪ್ಪುತ್ತೇನೆ.

ಜೊತೆಗೆ ಕೆಲವು ಸಾರಿ ಡೆಡ್ ರಾಕ್ ಬೀಳುತ್ತದೆ, ಆ ಸಂದರ್ಭದಲ್ಲೂ ಕೂಡ ಕೆಲವು ಕಾರ್ಯಕಲಾಪಗಳು ನಡೆಯುತ್ತವೆ. ಅದನ್ನು ಸಭಾಧ್ಯಕ್ಷರು ಮನಗಾಣಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ. ಕಾರಣ ಇಷ್ಟೆ. ಸರ್ಕಾರದ ಹಣ ಕೋಟಿ ಕೋಟಿ ಗಟ್ಟಲೆ ಪೋಲು ಆಗುತ್ತಿದೆ ಎನ್ನುವ ಸಂದರ್ಭ ಕಂಡುಬಂದಾಗ, ದೇಶದ ಹಿತದೃಷ್ಟಿಯಿಂದ, ರಾಜ್ಯದ ಹಿತದೃಷ್ಟಿ ಯಿಂದ ಅದನ್ನು ತಿಳಿಸುವುದಕ್ಕೋಸ್ಕರ ಸ್ವಲ್ಪ ಬಿಗಿಯಾಗಿ ಮಾತನಾಡಬಹುದು. ಅಂತಹ ಸಂದರ್ಭದಲ್ಲಿ ಮತ್ತು ಭಾಷೆಯಬಗ್ಗೆ ಸ್ವಲ್ಪ ಚಕಮುಕಿ ನಡೆಯುತ್ತದೆ. ಉದಾಹರಣೆಗೆ ಇಲ್ಲಿ ನಮ್ಮ ಮಹಾರಾಷ್ಟ್ರ ಏಕೀಕರಣದ ಸದಸ್ಯರು ಇದ್ದಾರೆ, ಕನ್ನಡಪಕ್ಷದ ವಾಟಾಳ್ ನಾಗರಾಜ್ ರವರು ಇದ್ದಾರೆ. ಮೊದಲು ಈ ಸಭೆಯಲ್ಲಿ ನಮ್ಮ ಗೆಳೆಯ ಶ್ರೀ ವಾಟಾಳ್ ನಾಗರಾಜ್ ಅವರು ಒಬ್ಬರೇ ಇದ್ದರು. ಈಗ ನಮ್ಮ ಕನ್ನಡದ ಅಭಿಮಾನಿಗಳಾದ ಶ್ರೀ ಕೋಣಂದೂರು ಲಿಂಗಪ್ಪ

(ಶ್ರೀ ಎಸ್. ಬಂಗಾರಪ್ಪ)

ನವರೂ ಕೂಡ ಬಂದು ಕೂತು ಬಿಟ್ಟಿದ್ದಾರೆ. ನಮಗೆ ಕನ್ನಡದ ಬಗ್ಗೆ, ಕರ್ನಾಟಕದೇಶದ ಬಗ್ಗೆ ಎಷ್ಟು ಅಭಿಮಾನ ಇದೆಯೋ ಅಷ್ಟೇ ಅಭಿಮಾನ ಮಹಾರಾಷ್ಟ್ರದವರ ಮೇಲೂ ಇದೆ. ಈ ಸಂದರ್ಭದಲ್ಲಿ ಹಿಂದೆ ನಡೆದಂಥ ಘಟನೆಗಳೂ ಜ್ಞಾಪಕಕ್ಕೆ ಬರುತ್ತದೆ. ಆದುದರಿಂದ ಈಗ ಸರ್ಕಾರದ ಹಣ ಎಲ್ಲೆಲ್ಲಿ ಪೋಲು ಆಗುತ್ತದೋ ಅದರ ಬಗ್ಗೆ ನಮ್ಮ ಅಭಿಪ್ರಾಯವನ್ನು ಕೊಡಲು ಮಾತನಾಡುವುದಕ್ಕೆ ಸಮಯ ಬೇಕಾಗುತ್ತದೆ. ಆ ಸಂದರ್ಭದಲ್ಲಿ ನಮಗೆ ಮಾತನಾಡಲು ಅವಕಾಶ ಕೊಡದೇ ಹೋದರೆ ಸರ್ಕಾರದ ಜೈಜರಿಬೆಂಜಸ್‌ನಲ್ಲಿ ಯಾರು ಇರುತ್ತಾರೋ ಅವರಿಗೆ ನೀವು ಬೆಂಬಲಗಿರಾಗಿ ಇರುತ್ತೀರಿಎಂಬ ಭಾವನೆ ಬರುತ್ತದೆ. ನಮಗೆ ತಮ್ಮ ಬಗ್ಗೆ ಅಗೌರವ ಸೂಚನೆ ಮಾಡಬೇಕು, ತಮ್ಮ ಸ್ಥಾನದ ಬಗ್ಗೆ ಅಗೌರವ ಸೂಚನೆ ಮಾಡಬೇಕು ಎಂದು ಏನೂ ಇಲ್ಲ. ದೇಶದ ಹಿತದೃಷ್ಟಿಯಿಂದ, ರಾಜ್ಯದ ಹಿತದೃಷ್ಟಿಯಿಂದ ಎಲ್ಲಿ ಸರ್ಕಾರ ತಪ್ಪು ಮಾಡುತ್ತಿರುತ್ತೋ ಅದನ್ನು ಸರ್ಕಾರದ ಗಮನಕ್ಕೆ ತರುತ್ತೇವೆ. ವೈಯಕ್ತಿಕವಾಗಿ ನಿಮ್ಮ ಸ್ಥಾನಕ್ಕೆ ಬೆಲೆ ಕೊಡುತ್ತೇವೆ. ಸರ್ಕಾರಕ್ಕೆ ಡೆಡ್ ಲಾಕ್ ಬಿದ್ದಾಗ ಸರ್ಕಾರದವರೇ ಕಾಲವಿಳಂಬ ಮಾಡುತ್ತಾರೆಂದು ನಾವು ವಿನಂತಿಸಿ ಕೊಳ್ಳುತ್ತೇವೆ. ಕೋಟಿ ಕೋಟಿ ಗಟ್ಟಲೆ ಹಣ ಸರ್ಕಾರದ ಕೈಯಲ್ಲಿ ಸಿಕ್ಕಿ ಪೋಲಾಗುತ್ತಿದೆ. ಕಾಂಗ್ರೆಸ್ ಸರ್ಕಾರ ಈಗ ಹೊಸದೇನೂ ಅಲ್ಲ, ಈಪೊತ್ತಿನ ಕಾಂಗ್ರೆಸ್ಸಿನವರೂ ಹೊಸಬರೇನೂ ಅಲ್ಲ, ಈಪೊತ್ತು ಶ್ರೀ ದೇವರಾಜ್ ಅರಸ್‌ನವರು ಈ ಸಭೆಯ ನಾಯಕರಾಗಿದ್ದಾರೆ, ಇನ್ನು ಮುಂದೆ ಇನ್ನೂ ಅನೇಕ ಜನ ಬರಬಹುದು. ಶ್ರೀಮಾನ್ ನಾಗಣ್ಣನವರು ಹೇಳಿದ ಹಾಗೆ ವಿರೋಧ ಪಕ್ಷದವರು ಒಬ್ಬರನ್ನು ಲೀಡರ್ ಮಾಡುವುದಕ್ಕಾಗಲಿಲ್ಲ. ಈ ಸಭೆಯ ನಾಯಕತ್ವದ ಚುನಾವಣೆಗೆ ವಿರೋಧ ಪಕ್ಷದವರೂ ಇದ್ದಾರೆ ಎನ್ನುವುದನ್ನು ತಿಳಿಯಬೇಕು. ತಾವು ಅವಿರೋಧವಾಗಿ ಚುನಾಯಿತರಾಗಿರುವುದು ಸಂತೋಷ. ವಿರೋಧ ಪಕ್ಷದ ನಾಯಕರು ಈ ಸಭಾ ನಾಯಕತ್ವದ ಬಗ್ಗೆ ಏನು ಮಾತನಾಡಿದ್ದಾರೆ ಅನ್ನುವ ವಿಷಯವೂ ತಮಗೆ ಗೊತ್ತಿದೆ. ಆದುದರಿಂದ ಈ ಪ್ರಜಾಪ್ರಭುತ್ವಕ್ಕನುಗುಣವಾಗಿ ಮುಂದೆ ಉಪಾಧ್ಯಕ್ಷರ ಸ್ಥಾನವನ್ನು ಗಳಿಸುವುದಕ್ಕಾದರೂ ನಮಗೆ ಒಂದು ಬೆಂಬಲವನ್ನು ಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿಸಿ ಕೊಳ್ಳುತ್ತೇನೆ, ಶ್ರೀಮಾನ್ ದೇವರಾಜ್ ಅರಸ್‌ರವರು ಯೋಚನೆ ಮಾಡಿ ಉಪಾಧ್ಯಕ್ಷರ ಸ್ಥಾನವನ್ನು ವಿರೋಧ ಪಕ್ಷದವರಿಗೆ ಬಿಟ್ಟುಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನೊಂದು ವಿಷಯವನ್ನು ಮಾನ್ಯ ಅಧ್ಯಕ್ಷರ ಗಮನಕ್ಕೆ ತರುತ್ತೇನೆ. ಹಿಂದೆ ಈ ಶಾಸನ ಸಭೆಯಲ್ಲಿ ಶ್ರೀಮಾನ್ ಗೋಪಾಲಗೌಡರು ಇದ್ದಾಗ ಒಂದು ಪ್ರಶ್ನೆಯನ್ನು ಹಾಕುವುದಕ್ಕೆ ಶ್ರೀಮಾನ್ ಕೊಟಾವಳೆಯವರನ್ನು ಕೇಳಿದಾಗ ಆ ಸಂದರ್ಭದಲ್ಲಿ ಅವರು ಪಕ್ಷಾತೀತವಾಗಿ ನಡೆಯದೇ ಇದ್ದುದರಿಂದ ಅವರು ಮೈಕ್‌ನ್ನು ಕಿತ್ತು ಬಿಸಾಡಿ ಗಲಾಟೆ ಮಾಡಿದ ವಿಷಯವೂ ತಮಗೆ ಗೊತ್ತಿದೆ. ಇಂದು ಶ್ರೀಮಾನ್ ಗೋಪಾಲಗೌಡರು ಈ ಸಭೆಯಲ್ಲಿ ಇಲ್ಲ. ಅವರು ಇದ್ದಿದ್ದರೆ ತಮ್ಮ ಬಗೆ ಒಳ್ಳೆಯ ಮಾತನ್ನು ಹೇಳುತ್ತಿದ್ದರು, ಅಲ್ಲದೆ ತಮಗೆ ಎಚ್ಚರಿಕೆಯನ್ನು ಕೂಡ ಕೊಡುತ್ತಿದ್ದರು. ಇದು ನನ್ನ ವೈಯಕ್ತಿಕ ಅಭಿಪ್ರಾಯ. ತಾವೂ ಕೂಡ ಜಮೀನ್ದಾರರ ಸಂಘದ ಅಧ್ಯಕ್ಷರಾಗಿದ್ದಿರಿ. ಆದುದರಿಂದ ರೈತರ ಸಮಸ್ಯೆ ಬಂದಾಗ, ಬಡವರ ಸಮಸ್ಯೆ ಬಂದಾಗ ಈ ಸಭೆಯ ಕಾರ್ಯಕಲಾಪದ ವಿಷಯದಲ್ಲಿ ಮಾತ್ರ ತಾವು ಯಾವುದೇ ಪಕ್ಷಪಾತದಿಂದ ನಡೆದುಕೊಂಡು ಬರುವುದನ್ನು, ಯಾವತ್ತೂ ಮಾಡಬಾರದು. ಅಂತಹ ವರ್ತನೆಯನ್ನು ತಮ್ಮಿಂದ ನಿರೀಕ್ಷಿಸಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ಈ ದೃಷ್ಟಿಯಿಂದ ಸಭಾ ನಾಯಕರಿಗೆ ಒಂದು ಮಾತು ಹೇಳುತ್ತೇನೆ. ಈ ಸ್ಪರ್ಧೆಗೆ ನಾವು ಯಾರನ್ನೂ ಕೇಳುವ ಅಗತ್ಯವಿಲ್ಲ, ಇದು ಸರ್ವಾನುಮತದಿಂದ ತೀರ್ಮಾನವಾಗಿದೆ ಎನ್ನುವ ಮಾತು ಅವರು ಹೇಳುತ್ತಾ ಇರುವುದು ಬರೀ ಭಾವನೆಯಲ್ಲ ಇರಬಹುದು. ಈ ಸ್ಪರ್ಧೆಯ ಬಗ್ಗೆ ವಿರೋಧ ಪಕ್ಷದವರನ್ನೂ ಕರೆಸಿ ಮಾತನಾಡಿದ್ದರೆ ಒಳ್ಳೆಯದಾಗುತ್ತಿತ್ತು ಎಂದು ನನಗೆ ಅನಿಸುತ್ತದೆ. ವಿರೋಧ ಪಕ್ಷದ ಕಡೆಯಿಂದ ಶ್ರೀಮಾನ್ ನಾಗಣ್ಣನವರು ಸ್ಪರ್ಧಿಸಿದ್ದರೂ ಕೂಡ ಅವರನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಿಲ್ಲ. ಮೈನೂರು ರಾಜ್ಯದಲ್ಲಲ್ಲ ಕಾಂಗ್ರೆಸ್ ಸಂಪೂರ್ಣವಾಗಿ ಚುನಾವಣೆಯಲ್ಲಿ ಜಯಗಳಿಸಿಲ್ಲ. ವಿರೋಧ ಪಕ್ಷದವರೂ ಇದ್ದಾರೆ ಎನ್ನುವುದನ್ನು ತಾವು ತಿಳಿಯಬೇಕು. ಈ ಪ್ರಜಾಪ್ರಭುತ್ವದಲ್ಲಿ ಈ ಕಡೆ ಎಷ್ಟು ಜನರಿದ್ದಾರೆ, ನಾಳೆ ಎಷ್ಟು ಜನ ಇರಬಹುದು ಎನ್ನುವುದನ್ನು ಹೇಳುವುದಕ್ಕಾಗುವುದಿಲ್ಲ. ಆದುದರಿಂದ ಅಧ್ಯಕ್ಷರು ಈ ವಿಷಯವನ್ನು ಗಮನದಲ್ಲಿಟ್ಟುಕೊಂಡು ವರ್ತಿಸಬೇಕು. ತಮಗೆ ನಮ್ಮಿಂದ ಎಷ್ಟು ಸಹಾಯ, ಸಹಕಾರ ಬೇಕೋ ಅಷ್ಟನ್ನೂ ಕೊಡುತ್ತೇವೆ. ತಮಗೂ ಕೂಡ ಇಡೀ ದೇಶದ ಅಭಿಮಾನ ಇದೆ ಎನ್ನುವುದನ್ನೂ ಮರೆಯಬಾರದು. ತಮ್ಮ ಬಗ್ಗೆ ಅಭಿಮಾನ ಇಟ್ಟು, ಸಹಕಾರ ಕೊಟ್ಟವರೂ

ಕೂಡ ಒಂದೊಂದು ಸಂದರ್ಭದಲ್ಲಿ ಅಧ್ಯಕ್ಷರ ವಿಷಯದಲ್ಲಿ ಗಲಾಟೆ ಮಾಡುವ ಸನ್ನಿವೇಶವೂ ಉಂಟಾಗುತ್ತದೆ. ಆ ರೀತಿ ನಾವು ಗಲಾಟೆ ಮಾಡಿದರೂ ಕೂಡ ಅದು ಒಳ್ಳೆಯ ಉದ್ದೇಶಕ್ಕೇ ಮಾಡುತ್ತೇವೆ ಎಂದು ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ನಾವು ಏನಿದ್ದರೂ ನೇರವಾಗಿ ಮಾತನಾಡತಕ್ಕವರು. ಸೋಷಲಿಸ್ಟ್ ಪಾರ್ಟಿ ಪಕ್ಷದವರು, ನಾವು ಏನು ಹೇಳಿದರೂ ತಪ್ಪು ತಿಳಿಯದೆ ನಾವು ಒಳ್ಳೆಯ ಉದ್ದೇಶಕ್ಕೆ ಹೇಳುತ್ತೇವೆ ಎನ್ನುವುದನ್ನು ತಿಳಿದುಕೊಳ್ಳಬೇಕು. ಮತ್ತು ಅವರಿಂದ ಉತ್ತರವನ್ನೂ ಕೂಡ ನಾವು ನಿರೀಕ್ಷಣೆ ಮಾಡುತ್ತೇವೆ. ತಾವು ಹೆಣ್ಣುಮಕ್ಕಳಾದ್ದರಿಂದ ಅದರ ಬಗ್ಗೆ ಪುನಃ ಪ್ರಸ್ತಾಪ ಮಾಡುತ್ತೇನೆ. ತಾವು ಈ ಸಭೆಯ ಅಧ್ಯಕ್ಷ ಸ್ಥಾನಕ್ಕೆ ಬಂದಿರುವುದು ಒಳ್ಳೆ ವಿಷಯ. ಆರೀತಿ ತಾವು ಬರಬೇಕು. ಬಾಕಿ ಪಕ್ಷದಲ್ಲಿ ಮೈನಾರಿಟೀಸ್‌ಗೆ 100ಕ್ಕೆ 60 ಪರ್ಸೆಂಟು ಅಂತ ರಿಸರ್ವೇಷನ್ ಏನು ಇದೆಯೋ ಅದೇರೀತಿ ನಮ್ಮ ಸೋಷಲಿಸ್ಟ್ ಪಾರ್ಟಿಯ ಪಕ್ಷದ ನಿಲುವೂ ಕೂಡ ಹಾಗೆಯೇ ಇದೆ. ಹೆಣ್ಣುಮಕ್ಕಳಿಗೆ ಹೆಚ್ಚು ಪ್ರಾತಿನಿಧ್ಯ ಕೊಡಬೇಕಾದುದು ಒಳ್ಳೆಯದು ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮ್ಮನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ (ಕೋಚೆ).—ಮಾನ್ಯ ಸಭಾಧ್ಯಕ್ಷರೇ ಈಗ ತಾವು ಅಧ್ಯಕ್ಷ ಸ್ಥಾನಕ್ಕೆ ಚುನಾಯಿತರಾಗಿರುವುದಕ್ಕೆ ನಾವೆಲ್ಲರೂ ಕೂಡ ಸಂತೋಷ ಪಡಬೇಕಾದ ವಿಚಾರವೇ ಸರಿ. ವಿರೋಧ ಪಕ್ಷ ಮತ್ತು ಆಡಳಿತ ಪಕ್ಷ ಇವೆರಡರಲ್ಲೂ ಇದ್ದು ಅದರ ಅನುಭವವೂ ತಮಗೆ ಗೊತ್ತಿದೆ. ವಿರೋಧ ಪಕ್ಷದವರ ಮಾತು ಏನು ಎಂಬುದರ ವಿಷಯವೂ ತಮಗೆ ಗೊತ್ತಿದೆ. ತಾವು ಆಡಳಿತ ಪಕ್ಷದಲ್ಲಿ ಇದ್ದರೂ ಕೂಡ ವಿರೋಧ ಮಾಡತಕ್ಕಂಥಾದ್ದು ನಿಮಗೆ ಬಂದಂಥ ಹುಟ್ಟುಗುಣ. ಈಗ ದೇಶದಲ್ಲಿ ಒಂದು ಪರಿಸ್ಥಿತಿ ನಮಗೆ ಎದ್ದು ಕಾಣುತ್ತಾ ಇದೆ. ಯಾರು ಯಾರು ಈ ಸದನದಲ್ಲಿ ಇದ್ದಾರೆ ಎನ್ನುವುದನ್ನು ನೋಡುತ್ತಾ ಇದ್ದೀರಿ. ಅಂತಹ ಸದಂರ್ಭದಲ್ಲಿ ವಿರೋಧ ಪಕ್ಷಕ್ಕೆ ತಾವು ಹೆಚ್ಚಿನ ಗಮನ ಕೊಡಬೇಕು ಎಂದು ನಾನು ಹೇಳುತ್ತೇನೆ. ವಿರೋಧ ಪಕ್ಷದವರು ಆರೀತಿ ಟೀಕೆ ಮಾಡುವಾಗ ನ್ಯಾಯವಾಗಿ ಅವರಿಗೆ ಸಲ್ಲಬೇಕಾದಂಥ ಒಂದು ಸಹಕಾರವನ್ನು ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಬಹುಮತವಿರುವ ಪಕ್ಷ ಆಡಳಿತದಲ್ಲಿರುವುದರಿಂದ ಆ ಪಕ್ಷದ ಮಾತಿಗೆ ಎರೆಲ್ಲೂ ಗೌರವವಿರುವುದರಿಂದ ಅತ್ತ ಕಡೆಗೇ ಹೆಚ್ಚು ಲಕ್ಷ ಕೊಡದೆ ವಿರೋಧ ಪಕ್ಷದಮೇಲೂ ಅಭಿಮಾನವಿಟ್ಟು ನಮ್ಮ ನ್ಯಾಯವಾದ ಬೇಡಿಕೆಗಳಿಗೆ ಬೆಂಬಲ ಕೊಡಬೇಕಾದ್ದು ಅವಶ್ಯಕ. ಹಾಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ತಮ್ಮ ಅಧ್ಯಕ್ಷತೆಯ ಅವಧಿಯಲ್ಲಿ, 5 ವರ್ಷಗಳ ಕಾಲದಲ್ಲಿ ಎಲ್ಲರೂ ಮೆಚ್ಚುವಂತೆ ನಡೆದುಕೊಳ್ಳುತ್ತೀರಿ ಎಂದು ನಂಬಿ ಅದಕ್ಕೆ ಭಗವಂತನು ಅವಕಾಶ ಕೊಡಲಿ ಎಂದು ಹಾರೈಸಿ ನನ್ನ ಮಾತನ್ನು ಮುಗಿಸುತ್ತೇನೆ.

4-30 P.M.

† ಶ್ರೀ ಎಂ. ಎಸ್. ಕೃಷ್ಣನ್.—ಸಭಾಧ್ಯಕ್ಷಣಿಯರೇ, ನಮ್ಮ ಪಕ್ಷದ ಪರವಾಗಿ ತಾವು ಅಧ್ಯಕ್ಷ ಪೀಠವನ್ನಲಂಕರಿಸಿರುವುದಕ್ಕಾಗಿ ತಮ್ಮನ್ನು ಅಭಿನಂದಿಸುತ್ತೇನೆ. ಮತ್ತು ಆ ಬಗ್ಗೆ ನಮ್ಮ ಸಂತೋಷವನ್ನು ಕೂಡ ವ್ಯಕ್ತಪಡಿಸುತ್ತೇನೆ. ಈಗಾಗಲೆ ಅನೇಕರು ಮಾತನಾಡಿ ತಮ್ಮ ಸಂತೋಷವನ್ನು ವ್ಯಕ್ತಮಾಡಿದ್ದಾರೆ. ನಾನು ಹೆಚ್ಚು ಹೇಳುವುದಿಲ್ಲ. ನನ್ನ ಅನುಭವದಂತೆ ಕಳೆದ ಶಾಸನ ಸಭೆಯೆಲ್ಲ ಕೆಲವು ಸಮಯದಲ್ಲ ಕಹಿ ಅನುಭವವುಂಟಾಗಿದೆ. ಅದು ತಮಗೆ ಗೊತ್ತಿರುವ ವಿಷಯವೇ ಆಗಿದೆ. ಕಠಿಣ ಸಮಸ್ಯೆಗಳು ಬಂದಂಥ ಸಂದರ್ಭಗಳಲ್ಲಿ ಅವನ್ನು ಚಾಕಚಕ್ಯತೆಯಿಂದ ಬಿಡಿಸಬೇಕಾದ್ದು ಅಧ್ಯಕ್ಷರ ಕರ್ತವ್ಯ. ಅದರ ಜವಾಬ್ದಾರಿ ಅವರಿಗಿದೆ. ಕೆಲವು ವಿಷಯಗಳ ಬಗ್ಗೆ ಧರಣಿ ಮುಷ್ಕರ ಮಾಡಬೇಕಾಯಿತು ಮೂರ ದಿವಸಗಳವರೆಗೆ ಅದನ್ನು ಮುಂದುವರೆಸಬೇಕಾಯ್ತು. ಅದು ಜನತೆಗೆ ಸಂಬಂಧಪಟ್ಟ ಮುಖ್ಯ ಪ್ರಶ್ನೆಯಾಗಿತ್ತು. ಅದರ ವಿಚಾರದಲ್ಲಿ ಸರಕಾರ ಸರಿಯಾದ ತೀರ್ಮಾನಮಾಡದೆ ಹೋದುದರಿಂದ ತೀವ್ರವಾಗಿ ಪ್ರತಿಭಟಿಸಬೇಕಾಯಿತು. ಆ ಸಂದರ್ಭದಲ್ಲಿ ನಾನು ತಪ್ಪೋ ಏನೆ ಮಾತನಾಡಿದ್ದೇನೆ. ಆಗ ತಾವು ಆ ಕಡೆ ಇರಲಿಲ್ಲ. ಆಗ ತಾವು ನಾವು ಮಾಡುತ್ತಿದ್ದುದಕ್ಕೆ ಸಹಾನುಭೂತಿಯನ್ನು ಸೂಚಿಸಿ, ನಾವು ಮಾಡಿದುದು ಸರಿಯೆಂದು ಹೇಳಿದಿರಿ. ಈ ದಿವಸ ಹಾಗೆ ಹೇಳಿದಂಥ ತಾವು ಅಧ್ಯಕ್ಷಣಿಯರಾಗಿರುವುದು ಬಹಳ ಸಂತೋಷವನ್ನುಂಟು ಮಾಡಿದೆ. ಯಾವಾಗಲೂ ಕೂಡ ಜನರ ಪ್ರಶ್ನೆ ಬಂದಾಗ ಅವರ ನ್ಯಾಯವಾದ ಬೇಡಿಕೆಗಳಿಗೆ ಬೆಂಬಲ ಕೊಡುವುದು. ಮತ್ತು ಅದಕ್ಕೆ ಪರಿಹಾರ ಕಂಡುಹಿಡಿಯಲು ಪ್ರಯತ್ನ ಮಾಡುವುದು. ಸರಕಾರ ಕೂಡ ಸರಿಯಾದ ಧೋರಣೆಯನ್ನು ತಳೆದರೆ ಅದಕ್ಕೂ ಕೂಡ ನಮ್ಮ ಬೆಂಬಲವಿದೆ. ಹಾಗಿಲ್ಲ ವಿದ್ದರೆ ವಿರೋಧ ಮಾಡುತ್ತೇವೆ. ಅದರ ಬಗ್ಗೆ ಯಾರೂ ಸಂಶಯಪಡಬೇಕಾಗಿಲ್ಲ. ಕೆಲವರು ಸಂಶಯ ವ್ಯಕ್ತಮಾಡಿದರು. ಆ ರೀತಿಯ ಸಂಶಯ ಇರಬೇಕಾಗಿಲ್ಲವೆಂದು ಅವರಿಗೆ ನಾನು ಹೇಳ

(ಶ್ರೀ ಎಂ. ಎಸ್. ಕೃಷ್ಣನ್)

ಬೇಕಾಗಿದೆ. ಹಿಂದೆ ಉಂಟಾದಂಥ ಕಹಿ ವಾತಾವರಣಗಳಿಗೆ ಅವಕಾಶ ಕೊಡದಂತೆ ಸರಕಾರದವರು ವಿವೇಚನೆಯಿಂದ ವರ್ತಿಸಬೇಕೆಂದು ಮತ್ತು ಸರಿಯಾಗಿ ಇತ್ಯರ್ಥ ಮಾಡಬೇಕೆಂದು ಅಧ್ಯಕ್ಷಣಿಯರು ಸರಕಾರಕ್ಕೆ ಸಲಹೆ ಮಾಡುವರೆಂದು ನಾನು ನಂಬುತ್ತೇನೆ. ಯಾವಾಗಲೂ ಸರಕಾರದವರು ತಮ್ಮ ಮಾತನ್ನು ತೆಗೆದುಹಾಕುವುದಿಲ್ಲ. ತಾವು ಯಾವುದೇ ಪಕ್ಷಕ್ಕೆ ಸೇರಿದ್ದರೂ ಕೂಡ ನ್ಯಾಯವಾದ ಬೇಡಿಕೆಗಳಿಗೆ ಸರಕಾರ ಮನ್ನಣೆ ಕೊಡುವಂತೆ ತಾವು ನೋಡಿಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

ಕೆಲವು ಸಂದರ್ಭಗಳಲ್ಲಿ ವಿರೋಧಪಕ್ಷದವರಿಗೆ ಮಾತನಾಡಲು ಹೆಚ್ಚು ಕಾಲಾವಕಾಶ ಕೊಡ ಬೇಕೆಂದು ನಾವು ಕೇಳುವುದುಂಟು. ಹಾಗೆ ಕೇಳಿದಾಗ ಹಿಂದೆ ಶ್ರೀ ಕೊಠಾವಳೆಯವರು ಗಂಟೆ ಬಡಿದು ಕೂಡಿಸುತ್ತಿದ್ದರು. ಈಗ ಹಾಗೆ ಮಾಡದೆ ತಾವು ವಿರೋಧ ಪಕ್ಷಕ್ಕೆ ತಕ್ಕಷ್ಟು ಕಾಲವನ್ನು ಕೊಡಬೇಕೆಂದು ಕೇಳಿಕೊಳ್ಳಬೇಕಾಗಿದೆ. ಈ ಸಲ ಹೋದ ಸಲಕ್ಕಿಂತ ಹೆಚ್ಚು ಸದಸ್ಯರು ಅಡಳಿತ ಪಕ್ಷಕ್ಕೆ ಆರಿಸಿ ಬಂದಿದ್ದಾರೆ. ಅವರಿಗೆ ಬಹುಮತವಿದೆ. ಆದುದರಿಂದ ವಿರೋಧ ಪಕ್ಷಕ್ಕೆ ಹೆಚ್ಚು ಅವಕಾಶ ಕೊಡದೆ ತೀರ್ಮಾನ ಮಾಡಲು ಅವಕಾಶವಿದೆ. ಆದರೆ ಹಾಗೆ ಮಾಡದೆ ವಿರೋಧಪಕ್ಷದ ವರಿಗೆ ಹೆಚ್ಚು ಮಾತನಾಡಲು ಅವಕಾಶ ಕೊಡಬೇಕೆಂದು ಕೇಳಬೇಕಾಗಿದೆ.

ಇನ್ನೊಂದು ವಿಷಯ ಹೇಳಬೇಕೆಂದರೆ ಶ್ರೀ ಬಾಳಿಗಾರವರಿದ್ದಾಗ ಸಹ ನಾನು ಸದಸ್ಯ ನಾಗಿದ್ದೆ. ಆಗ ಅಧ್ಯಕ್ಷರಾಗಿದ್ದ ಅವರು ವಿಟ್ ಮತ್ತು ಹ್ಯೂಮರ್ ಎರಡೂ ಇಟ್ಟುಕೊಂಡು ಒಂದು ರೀತಿಯಲ್ಲಿ ವರ್ತಿಸುತ್ತಿದ್ದರು. ಹಾಗಿಲ್ಲದೆ ಗಂಟುಮುಖ ಹಾಕಿಕೊಂಡು ವರ್ತಿಸಿದರೆ ಕಷ್ಟ. ಯಾವಾಗಲೂ ನಗುಮುಖದಿಂದ ವರ್ತಿಸಿದರೆ ಒಳ್ಳೆಯದು. ಕೆಲವುವೇಳೆ ರೂಲಿಂಗ್ ಕೊಡ ಬೇಕಾಗುವುದು. ಆದರೆ ಹ್ಯೂಮರ್ ಇರಬೇಕು. ಅದು ಬಾಳಿಗಾರವರಲ್ಲಿತ್ತು. ಅವರ ನಂತರ ಬಂದವರಲ್ಲಿ ಅದು ಅಷ್ಟಾಗಿ ಕಾಣಲಿಲ್ಲ. ತಮ್ಮಲ್ಲಿ ವಿಟ್ ಮತ್ತು ಹ್ಯೂಮರ್ ಇದೆ ಎಂಬುದು ನನ್ನ ಅಭಿಪ್ರಾಯ. ಅಂದಾಜು ಸಮಿತಿಯಲ್ಲದ್ದಾಗ ತಮ್ಮ ಸಂಪರ್ಕ ನನಗೆ ಸ್ವಲ್ಪವಿತ್ತು. ತಮ್ಮ ಧಾಟಿ, ಹಿಂದೆ ತಾವು ಟೀಕೆ ಮಾಡುತ್ತಿದ್ದುದು ಇದನ್ನೆಲ್ಲಾ ನೋಡಿದರೆ ತಮ್ಮಲ್ಲಿ ಬಾಳಿಗಾರವರಲ್ಲಿ ದ್ದಂಥ ಸುಗುಣಗಳಿವೆಯೆಂಬುದು ನನ್ನ ಅಭಿಪ್ರಾಯ. ಅವನ್ನು ಈಗ ಉಪಯೋಗ ಮಾಡುವಿರಿ ಎಂಬ ನಂಬಿಕೆ ನನಗಿದೆ. ತಾವು ವಿರೋಧ ಪಕ್ಷದವರೆಂದು ನಮ್ಮನ್ನು ಕಡೆಗಾಣದೆ ನಮಗೆ ಸರಿಯಾದ ನ್ಯಾಯವನ್ನೊದಗಿಸುವಿರೆಂಬ ನಂಬಿಕೆ ನನಗಿದೆ. ಸ್ಕೇರ್ಸ್ ಆಫ್ ಜಸ್ಟಿಸ್ ಬಗ್ಗೆ ಶ್ರೀ ದೇವರಾಜ ಅರಸರು ಹೇಳಿದರು. ಅವರು ತಿಳಿಸಿದಂತೆ ತಾವು ತಕ್ಕಡಿಯನ್ನು ಸರಿಯಾಗಿ ತೂಗುತ್ತೀರೆಂಬ ನಂಬಿಕೆಯಿದೆ. ಹೋದಸಲ ಸರಿಯಾದ ಲೈಟ್ ಇರಲಿಲ್ಲ, ಈ ಸಲ ಹಾಕಿಸಿದೆ. ಇದೊಂದು ಶುಭ ಸೂಚನೆ. ನಿಜವಾಗಿಯೂ ಕೂಡ ತಾವು ನ್ಯಾಯ ರೀತಿಯಲ್ಲಿ ಎಲ್ಲ ಸದಸ್ಯರ ವಿಚಾರದಲ್ಲೂ ಕೂಡ ನಡೆದುಕೊಳ್ಳುವಿರಿ ಎಂದು ನಂಬಿ ನಮ್ಮ ಪಕ್ಷದ ಪರವಾಗಿ ಸರಕಾರ ಮಾಡುವ ನ್ಯಾಯು ಬದ್ಧವಾದ ಎಲ್ಲ ಕೆಲಸಗಳಿಗೂ ಕೂಡ ನಮ್ಮ ಬೆಂಬಲವಿದೆ, ವಿರೋಧ ಪಕ್ಷವನ್ನು ಕಡೆಗಾಣಿಸಾರದು, ಎಲ್ಲರಿಗೂ ಸರಿಯಾದ ನ್ಯಾಯ ದೊರಕಿಸಿಕೊಡುವಿರಿ ಎಂದು ನಂಬಿ ತಮ್ಮನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕೆರೆ).—ಇದುವರೆಗೆ ಅನೇಕ ಸದಸ್ಯರು ತಮಗೆ ಅಭಿನಂದನೆಗಳನ್ನು ಸಲ್ಲಿಸಿದರು. ಹಾಸನ ಜಿಲ್ಲೆಯು ತಮ್ಮ ತವರೂರು. ಆ ಜಿಲ್ಲೆಯಿಂದ ಅಡಳಿತ ಪಕ್ಷದವರನ್ನು ಸೋಲಿಸಿ ವಿರೋಧ ಪಕ್ಷದವರು ಹೆಚ್ಚಾಗಿ ಬಂದಿದ್ದಾರೆ. ನಾಲ್ಕು ಜನರು ವಿರೋಧ ದಲ್ಲಿದ್ದಾರೆ. ಆ ಜಿಲ್ಲೆಯವರ ಕಡೆ ತಾವು ಹೆಚ್ಚು ಗಮನಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಹಿಂದೆ ತಾವೂ ಸಹ ವಿರೋಧ ಪಕ್ಷದಲ್ಲಿದ್ದಿರಿ. ಹಾಸನ ಜಿಲ್ಲೆಯು ತಮ್ಮ ತವರೂರಾಗಿರುವುದರಿಂದ ಮತ್ತು 4 ಜನ ವಿರೋಧ ಪಕ್ಷದವರು ಅಲ್ಲಿಂದ ಆರಿಸಿ ಬಂದಿರುವುದರಿಂದ ತಾವು ಆ ಜಿಲ್ಲೆಯವರು ಈ ಸಭೆಯ ಕಾರ್ಯಕಲಾಪಗಳಲ್ಲಿ ಹೆಚ್ಚಾಗಿ ಭಾಗವಹಿಸಲು ಅವಕಾಶ ಕೊಡಬೇಕಾಮ್ಮ ತಮ್ಮ ಕರ್ತವ್ಯ. ತಾವು ಹಾಗೆ ಮಾಡಿ ನಮಗೆ ಸಾಕಷ್ಟು ಅವಕಾಶ ಕಲ್ಪಿಸಿಕೊಡುತ್ತೀರಿ ಮತ್ತು ಈ ಸಭೆಯ ಗೌರವವನ್ನು ಕಾಪಾಡುತ್ತೀರಿ ಎಂಬ ಭರವಸೆಯಿದೆ. ಇಷ್ಟು ಹೇಳಿ ತಮ್ಮನ್ನು ಹಾಸನದ ವರ ಪರವಾಗಿ ಮತ್ತು ತಮ್ಮ ತವರೂರಿನ ಪರವಾಗಿ ಅಭಿನಂದಿಸುತ್ತೇನೆ.

ಶ್ರೀ ಶರಣಪ್ಪ (ದೇವದುರ್ಗ).—ಮಾನ್ಯ ಅಧ್ಯಕ್ಷಿಣಿಯವರೇ, ಈ ದಿನ ಈ ಸಭೆಗೂ ಮತ್ತು ಈ ಸಭೆಯ ಎಲ್ಲ ಸದಸ್ಯರಿಗೂ ಒಂದು ಧನ್ಯವಾದ ದಿನ ಮತ್ತು ಗೌರವದ ದಿನ ಎಂದು ಹೇಳ ಬಹುದು. ಏಕೆಂದರೆ ಪ್ರಜಾಪ್ರಭುತ್ವವು ಭಾರತ ದೇಶಕ್ಕೆ ಬಂದಮೇಲೆ ವಿಧಾನಸಭೆಯ ಅಧ್ಯಕ್ಷ ಸ್ಥಾನಕ್ಕೆ ಮಹಿಳೆ ಒಬ್ಬರು ಆರಿಸಿ ಬಂದಿರುವುದು ಇದೇ ಮೊದಲನೆಯ ಸಲ ಎಂದು ಹೇಳಬಹುದು.

ಅದರಲ್ಲೂ ನಜ ಮೈಸೂರು ರಾಜ್ಯದಲ್ಲಿ ಇದಕ್ಕೆ ಪ್ರಥಮ ಸ್ಥಾನ ಕೊಟ್ಟಿದ್ದು ಎಂದರೆ ನಮಗೆಲ್ಲರಿಗೂ ಒಂದು ಗೌರವ ಎಂದು ಹೇಳುತ್ತೇನೆ. ಒಂದು ವಿಷಯ ಹೇಳಬೇಕಾದರೆ, ಯಾವ ಒಂದು ಮನೆಯಾಗಲೀ ಅಥವಾ ಯಾವ ಒಂದು ವಸ್ತುವಾಗಲಿ, ಒಬ್ಬ ಮಹಿಳೆಯ ಕೈಯಲ್ಲಿ ಇದ್ದರೆ ಸುಸೂತ್ರವಾಗಿ ನಡೆಯುತ್ತದೆಂಬ ಭರವಸೆ ನಮಗೆ ಇರುತ್ತದೆ. ಅದೇ ರೀತಿಯಾಗಿ ಇವತ್ತಿನ ದಿವಸ ಈ ಮಾನ್ಯ ಸಭೆಯ ಅಧ್ಯಕ್ಷ ಸ್ಥಾನಕ್ಕೆ ಶ್ರೀಮತಿ ನಾಗರತ್ನಮ್ಮನವರು ಆಯ್ಕೆಯಾಗಿದ್ದಾರೆ. ತಾವು ಆಯ್ಕೆಯಾಗಿರುವುದರಿಂದ ಈ ಮನೆಗೆ ಒಂದು ಗೌರವ ಮತ್ತು ವೈಭವ ಬಂದಿದೆ ಎಂದು ಹೇಳಬಹುದು. ಮುಂದೆ ಈ ಮನೆಯ ಎಲ್ಲ ಕಾರ್ಯಕಲಾಪಗಳು ಒಂದು ಒಳ್ಳೆಯ ಗೌರವದಿಂದ ನಡೆಯಬಹುದೆಂಬ ಆಸೆ ನನಗಿದೆ. ಒಂದೊಂದು ವೇಳೆ ಈ ಸಭೆಯಲ್ಲಿ ಬಿಸಿಬಿಸಿಯಾದ ಮತ್ತು ಚುರುಕುಚುರುಕಾದ ಮಾತುಗಳಾಗಿ ಈ ಸಭೆ ಕುರುಕ್ಷೇತ್ರವಾಗಿ ಪರಿಣಮಿಸಬಹುದು. ಅಂತಹ ಸಮಯದಲ್ಲಿ ಮಾನ್ಯ ಅಧ್ಯಕ್ಷಣಿಯರು ಶ್ರೀಕೃಷ್ಣನಂತಾಗಲಿ ಅಥವಾ ಮೈಸೂರು ರಾಜ್ಯದಲ್ಲಿರುವ ಮಹತ್ವವಾದ ದೇವತೆಯಾದ ಚಾಮುಂಡೇಶ್ವರಿಯಂತೆ ತಾವು ಆಗಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಯಾಪುದಾದರು ಒಂದು ಪಕ್ಷದ ಮೇಲೆ ಅನ್ಯಾಯವಾದಾಗ, ಏಪಗಾಳಿ ಬೀಸಿದಾಗ, ತಾವು ಆ ಪಕ್ಷದ ಹಕ್ಕು ಬಾಧ್ಯತೆಗಳನ್ನು ಕಾಪಾಡಿ ಈ ಸಭೆಯ ಗೌರವವನ್ನು ಕಾಪಾಡುತ್ತೀರೆಂದು ನಂಬಿದ್ದೇನೆ. ಈ ಸಮಯದಲ್ಲಿ ತಾವು ಈ ಸ್ಥಾನಕ್ಕೆ ಆಯ್ಕೆಯಾದುದು ಸಂತೋಷ. ಎಲ್ಲ ಕಾರ್ಯಗಳಲ್ಲಿಯೂ ನಾವು ತಮಗೆ ಸಹಕಾರ ನೀಡುತ್ತೇವೆಂಬ ಮಾತನ್ನು ಹೇಳಿ, ಭಗವಂತನು ತಮಗೆ ಒಳ್ಳೆಯದನ್ನು ಮಾಡಲಿ ಎಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎನ್. ಪೈ. ಪಾಟೀಲ್ (ಸಿಂದ್ಗಿ).—ಮಾನ್ಯ ಅಧ್ಯಕ್ಷಿಣಿಯವರೇ, ಈಗ ಸಮಯ ಬಹಳ ಮಹತ್ವವಿರುವುದರಿಂದ ನಾನು ಕೇವಲ ಎರಡು ಮಾತುಗಳನ್ನು ಹೇಳುತ್ತೇನೆ. ಮುಂಬೈ ಅಸೆಂಬ್ಲಿಯಲ್ಲಿ ಶ್ರೀ ಮೆಹತಾ ಅವರು ತಿರ್ಥಿಕ ಮಂತ್ರಿಗಳಾಗಿದ್ದಾಗ, ಒಂದು ಸಲ ಬಜೆಟ್ಟನ್ನು ಸಭೆಯಲ್ಲಿ ಮಂಡಿಸುವುದು ತಡವಾದಾಗ, ಅವರು ವಿರೋಧಪಕ್ಷದವರಲ್ಲಿ ವಷಪಣೆಯನ್ನು ಕೇಳಿದರು. ಮತ್ತು ಪ್ರತಿಯೊಂದು ಕಾರ್ಯಕಲಾಪಗಳನ್ನು ನಡೆಸುವಾಗಲೂ ಸಹ ಅವರು ವಿರೋಧಪಕ್ಷದವರೊಡನೆ ವಿಚಾರವಿನಿಮಯ ಮಾಡುತ್ತಿದ್ದರು. ನಾನು ವಿಧಾನ ಅಸೆಂಬ್ಲಿಯಲ್ಲಿಯೂ ಸಹ ಸದಸ್ಯನಾಗಿದ್ದೆ. ಮತ್ತು ಇಲ್ಲಿಯೂ ಸಹ ಆಗಿದ್ದೆ. ನಮ್ಮ ವಿಜಾಪುರ ಜಿಲ್ಲೆ ಇಡೀ ರಾಜ್ಯದಲ್ಲಿರುವ 19 ಜಿಲ್ಲೆಗಳಿಗಿಂತ ಬಹಳ ಹಿಂದುಳಿದಿದೆ. ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಗಳಿಗಿಂತಲೂ ಸಹ ಹಿಂದುಳಿದಿದೆಯೆಂದು ಹೇಳಬಹುದು. ಇಡೀ ಭಾರತದಲ್ಲಿಯೇ ಅತ್ಯಂತ ಹಿಂದುಳಿದ ಜಿಲ್ಲೆಯಾಗಿದೆ. ಅಲ್ಲಿ ಬಡತನ ಎಂಬುದು ಜಾಸ್ತಿ ಇದೆ. ಆ ಜಿಲ್ಲೆಯ 8 ಸ್ಥಾನಗಳ ಪೈಕಿ 5 ಸ್ಥಾನಗಳನ್ನು ನಾವು ಗೆದ್ದಿದ್ದೇವೆ. ನಾವು ಮೆಜಾರಿಟಿಯಲ್ಲಿ ಆರಿಸಿ ಬಂದಿದ್ದೇವೆ. ನಾವು ಐದು ಮಂದಿ ಇದ್ದೇವೆ. ನಮ್ಮ ಜಿಲ್ಲೆಯ ಪ್ರಶ್ನೆ ಯಾವುದೇ ಬಂದರೂ ಕೂಡ ಅದನ್ನು ಹೇಳುವುದಕ್ಕೆ ನಮಗೆ ಸಾಕಷ್ಟು ಅವಕಾಶ ಕೊಡಬೇಕು. ಮುಂಬೈ ಅಸೆಂಬ್ಲಿಯಲ್ಲಿ ಆಡಳಿತ ಪಕ್ಷದವರಿಗೆ ಹೆಚ್ಚು ಮಾತನಾಡುವುದಕ್ಕೆ ಅವಕಾಶ ಕೊಡದೆ ವಿರೋಧಪಕ್ಷದ ಸದಸ್ಯರುಗಳಿಗೇ ಹೆಚ್ಚು ಸಮಯ ಮಾತನಾಡುವುದಕ್ಕೆ ಅವಕಾಶ ಕೊಡುತ್ತಿದ್ದರು. ಆಡಳಿತ ಪಕ್ಷದವರಿಗೆ ಹೆಚ್ಚು ಸಮಯ ಮಾತನಾಡುವ ಅವಶ್ಯಕತೆ ಇರುವುದಿಲ್ಲ. ಏಕೆಂದರೆ ಯಾವ ಯಾವ ಕೆಲಸಗಳನ್ನು ತೆಗೆದುಕೊಳ್ಳಬೇಕೆಂಬ ಬಗ್ಗೆ ಮೊದಲೇ ತರಾವ್ ಆಗಿರುತ್ತದೆ. ಈ ವಿಚಾರ ನಮಗೆ ತಿಳಿದಿರುವುದಿಲ್ಲ. ಆದ್ದರಿಂದ ನಮಗೆ ಹೆಚ್ಚು ಮಾತನಾಡಲು ಅವಕಾಶ ಕೊಡಬೇಕು. ನಾವು 5 ಜನ ಜನರ ಪ್ರತಿನಿಧಿಗಳಾಗಿ ಆರಿಸಿ ಬಂದಿದ್ದೇವೆ. ನಾವು ನಮ್ಮ ಜಿಲ್ಲೆಯನ್ನು ಪ್ರತಿನಿಧಿಸಬೇಕಾಗಿದೆ. ನಮ್ಮ ಜಿಲ್ಲೆಯ ಪ್ರಶ್ನೆ ಬಂದಾಗ ನಮಗೆ ಹೆಚ್ಚು ಮಾತನಾಡಲು ಅವಕಾಶ ಕೊಡಬೇಕು. ಕೋರ್ಟುಗಳಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರ್‌ಗೆ ಯಾವ ರೀತಿ ಹೆಚ್ಚು ಸಮಯವನ್ನು ವಾದ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲವೋ, ಅದೇ ರೀತಿ ಇಲ್ಲಿ ಆಡಳಿತ ಪಕ್ಷದವರಿಗೆ ಹೆಚ್ಚು ಸಮಯ ಕೊಡಬಾರದು. ನಮಗೆ ಹೆಚ್ಚು ಸಮಯ ಕೊಡಬೇಕು. ನಮ್ಮ ಬಿಜಾಪುರ ಜಿಲ್ಲೆ ದುಷ್ಕಾಳಕ್ಕೆ ಒಳಗಾಗಿದೆ. ಆ ಜಿಲ್ಲೆಯ ಬಗ್ಗೆ ಮಾತನಾಡುವಾಗ ತಾವು ಸಮಯ ಇಲ್ಲವೆಂದು ಗಂಟೆ ಹೊಡೆಯಬಾರದು. ಆ ರೀತಿ ಹೊಡೆದರೆ ನಾವು ಕುಳಿತುಕೊಳ್ಳುವುದಿಲ್ಲವೆಂದು ಈಗಲೇ ಹೇಳುತ್ತೇನೆ. ಮುಂಬೈ ಅಸೆಂಬ್ಲಿಯಲ್ಲಿ ಅಧ್ಯಕ್ಷರು ಗಂಟೆ ಹೊಡೆದಾಗ ಮುಖ್ಯ ಮಂತ್ರಿಯವರು ಮೊದಲುಗೊಂಡು ಆಡಳಿತ ಪಕ್ಷದ ಎಲ್ಲರೂ ಕೂಡಲೇ ಗಪ್ ಎಂದು ಕುಳಿತು ಬಿಡುತ್ತಿದ್ದರು. ಆದರೆ ವಿರೋಧಪಕ್ಷದವರಿಗೆ ಹೆಚ್ಚಿನ ಸಮಯವನ್ನು ಕೊಡುತ್ತಿದ್ದರು. ಅದರಂತೆ ಇಲ್ಲಿಯೂ ಕೂಡ ವಿರೋಧಪಕ್ಷದವರಿಗೆ ಅದರಲ್ಲಿಯೂ ಮುಖ್ಯವಾಗಿ ವಿಜಾಪುರ ಜಿಲ್ಲೆಯ ಸದಸ್ಯರಿಗೆ ಮಾತನಾಡಲು ಹೆಚ್ಚಿನ ಸಮಯಾವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇದುವರೆಗೆ ತಮ್ಮನ್ನು ಬಹಳ ಮಂದಿ ಹೊಗಳಿದ್ದಾರೆ. ಅದರಂತೆ ತಾವು ನಡೆದುಕೊಳ್ಳುತ್ತೀರಿ ಎಂದು ನಂಬಿ ನಮ್ಮ ಜಿಲ್ಲೆಯವರಿಗೆ ಮಾತನಾಡಲು ಹೆಚ್ಚು ಕಾಲಾವಕಾಶ ಕೊಡಬೇಕೆಂದು ನಮ್ರತೆಯಿಂದ ಪ ತ್ತೊಮ್ಮೆ ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಅಧ್ಯಕ್ಷಣಿಯವರೇ, ಈ ಸಭೆಗೆ ಮೂರನೇ ಎರಡು ಭಾಗದಷ್ಟು ಹೊಸ ಸದಸ್ಯರು ಆರಿಸಿ ಬಂದಿದ್ದಾರೆ. ಈ ಸಭೆಗೆ ಯುವಕರಾಗಿರತಕ್ಕಂಥವರು ಅಂದರೆ ಕಡಿಮೆ ವಯಸ್ಸಿನವರು ಬಹಳ ಮಂದಿ ಆರಿಸಿ ಬಂದಿದ್ದಾರೆ. ಇಂತಹವರ ಮೇಲೆ ಖಂಡಿತವಾಗಿ ತಮ್ಮ ಅಭಿಮಾನ ಇರಬೇಕು. ಒಂದು ಕುಟುಂಬವನ್ನು ಸಾಕಿ ಸಲಹಬೇಕಾದರೆ ಆ ಕುಟುಂಬಕ್ಕೆ ಮುಖ್ಯರಾದವರು ತಾಯಿಯಾಗಿರುತ್ತಾರೆ. ಅವರೇ ಕುಟುಂಬದ ಹಿರಿಯರು. ಈ ಸಭೆಯಲ್ಲಿ ತಾವು ತಾಯಿಯಂತೆ ಇದ್ದೀರಿ. ತಾಯಿಗೆ ಮಕ್ಕಳಿಂದ ಎಷ್ಟು ಪ್ರೀತಿ ಮತ್ತು ಪ್ರೇಮ ಸಲ್ಲಬೇಕೋ ಅಷ್ಟನ್ನು ಸಲ್ಲಿಸುವುದಕ್ಕೆ ಯುವಕರಾದ ನಾವು ಸಿದ್ಧರಿದ್ದೇವೆ. ಅದೇ ರೀತಿಯಲ್ಲಿ ತಾಯಿಯ ಮಮತೆ ತಮ್ಮ ಮಕ್ಕಳ ಮೇಲೆ ಇರಬೇಕು. ನಮ್ಮ ಕೋಲಾರ ಜಿಲ್ಲೆಯಿಂದ ಆಡಳಿತ ಪಕ್ಷದವರು ಮತ್ತು ವಿರೋಧಪಕ್ಷದವರು ನಮನಮಗಾಗಿ ಗೆದ್ದು ಬಂದಿದ್ದೇವೆ. ಕೋಲಾರ ಜಿಲ್ಲೆ ಕ್ಷಾಮ ಡಾಮರಗಳಿಗೆ ತುತ್ತಾಗಿರತಕ್ಕಂಥ ಜಿಲ್ಲೆಯಾಗಿದೆ. ಅಲ್ಲಿಯ ಶ್ರಮಜೀವಿಗಳು ಬಹಳ ಕಷ್ಟವನ್ನು ಅನುಭವಿಸುತ್ತಿದ್ದಾರೆ. ನಾವುಗಳು ಶ್ರಮಜೀವಿಗಳ ವರ್ಗದವರಿಂದ ಆರಿಸಿ ಇಲ್ಲಿಗೆ ಬಂದಿದ್ದೇವೆ. ಅವರ ಪ್ರತಿನಿಧಿಗಳಾಗಿ ಆರಿಸಿ ಬಂದಿರತಕ್ಕ ನಮಗೆ, ಅವರ ವಿಷಯ ಇಲ್ಲಿ ಚರ್ಚೆಗೆ ಬಂದಾಗ ನಾವು ಮಾತನಾಡಲು ಹೆಚ್ಚಿನ ಸಮಯಾವಕಾಶವನ್ನು ಕೊಡಬೇಕು ಮತ್ತು ತಾವು ಸಹ ಶ್ರಮಜೀವಿಗಳ ಪರವಾಗಿ ಇರಬೇಕೆಂದು ತಮ್ಮಲ್ಲಿ ಅತಿ ವಿನಯದಿಂದ ಕೇಳಿಕೊಳ್ಳುತ್ತೇನೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಟಿ. ತಾರೇಗೌಡ (ಕಳ್ಳಂಬೆಳ್ಳ).—ಮಾನ್ಯ ಅಧ್ಯಕ್ಷಣಿಯವರೇ, ತಾವು ಈ ದಿವಸ ಈ ಸಭಾಪೀಠವನ್ನು ಅಲಂಕರಿಸಿರುವುದಕ್ಕಾಗಿ ನಾನು ಆನಂದಿಸುತ್ತಾ, ತಮ್ಮನ್ನು ಈ ಪೀಠದಲ್ಲಿ ಸ್ವಾಗತಿಸಿ, ಅಭಿನಂದಿಸಿ ಕುಳ್ಳರಿಸತಕ್ಕ ಅವಕಾಶವನ್ನು ನನಗೆ ದೊರಕಿಸಿಕೊಟ್ಟಿದ್ದಕ್ಕಾಗಿ ನಾನು ಮಾನ್ಯ ನಾಯಕರನ್ನು ಮತ್ತು ಸರ್ಕಾರದ ಪಕ್ಷವನ್ನು ಪ್ರಂದಿಸುತ್ತೇನೆ. ತಾವು ಸೌಜನ್ಯಮೂರ್ತಿಗಳು. ಮಾತೆಯರಲ್ಲಿರಬೇಕಾದ ಸದ್ಗುಣಗಳು, ತಾಳ್ಮೆ, ಪ್ರೇಮ ಮತ್ತು ಕಷ್ಟಸಹಿಷ್ಣುತೆಗಳು ತಮ್ಮಲ್ಲಿ ಮೂರ್ತಿವೆತ್ತಿವೆ. 1957 ರಿಂದ 1962 ರವರೆಗೆ ನಾನು ಈ ಸಭೆಯ ಸದಸ್ಯನಾಗಿದ್ದೆ. ಆಗ ನಾನು ಕಾಂಗ್ರೆಸ್ ಪಕ್ಷದ ಸದಸ್ಯನಾಗಿದ್ದೆ, ತಾವು ವಿರೋಧಪಕ್ಷದ ಸದಸ್ಯರಾಗಿದ್ದಿರಿ. ಆ ಸಮಯಾಭಲ್ಲಿ ನಾನು ತಮ್ಮ ಹಿಂದಿನ ಪೀಠದಲ್ಲಿಯೇ ಕುಳಿತುಕೊಂಡು ತಾವು ದೇಶದ ಹಿತ ರಕ್ಷಣೆ ಮತ್ತು ಬಡಜನರ ಬಗ್ಗೆ ಯಾವ ರೀತಿ ಸಭಾಧ್ಯಕ್ಷರಿಂದ ಹೆಚ್ಚಿನ ಸಮಯವನ್ನು ತೆಗೆದುಕೊಂಡು ಮಾತನಾಡುತ್ತಾ ಇದ್ದಿರಿ ಎಂಬುದನ್ನು ನಾನು ಗುರುತಿಸಿದ್ದೆ ಮತ್ತು ದೇಶದ ಐಶ್ವರ್ಯ ಮತ್ತು ಜನಸೇವೆಯ ಮನೋಭಾವ ತಮ್ಮಲ್ಲಿರುವುದನ್ನು ಸಹ ಗುರುತಿಸಿದ್ದೆ. ನನ್ನ ಮಾನ್ಯ ಮಿತ್ರರುಗಳು ಇದುವರೆಗೆ ತಮ್ಮ ಬಗ್ಗೆ ಹೇಳಿದ್ದಾರೆ. ತಮ್ಮ ಮನೆತನದವರು ಬಹಳ ಧರ್ಮದ ಕೆಲಸಗಳನ್ನು ಮಾಡಿದ್ದಾರೆ. ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗಾಗಿ ದುಡಿದಿದ್ದಾರೆ. ತಾವು ಸಹ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸೆನೆಟ್ ಮೆಂಬರ್ ಆಗಿ ಕೆಲಸ ಮಾಡಿ ಹೆಚ್ಚಿನ ಅನುಭವ ಪಡೆದಿದ್ದೀರಿ. ತಾವು ಅನೇಕ ಸಂಘಸಂಸ್ಥೆಗಳಲ್ಲಿದ್ದುಕೊಂಡು ಕೆಲಸ ಮಾಡುತ್ತಿರುವುದನ್ನು ನಾನು ಕಣ್ಣಾರೆ ನೋಡಿದ್ದೇನೆ. ತಮ್ಮ ಮನೆತನದಲ್ಲಿ ಲಕ್ಷ್ಮಿ ಮತ್ತು ಸರಸ್ವತಿ ಇವರಿಬ್ಬರ ಕೃಪಾದೃಷ್ಟಿಯೂ ಇದೆ. ಜನಸೇವೆಗಾಗಿ ಕೆಲಸ ಮಾಡುತ್ತಿರುವ ತಮ್ಮನ್ನು ಮತ್ತು ತಮ್ಮ ಮನೆತನದವರನ್ನು ನಾನು ಅಭಿನಂದಿಸುತ್ತೇನೆ. ಅಧ್ಯಕ್ಷರ ಪೀಠ ಮುಳ್ಳಿನ ಪೀಠವಾಗಿದೆ. ಅದು ತಮಗೂ ಗೊತ್ತಿದೆ. ತಾವು ಎಲ್ಲರಿಗೂ ನ್ಯಾಯ ಹೊರಕೆಸಿಕೊಡಬೇಕು. ಅದಕ್ಕಾಗಿಯೇ ಸಭೆಯ ಮೇಲ್ಮಡೆ ಧರ್ಮದ ತಕ್ಕಡಿ ಇದೆ. ಇದುವರೆಗೆ ತಮ್ಮ ಬಗ್ಗೆ ಮಾನ್ಯ ಸಭಾನಾಯಕರು, ಮಾನ್ಯ ಸಿದ್ದವೀರಪ್ಪನವರು ಮತ್ತು ಇತರರು ಏನು ಹೇಳಿದ್ದಾರೆ ಅದನ್ನು ನಾನು ಸ್ವಾಗತಿಸುತ್ತೇನೆ. ವಿರೋಧಪಕ್ಷದ ಎಲ್ಲ ಸದಸ್ಯರು ತಮ್ಮಲ್ಲಿ ಅಪಾರವಾದ ಪ್ರೇಮ ವಿಶ್ವಾಸ ಮತ್ತು ನಂಬಿಕೆಯನ್ನು ಇಟ್ಟಿದ್ದಾರೆ. ಅದೇ ವಿಶ್ವಾಸವನ್ನು ತಾವು ಅವರಲ್ಲ ಇಡುತ್ತೀರಾ ಮತ್ತು ಕಾರ್ಯರೂಪದಲ್ಲಿ ತೋರಿಸಿ ಅವರ ವಿಶ್ವಾಸಕ್ಕೆ ಪಾತ್ರರಾಗುತ್ತೀರಾ ಎಂಬ ನಂಬಿಕೆ ನನಗೆ ಇದೆ. ಭಾರತ ದೇಶದ ಒಬ್ಬ ಸುಸಂಸ್ಕೃತ ಹೆಣ್ಣು ಮಗಳು ಈ ಸಭೆಯ ಅಧ್ಯಕ್ಷ ಪೀಠವನ್ನು ಅಲಂಕರಿಸಿರುವಂಥಾದ್ದು ಸುವರ್ಣಾಕ್ಷರದಲ್ಲಿ ಬರೆಯುವಂಥಾದ್ದಾಗಿದೆ. ಇಂಥಾ ಸಂದರ್ಭದಲ್ಲಿ ಈ ಸಭೆಗೆ, ಈ ದೇಶಕ್ಕೆ ಹಾಗೂ ಈ ಸ್ಥಾನಕ್ಕೆ ಕೀರ್ತಿ ಬರುವ ರೀತಿಯಲ್ಲಿ ತಾವು ವರ್ತಿಸುತ್ತೀರಿ ಎನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ. ಪರಮಾತ್ಮನು ತಮಗೆ ಈ ಅಧ್ಯಕ್ಷರ ಕೆಲಸವನ್ನು ಸುಸೂತ್ರವಾಗಿ ನಿರ್ವಹಿಸಲು ಶಾಂತಿ ಸಹನೆ ಮುಂತಾದ ಸರ್ವ ಶಕ್ತಿಯನ್ನೂ ಹಾಗೂ ಶ್ರೇಯಸ್ಸನ್ನೂ ಕೊಡಲಿ, ತಾವು ಈ ಕೆಲಸದಲ್ಲಿ ಜಯಶೀಲರಾಗಿ ಇಡೀ ಭಾರತಕ್ಕೆ ಕೀರ್ತಿಯನ್ನು ತರುತ್ತೀರಿ ಎಂದು ನಂಬಿ ನಾನು ತಮ್ಮನ್ನು ವಂದಿಸುತ್ತೇನೆ.

† ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಮಾನ್ಯ ಅಧ್ಯಕ್ಷರೇ, ಇವೊತ್ತಿನ ದಿವಸ ತಮ್ಮನ್ನು ಅಭಿನಂದಿಸುವ ಒಂದು ಸಂದರ್ಭ ಒದಗಿದ್ದಕ್ಕಾಗಿ ನಾನಾದರೂ ಸಂತೋಷವನ್ನು ವ್ಯಕ್ತಪಡಿಸು

ತ್ತೇನೆ. ತಾವು ನಾಲ್ಕು ಬಾರಿ ಮ್ಯೂನೂರು ಶಾಸನ ಸಭೆಗೆ ಚುನಾಯಿತರಾಗಿ ಸರ್ವತೋಮುಖವಾದ ಸೇವೆಯನ್ನು ಸಲ್ಲಿಸಿದ್ದೀರಿ. ಈಗಾಗಲೇ ಈ ಸಭಾನಾಯಕರು ಮತ್ತು ಇತರ ಸ್ನೇಹಿತರು ಹೇಳಿದ ಹಾಗೆ ತಾವು ಒಂದು ಉತ್ತಮವಾದ ಒಳ್ಳೆಯ ಮನೆತನದಿಂದ ಬಂದಿದ್ದೀರಿ. ತಾವು ಅನೇಕ ರೀತಿಯಾಗಿ ಸಮಾಜಸೇವೆಯನ್ನು ಮಾಡಿದ್ದೀರಿ. ತಮ್ಮ ಕ್ಷೇತ್ರವಾದ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಅನೇಕ ಜನ ತಮ್ಮನ್ನು ಬಡವರ ಬಂಧು ಎಂದು ಹೇಳುವುದನ್ನು ನಾನು ಕೇಳಿದ್ದೇನೆ. ಎಲ್ಲರೂ ಕೂಡ ಒಂದೇ ರೀತಿಯಾಗಿ ಒಂದೇ ಮನಸ್ಸಿನಿಂದ ತಮ್ಮನ್ನು ನಾಲ್ಕು ಬಾರಿ ಈ ಸಭೆಗೆ ಚುನಾಯಿಸಿರುವ ನಿದರ್ಶನವನ್ನು ನೋಡಿದರೆ ತಮ್ಮಲ್ಲಿ ಜನಗಳಿಗೆ ಎಷ್ಟು ವಿಶ್ವಾಸ, ಮಮತೆ, ಎಷ್ಟು ಪ್ರೀತಿ ಇದೆಯೆಂಬುದನ್ನು ವ್ಯಕ್ತಪಡಿಸುತ್ತದೆ. ತಾವು ಈ ಸಭೆಯ ಅಧ್ಯಕ್ಷ ಸ್ಥಾನಕ್ಕೆ ಈ ದಿವಸ ಅವಿರೋಧವಾಗಿ ಚುನಾಯಿತರಾಗಿರತಕ್ಕ ಸಂದರ್ಭದಲ್ಲಿ ತಮ್ಮನ್ನು ಹಾರ್ದಿಕವಾಗಿ ಅಭಿನಂದಿಸುತ್ತೇನೆ. ಈ ಸಭೆ ಹಾಗೂ ಈ ದೇಶದ ಸರ್ವತೋಮುಖವಾದ ಏಳಿಗೆಗೆ ಈ ಶಾಸನ ಸಭೆಯಲ್ಲಿ ನಡೆಯತಕ್ಕ ಕಾರ್ಯಕಲಾಪಗಳಿಗೆ ತಮ್ಮ ನೆರವು ಅವಶ್ಯಕವಾಗಿ ಬೇಕಾಗಿದೆ. ನಮ್ಮ ನೆರವನ್ನೂ ಕೂಡ ತಮ್ಮ ಬಗೆಗೆ ಕೊಡತಕ್ಕ ನಮ್ಮ ಕರ್ತವ್ಯದಲ್ಲಿ ಕೂಡ ನಾವು ಹಿಮ್ಮೆಟ್ಟುವುದಿಲ್ಲ ಎಂದು ನಾನು ತಮಗೆ ಭರವಸೆ ಕೊಡುತ್ತೇನೆ. ತಮ್ಮ ಕಾರ್ಯ 5 ವರ್ಷಗಳ ಕಾಲ ಸುಲಲಿತವಾಗಿ ಯಶಸ್ವಿಯಾಗಿ ನಡೆದು ಚರಿತ್ರೆಯಲ್ಲಿ, ಶಾಸನ ಸಭೆಯ ಇತಿಹಾಸದಲ್ಲಿ ಸುವರ್ಣಾಕ್ಷರದಲ್ಲಿ ಬರೆಯುವಂತಹ ಸಂದರ್ಭ ಒದಗಲಿ ಎಂದು ಹೇಳಿ ತಮ್ಮನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

†ಶ್ರೀ ಜಿ. ಆರ್. ಸಾಂದ್ರ (ಹುಬ್ಬಳ್ಳಿ ಗ್ರಾಮಾಂತರ).—ಅಧ್ಯಕ್ಷಿಣಿಯವರೇ, ಇವೊತ್ತಿನ ದಿವಸ ಮೈಸೂರು ದೇಶದ ಎಲ್ಲಾ ಹೆಣ್ಣು ಮಕ್ಕಳೂ ಹಾಗೂ ಪ್ರತಿಯೊಬ್ಬ ನಾಗರೀಕರೂ ತಮ್ಮ ಆಯ್ಕೆಯನ್ನು ಸ್ವಾಗತ ಮಾಡುತ್ತಾರೆ. ಇದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ನಮ್ಮ ಪಕ್ಷದ ನಾಯ್ಕರು ತಮ್ಮ 15 ವರ್ಷಗಳ ಅಪಾರ ಅನುಭವವನ್ನು ಈ ವಿಧಾನ ಸಭೆಗೆ ನೀಡಬೇಕೆಂದು ಇವೊತ್ತಿನ ದಿವಸ ತಮ್ಮನ್ನು ಈ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಿದ್ದಾರೆ. ತಮ್ಮಲ್ಲಿ ನನ್ನ ಒಂದು ಪ್ರಾರ್ಥನೆ ಏನೆಂದರೆ ಈಗ ಈ ಸಭೆಗೆ ಹೊಸದಾಗಿ ಚುನಾಯಿತರಾಗಿ ಬಂದಂತಹ ಯುವಕರಿಗೆ ಈ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸುವುದಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಬೇಕು. ಈ ವಿಧಾನ ಸಭೆಯ ಘನತೆ ಗೌರವವನ್ನು ಕಾಪಾಡಿಕೊಂಡು ಹೋಗತಕ್ಕಂಥಾದ್ದು ತಮ್ಮ ಕರ್ತವ್ಯ. ಕೆಲವೊಂದು ಸಂದರ್ಭದಲ್ಲಿ ಈ ಸಭೆಯ ಕಾರ್ಯಕಲಾಪಗಳು ನಡೆಯುವ ಸಂದರ್ಭದಲ್ಲಿ ವಿರೋಧ ಪಕ್ಷದ ಸದಸ್ಯರು ಹಾದಿ ತಪ್ಪಿ ಹೋಗವಂತಹವರು ಕೆಲವರು ಇದ್ದಾರೆ. ಅವರನ್ನೂ ಕೂಡ ತಾವು ಮಕ್ಕಳನ್ನು ತಾಯಿ ತಿದ್ದುವ ಹಾಗೆ ಅವರು ಒಳ್ಳೆಯ ಹಾದಿಯಲ್ಲಿ, ಸರಿಯಾದ ಹಾದಿಯಲ್ಲಿ ಹೋಗುವಂತೆ ಮಾರ್ಗದರ್ಶನ ಮಾಡಬೇಕು ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಜಿ. ಮಾದೇಗೌಡ (ಕೆರುಗಾವಲು).—ಸನ್ಮಾನ್ಯ ಅಧ್ಯಕ್ಷಿಣಿಯವರೇ ತಾವು ಈ ದಿವಸ ಈ ಸದನದ ಅಧ್ಯಕ್ಷಿಣಿಯರಾಗಿ ಆಯ್ಕೆ ಆಗಿರತಕ್ಕದ್ದು ನನಗೆ ಹೆಚ್ಚಿನ ಸಂತೋಷವನ್ನುಂಟುಮಾಡಿದೆ. ಈ ಸಂತೋಷಕ್ಕೆ ಎರಡು ಕಾರಣಗಳಿವೆ. ಮೊದಲನೆಯದು ಸಭಾನಾಯಕರು ಹೇಳುವ ರೀತಿಯಲ್ಲಿ ತಮ್ಮನ್ನು ಅಧ್ಯಕ್ಷಿಣಿಯರನ್ನಾಗಿ ಮಾಡಿ ಮೈಸೂರು ದೇಶದ ಒಂದು ಕೀರ್ತಿಯನ್ನು ಎತ್ತಿ ಹಿಡಿದಿದ್ದಾರೆ ಎಂದು ನಾನು ಭಾವಿಸಿದ್ದೇನೆ.

ಎರಡನೆಯದಾಗಿ ಈಗ ತಾವು ಆಡಳಿತ ಪಕ್ಷದ ಅಭ್ಯರ್ಥಿಯಾಗಿ ಅರಿಸಿ ಬಂದಿದ್ದರೂ ಕೂಡ ಹಿಂದೆ ಸುಮಾರು ಒಂದೂವರೆ ವರ್ಷಕಾಲ ವಿರೋಧ ಪಕ್ಷದ ಸದಸ್ಯರಾಗಿ ಈ ಮನೆಯಲ್ಲಿ ಕೆಲಸ ಮಾಡಿದ್ದೀರಿ. ತಾವು ಆಡಳಿತ ಪಕ್ಷದ ಮತ್ತು ವಿರೋಧ ಪಕ್ಷದ ಪಾತ್ರವನ್ನು ಅರಿತುಕೊಂಡಿದ್ದೀರಿ. ತಾವು ಈ ಸದನದಲ್ಲಿ ಸುಮಾರು 15 ವರ್ಷಗಳ ಕಾಲ ಕೆಲಸ ಮಾಡಿದ್ದೀರಿ. ತಾವು ಒಳ್ಳೆಯ ಕುಟುಂಬದಿಂದ ಬಂದಿದ್ದೀರಿ. ತಮಗೆ ಅಪಾರವಾದ ಅನುಭವ ಇದೆ. ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳು ಈ ದೇಶದಲ್ಲಿ ಹೇಗೆ ಕೆಲಸ ಮಾಡಬೇಕು ಎನ್ನತಕ್ಕಂಥಾದ್ದು ತಮಗೆ ಗೊತ್ತಿದೆ. ಅದರಲ್ಲೂ ಈ ದೇಶದಲ್ಲಿ ವಿರೋಧ ಪಕ್ಷ ತಲೆ ಎತ್ತಿ ನಿಲ್ಲುವುದು ಕಷ್ಟವಾಗಿರುವ ಈ ಕಾಲದಲ್ಲಿ ಹೆಣ್ಣು ಮಕ್ಕಳಾದಂಥ ತಾವು ಅಧ್ಯಕ್ಷ ಪೀಠವನ್ನು ಅಲಂಕರಿಸಿರುವುದು ಎಲ್ಲರೂ ಮೆಚ್ಚತಕ್ಕದ್ದಾಗಿದೆ. ಸಾಮಾನ್ಯವಾಗಿ ಹೆಣ್ಣುಮಕ್ಕಳ ಮನಸ್ಸು ಬಹಳ ವಿಶಾಲವಾದುದು ; ಹೂವಿನಂತಹ ಮನಸ್ಸುಳ್ಳವರು, ಯಾರನ್ನೇ ಕಂಡರೂ ಕೂಡ ಮರುಗುವಂತಹ ಮನಸ್ಸುಳ್ಳವರು. ತಾವು ಈ ಸಭೆಯ ಅಧ್ಯಕ್ಷಿಣಿಯರಾಗಿ ಆಯ್ಕೆಯಾಗಿರುವುದರಿಂದ ವಿರೋಧ ಪಕ್ಷಗಳ ಬೆಳವಣಿಗೆಗೆ ಹೆಚ್ಚಾಗುತ್ತದೆ ಅದಕ್ಕೆ ತಾವು ಸಹಾಯ ಮಾಡುತ್ತೀರಿ ಎನ್ನುವ ನಂಬಿಕೆ ನನಗೆ ಇವೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ಹೆಣ್ಣುಮಗಳು ಇವತ್ತಿನ ದಿವಸ ಈ ಸಭೆಯ ಅಧ್ಯಕ್ಷತೆಯನ್ನು ವಹಿಸಿರುವುದರಿಂದ ತಾವು ಹೆಣ್ಣು ಮಕ್ಕಳಿಗೆ ಮರ್ಯಾದೆ ಕೊಡಬೇಕು ಎಂದು ತಮಗೆ ಎಲ್ಲರಿಗೂ ಗೊತ್ತಿರುವ ರೀತಿಯಲ್ಲಿ ಈ

ಶ್ರೀ ಜಿ. ಮಾದೇಗೌಡ)

ದೇಶದಲ್ಲಿರತಕ್ಕ ಎಲ್ಲಾ ವರ್ಗದ ಹೆಣ್ಣು ಮಕ್ಕಳೂ ಅವರು ಬಡವರಾಗಿರಲಿ, ಅಥವಾ ಬಲ್ಲಿದರಾಗಿರಲಿ ಎಲ್ಲರೂ ಮರ್ಯಾದೆಯಿಂದ ಬಂದಿರತಕ್ಕೆ ಜನ. ಹೆಣ್ಣು ಮಕ್ಕಳನ್ನು ಪೂಜಿಸುವ ಜನರಾದ ಅವರು ನಮ್ಮಿಂದ ಏತಕ್ಕೆ ಮರ್ಯಾದೆಯನ್ನು ನಿರೀಕ್ಷಣೆ ಮಾಡಿದರೋ ನನಗೆ ಅರ್ಥವಾಗುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಇನ್ನೊಂದು ಮಾತನ್ನು ಹೇಳಿದರು ; ಅದೇನೆಂದರೆ ತಮ್ಮನ್ನು ಅಧ್ಯಕ್ಷ ಪೀಠಕ್ಕೆ ಆರಿಸುವಂಥಾ ಕಾಲದಲ್ಲಿ ವಿರೋಧ ಪಕ್ಷದವರೊಡನೆ ಸಮಾಲೋಚನೆ ಮಾಡಬೇಕಾಗಿತ್ತು ಎಂದು ಈ ಕಡೆಯ ಮಾನ್ಯ ಸದಸ್ಯರು ಅಧ್ಯಕ್ಷರ ಆಯ್ಕೆಯ ಬಗ್ಗೆ ಆಕ್ಷೇಪಣೆಯನ್ನು ಎತ್ತಿದಾಗ ಮಾನ್ಯ ಮುಖ್ಯ ಮಂತ್ರಿಗಳು ಈ ಬಗ್ಗೆ ವಿರೋಧ ಪಕ್ಷದವರೆಲ್ಲರನ್ನೂ ಕೇಳುವುದಕ್ಕೆ ಆಗಲಿಲ್ಲ. ಎಂದು ಹೇಳಿದರು. ಆದರೆ ಇನ್ನು ಮುಂದೆ ಅವರು ಮುಖ್ಯ ಮಂತ್ರಿಗಳಾಗಿ ಈ ದೇಶದ ಕೆಲಸ ಕಾರ್ಯಗಳನ್ನು ಮಾಡಿಕೊಂಡು ಹೋಗತಕ್ಕಂಥಾ ಸಂದರ್ಭದಲ್ಲಿ ವಿರೋಧ ಪಕ್ಷವೇ ದೇಶದಲ್ಲಿದೆ, ಅದು ದೊಡ್ಡದಾಗಲಿ, ಚಿಕ್ಕದಾಗಲೀ ಅದನ್ನು ಕೇಳಬೇಕು ಎನ್ನುವ ಮನೋಭಾವನೆಯನ್ನು ತಳಿಯಬೇಕು. ದೇಶವನ್ನು ಕಟ್ಟತಕ್ಕಂಥಾ ಕೆಲಸದಲ್ಲಿ ದೇಶದ ಕೆಲಸ ಕಾರ್ಯಗಳನ್ನು ಮಾಡತಕ್ಕಂಥಾ ಕಾಲದಲ್ಲಿ ವಿರೋಧ ಪಕ್ಷದವರೊಡನೆ ಸಮಾಲೋಚನೆ ಮಾಡಬೇಕು ಎನ್ನುವ ಮನಸ್ಸು ಇದ್ದರೆ ಬಹುಶಃ ತಾವು ಅಧ್ಯಕ್ಷಣಿಯಾಗಿ ಕೆಲಸ ಮಾಡತಕ್ಕದ್ದು ಸುಲಭವಾಗುತ್ತದೆ, ಅವರು ಮುಖ್ಯ ಮಂತ್ರಿಗಳಾಗಿ ಸರ್ಕಾರವನ್ನು ನಡೆಸುವುದಕ್ಕೆ ಸುಲಭವಾಗುತ್ತದೆ ಎಂದು ನಾನು ಅಪೇಕ್ಷಿಸುತ್ತೇನೆ. ಈ ಸಂದರ್ಭದಲ್ಲಿ ನಾನು ಹೇಳಿದ ಹಾಗೆ ತಾವು ಪ್ರಜಾಪ್ರಭುತ್ವವನ್ನು ಉಳಿಸಬೇಕಾದರೆ ಪ್ರಜಾಪ್ರಭುತ್ವವನ್ನು ಬೆಳೆಸಬೇಕಾದರೆ ಸರ್ಕಾರ ಮಾಡತಕ್ಕಂಥಾ ತಪ್ಪನ್ನು ತಿದ್ದಬೇಕಾದರೆ, ಸರ್ಕಾರದ ಅಡಳಿತವನ್ನು ಸರಿಯಾದ ರೀತಿಯಲ್ಲಿ ನಡೆಸಿಕೊಂಡು ಹೋಗಬೇಕಾದರೆ ಒಂದು ಪ್ರಬಲವಾದ ವಿರೋಧ ಪಕ್ಷದ ಅವಶ್ಯಕತೆ ಇದೆ ಎಂಬುದನ್ನು ಎಲ್ಲರೂ ಒಪ್ಪುತ್ತಾರೆ ಎಂದು ನಾನು ಭಾವಿಸುತ್ತೇನೆ. ಅದಕ್ಕೋಸ್ಕರ ಪ್ರಜಾಪ್ರಭುತ್ವ ಸ್ಥಿರವಾಗಿ ಶಾಶ್ವತವಾಗಿ ಉಳಿಯಬೇಕಾದರೆ ತಾವು ಈ ಸದನದಲ್ಲಿರತಕ್ಕ ಎಲ್ಲಾ ಮಾನ್ಯ ಸದಸ್ಯರನ್ನೂ ಒಂದೇ ದೃಷ್ಟಿಯಿಂದ ನೋಡಬೇಕು. ಹೆಣ್ಣಿನ ಮನಸ್ಸು ಚಂಚಲ ಎಂದು ಅನೇಕ ಸಹೋದ್ಯೋಗಿಗಳು ಹೇಳುತ್ತಾರೆ. ಆದರೆ ನಿಮ್ಮ ಮನಸ್ಸು ಚಂಚಲವಾಗಬಾರದು ಎಂದು ಕೂಡ ಕೆಲವರು ಹೇಳಿದರು. ಅಡಳಿತ ಪಕ್ಷದವರು ತಮ್ಮ ಮೇಲೆ ಪ್ರಭಾವ ಬೀರಿದರೂ ತಾವು ಮನಸ್ಸನ್ನು ಗಟ್ಟಿ ಮಾಡಿಕೊಂಡು ಈ ದೇಶದಲ್ಲಿ ವಿರೋಧ ಪಕ್ಷವು ಬೆಳೆಯುವುದಕ್ಕೆ ಮತ್ತು ದೇಶದಲ್ಲಿ ಪ್ರಜಾಪ್ರಭುತ್ವವು ಸ್ಥಿರವಾಗಿ ನೆಲೆಗೊಳ್ಳುವಂತೆ ತಾವು ಹೆಚ್ಚಾಗಿ ಶ್ರಮಪಡಬೇಕೆಂದು ಹೇಳಿ, ತಾವು ಈ ಸದನದ ಅಧ್ಯಕ್ಷಣಿಯರಾಗಿ ಚುನಾಯಿತರಾಗಿದ್ದಕ್ಕೆ ತಮಗೆ ನನ್ನ ವಂದನೆಗಳನ್ನರ್ಪಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

5-00 P.M.

ಅಧ್ಯಕ್ಷರು.—ಸಭಾ ನಾಯಕರೆ, ಸದನದ ಸನ್ಮಾನ್ಯ ಸದಸ್ಯರೆ ಮತ್ತು ಸಹೋದ್ಯೋಗಿಗಳೆ, ಈಗ ವೇಳೆಯಾಗುತ್ತಾ ಬಂದಿರುವುದರಿಂದ ನಾನು ನಾಲ್ಕು ಮಾತುಗಳನ್ನು ಹೇಳಿ ಈ ನಮ್ಮ ಸಭೆಯನ್ನು ಮುಕ್ತಾಯ ಗೊಳಿಸುತ್ತೇನೆ. ಈ ಸದನದ ನಾಯಕರು ಮತ್ತು ಸಹೋದ್ಯೋಗಿಗಳಾದ ತಾವೆಲ್ಲರೂ ಒಮ್ಮತವಲ್ಲದಿದ್ದರೂ ಬಹುಜನ ಬೆಂಬಲದಿಂದ ನನಗೆ ಇಪತ್ತು ಈ ಸದನದ ಅಧ್ಯಕ್ಷ ಸ್ಥಾನವನ್ನು ಒದಗಿಸಿ ಕೊಟ್ಟಿದ್ದೀರಿ. ಈಗಾಗಲೇ ಅನೇಕ ಮಿತ್ರರು, ಇದು ಮುಳ್ಳಿನ ಕುರ್ಚಿ, ಕೆಲಸ ನಿರ್ವಹಿಸುವುದು ಅಷ್ಟು ಸುಲಭವೇನಲ್ಲ ಎಂಬುದಾಗಿ ಹೇಳಿದರು ; ಮತ್ತು ಕೆಲವರು ಆ ರೀತಿ ಸಂದರ್ಭಗಳು ಬರದ ಹಾಗೆ ನೋಡಿಕೊಳ್ಳುತ್ತೇವೆಂದು ಆಶ್ವಾಸನೆಯನ್ನು ಸಹ ಕೊಟ್ಟರು. ಆದರೆ, ಈ ಸದನದ ಕೆಲಸಕಾರ್ಯಗಳಿಗೆ ನಾನು ಹೊಸಬಳೇನೂ ಅಲ್ಲ. ನಾನು ಇದು ನಾಲ್ಕನೆಯ ಸಾರಿ ಚುನಾವಣೆಯಲ್ಲಿ ನಿಂತು ಬರುತ್ತಿದ್ದೇನೆ. 14 ವರ್ಷಗಳಿಂದಲೂ ಇಲ್ಲಿ ನಾನು ಕೆಲಸ ಮಾಡಿದ್ದೇನೆ. ತಾವು ಕಂಡ ಹಾಗೆ ನನಗೆ ಈ ಕಡೆ ಕೂತೂ ಅನುಭವವಿದೆ ; ಆ ಕಡೆ ಕೂತು ಕೂಡ ಅನುಭವ ಇದೆ. ಪ್ರಜಾಪ್ರಭುತ್ವದಲ್ಲಿ ವಿರೋಧ ಪಕ್ಷ ಮತ್ತು ಅಡಳಿತ ಪಕ್ಷ—ಇವು ಎರಡೂ ಕೂಡ ಒಂದು ಗಾಡಿಗೆ ಇರುವ ಎರಡು ಚಕ್ರ ಇದ್ದ ಹಾಗೆ ಎಂದು ನಾನು ತಿಳಿದುಕೊಂಡಿದ್ದೇನೆ. ಹಾಗೆಯೇ ತಿಳಿದುಕೊಂಡು ಇಲ್ಲಿ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ನನ್ನ ವಿಚಾರದಲ್ಲಿ ಅನೇಕ ಜನರು ಬಹಳ ಪ್ರಿಯ ವಚನಗಳನ್ನು ಹಾಗೂ ಹಿತ ವಚನಗಳನ್ನು ಆಡಿದ್ದಾರೆ. ನಾನಾದರೂ ತಿಳಿಯುತ್ತೇನೆ, ಆ ಹಿತವಚನಗಳು ಮತ್ತು ಪ್ರಿಯ ವಚನಗಳು ಏನಿವೆ, ಅವು ನನ್ನ ಕೆಲಸಕಾರ್ಯಗಳಿಗೆ ಒಂದು ಧೈರ್ಯವನ್ನು ತಂದುಕೊಡುತ್ತದೆಂದು ತಿಳಿದುಕೊಂಡಿದ್ದೇನೆ. ಇದರಿಂದ ನಿಮ್ಮೆಲ್ಲರ ಸಹಕಾರ ನಿಜವಾಗಿಯೂ ಇದೆಯೆಂದು ನಾನಾದರೂ

ತಿಳಿದುಕೊಂಡಿದ್ದೇನೆ. ಇಲ್ಲಿ ಹಿಂದೆ ಇದ್ದಂತಹ ನನ್ನ ಪ್ರಿಡೆಸೆಸ್ಸರ್ಸ್ ಯಾವ ಒಂದು ಪ್ರೆಡಿಶನ್ಸ್‌ನ್ನು ಕಾಪಾಡಿಕೊಂಡು ಬಂದಿದ್ದಾರೋ ಅವನ್ನೆಲ್ಲಾ ನಾನು ಕಾಪಾಡಿಕೊಂಡು ಬರುತ್ತೇನೆ.

ಇನ್ನೊಂದು ತಮ್ಮಲ್ಲಿ ಹೇಳಿಕೊಳ್ಳುವುದೇನೆಂದರೆ, ನಮ್ಮ ದೇಶದಲ್ಲಿ ಎಷ್ಟೋ ಭಾಷೆಗಳಿವೆ, ನಾನಾ ತರದ ಭಾಷೆಗಳಿವೆ. ಕನ್ನಡ ಭಾಷೆಗೆ ನಮ್ಮೆಲ್ಲರ ಒಮ್ಮತ ಮತ್ತು ಅಭಿಮಾನ ಇರಬೇಕಾದುದೆ, ಅದು ನಿಜ. ಆದರೆ, ಇನ್ನೊಂದು ಭಾಷೆಗೆ ನಾವು ದ್ವೇಷ ಮಾಡಬಾರದು ಎಂದು ತಮ್ಮಲ್ಲಿ ಅತಿ ವಿನಯದಿಂದ ಕೇಳಿಕೊಳ್ಳುತ್ತೇನೆ. ಕನ್ನಡ ಬಿಟ್ಟು ಬೇರೆ ಭಾಷೆಯಲ್ಲಿ ಮಾತನಾಡಿದರೆ, ಮಾನ್ಯ ಸದಸ್ಯರು ಅದನ್ನು ದ್ವೇಷ ಮಾಡಬಾರದು. ಇಲ್ಲಿ ನಮ್ಮ ಮರಾಠಿ ಸಹೋದರರು ಇದ್ದಾರೆ. ಅವರು ಏನಾದರೂ ಹೇಳಬೇಕಾದರೆ, ನಮ್ಮ ದೇಶದಲ್ಲಿ ಫ್ರೀಡಂ ಆಫ್ ಎಕ್ಸ್‌ಪ್ರೆಶನ್ ಇರುವುದರಿಂದ ಮರಾಠಿಯಲ್ಲಿ ಹೇಳುವ ಕಾಲದಲ್ಲಿ, ಅವರಿಗೆ ನೀವು ಮರಾಠಿಯಲ್ಲಿ ಮಾತನಾಡಬೇಡಿ, ಕನ್ನಡದಲ್ಲೇ ಮಾತನಾಡಿ ಎಂದು ಹೇಳುವುದು ಸರಿಯಲ್ಲ. ರಾಜ್ಯಾಂಗದಲ್ಲಿ ಕೂಡ ಎಲ್ಲಾ ಭಾಷೆಗಳಿಗೂ ಮಾನ್ಯತೆ ಕೊಟ್ಟಿದ್ದಾರೆ. ಆದ್ದರಿಂದ ನೀವು ಈ ಭಾಷೆಯಲ್ಲಿ ಮಾತನಾಡಿ, ಆ ಭಾಷೆಯಲ್ಲಿ ಮಾತನಾಡಿ ಎಂದು ಹೇಳುವುದು ಸರಿಯಲ್ಲ. ಅವರು ಹೇಳಿದ್ದನ್ನು ನಮಾಧಾನವಾಗಿ ಕೇಳಬೇಕಾದುದು ನಮ್ಮೆಲ್ಲರ ಕರ್ತವ್ಯ. ಅದಲ್ಲದೆ, ಅವರು ಮರಾಠಿಯಲ್ಲಿಮಾತನಾಡುವಾಗ ಅದನ್ನು ತಕ್ಷಣಟ್ರಾನ್ಸ್‌ಲೇಟ್ ಮಾಡುವ ವ್ಯವಸ್ಥೆಯನ್ನು ಮಾಡಬೇಕೆಂದು ನಾವು ಹಿಂದಿನಿಂದಲೂ ಹೇಳಿಕೊಂಡು ಬಂದಿದ್ದೇವೆ. ಅದನ್ನು ಮುಂದಕ್ಕಾದರೂ ಮಾಡುವಂತಹ ವ್ಯವಸ್ಥೆಯನ್ನು ನಾನು ಮಾಡಲು ಅಪೇಕ್ಷೆಪಡುತ್ತೇನೆ. ಈ ಒಂದು ಭರವಸೆಯನ್ನು ನಾನು ಮಾನ್ಯ ಸದಸ್ಯರಿಗೆ ಕೊಡುತ್ತೇನೆ.

ಇನ್ನು ಕಾರ್ಯಕಲಾಪಗಳ ವಿಚಾರದಲ್ಲಿ ಬಹಳ ಜನ ಹಾಗೆ ನಡೆದುಕೊಳ್ಳಬೇಕು, ಹೀಗೆ ನಡೆದುಕೊಳ್ಳಬೇಕೆಂದು ಹೇಳಿದರು. ಮತ್ತು ಕೆಲವರು ಹೆಣ್ಣಿನ ಮನಸ್ಸು ಚಂಚಲ ಎಂದು ಕೂಡ ಹೇಳಿದರು. ಆದರೆ ನಾನಾದರೂ ಹೇಳುತ್ತೇನೆ, ನನ್ನ ಮನಸ್ಸು ಯಾವ ಗಂಡಸಿನ ಮನಸ್ಸಿನ ದೃಢತೆಗಿಂತಲೂ ಕಡಿಮೆ ಇಲ್ಲಪಂದು ಹೇಳಲಹೇಕ್ಷೆಪಡುತ್ತೇನೆ. ನನಗೆ ಇಲ್ಲಿ 15 ವರ್ಷಗಳಿಂದಲೂ ಇಲ್ಲಿಯ ಕಾರ್ಯ ಕಲಾಪಗಳನ್ನು ನೋಡಿಕೊಂಡು ಬಂದಂತಹ ಅನುಭವ ಇದೆ. ಯಾವುದಾದರೂ ಕೆಲಸ ಮಾಡಬೇಕೆಂದರೆ, ಅದನ್ನು ದೃಢ ಮನಸ್ಸಿನಿಂದ ಮಾಡತಕ್ಕದ್ದು ನಮ್ಮೆಲ್ಲರ ಕರ್ತವ್ಯ. ಯಾರಾದರೂ, ಹೇಳಿದ ಹಾಗೆ ನಾನು ಚಂಚಲ ಮನಸ್ಸಿನವಳು ಚಂಚಲ ಮನಸ್ಸಿನಿಂದ ಕಾರ್ಯ ಮಾಡುತ್ತೇನೆಂದು ತಿಳಿದುಕೊಳ್ಳಬೇಕಾಗಿಲ್ಲ. ನಾನು ಅಂತಹ ಸ್ವಭಾವದವಳು ಅಲ್ಲ, ಮತ್ತು ಚಂಚಲ ಸ್ವಭಾವವೂ ನನ್ನದಲ್ಲ. ನನಗೆ ಈ ಕೆಲಸ ಎಷ್ಟು ಜವಾಬ್ದಾರಿಯುತವಾದುದು ಎಂದು ಗೊತ್ತಿದೆ. ಆದರೆ, ಈ ಕೆಲಸವನ್ನು ಒಪ್ಪಿಕೊಳ್ಳಲು ನನಗೆ ಧೈರ್ಯ ಯಾರಿಂದ ಬಂದುದೆಂದರೆ, ನಮ್ಮ ನೆಚ್ಚಿನ ಪ್ರಧಾನ ಮಂತ್ರಿಯವರಿಂದ. ಶ್ರೀಮತಿ ಇಂದಿರಾ ಗಾಂಧಿಯವರು ಹೆಣ್ಣುಮಗಳಾದರೂ, ಎಷ್ಟೊಂದು ಸಾಹಸ ಮತ್ತು ಶ್ರಮ ಪಟ್ಟು ದುಡಿಯುತ್ತಿದ್ದಾರೆ, ಅದನ್ನು ನೋಡಿ ನಾವೆಲ್ಲ ಹೆಣ್ಣು ಮಕ್ಕಳು ಒಂದು ಧೈರ್ಯ ತಂದುಕೊಂಡು ಯಾವ ಕೆಲಸವನ್ನು ಮಾಡಲೂ ನಾವೇನೂ ಯೋಗ್ಯರಲ್ಲವೆಂದು ತಿಳಿದುಕೊಳ್ಳಬಾರದು. ಅವರ ಜೊತೆಯಲ್ಲಿ ನಾವು ಕೂಡ ದೇಶ ಕ್ಕೋಸ್ಕರ ಕೆಲಸ ಮಾಡಲು ಹಿಂಜರಿಯಬಾರದು. ಹೀಗೆ ಹೆಣ್ಣುಮಕ್ಕಳು ಮುಂದೆ ಬಾರದೆ ಕೂತರೆ, ದೇಶದಲ್ಲಿ ನೂರರಲ್ಲಿ ಐವತ್ತು ಭಾಗದಷ್ಟು ಜನರ ಒಂದು ಕೈ ಕತ್ತರಿಸಿದ ಹಾಗೆ ಆಗಿ, ಏನೂ ಪ್ರಯೋಜನವಿಲ್ಲದಂತಾಗುತ್ತದೆ. ಅಂತಹ ಇಂದಿರಾ ಗಾಂಧಿಯವರ ವ್ಯಕ್ತಿತ್ವ ಅದರ ಉದ್ದೇಶ ಹಾಗೂ ಮಾರ್ಗದರ್ಶನದಿಂದಲೇ ನಾನೂ ಈ ಕೆಲಸಕ್ಕೆ ಒಪ್ಪಿಕೊಂಡೆ. ಕೆಲಸಕ್ಕೆ ಒಪ್ಪಿಕೊಂಡರೂ, ಇದರ ಕಷ್ಟ ಗೊತ್ತೇ ಇದೆ. ಆದರೂ ತಮ್ಮೆಲ್ಲರ ವಿಶ್ವಾಸ ಮತ್ತು ಸಹಕಾರ ಇರುವುದರಿಂದ ನಾನು ಯಾವುದಕ್ಕೂ ಹಿಂಜರಿಯುವುದಿಲ್ಲ. ಅಲ್ಲದೆ ಅದರಿಂದ ನನಗೆ ಒಂದು ರೀತಿಯ ಧೈರ್ಯವೂ ಉಂಟಾಗಿದೆ. ಕೊನೆಯದಾಗಿ, ತಾವೆಲ್ಲರೂ ನನ್ನಲ್ಲಿ ವಿಶ್ವಾಸವಿಟ್ಟು ಆಡಿದಂತಹ ಪ್ರೀತಿ ವಚನಗಳಿಗೆ ನಾನು ತುಂಬಾ ಋಣಿಯಾಗಿದ್ದೇನೆ ಮತ್ತು ಅದೇ ಸಹಕಾರ ಸೌಹಾರ್ದ ಮುಂದೆಯೂ ನನಗೆ ದೊರೆಯುವುದೆಂದು ಆಶಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಈಗ ಈ ಸಭೆಯು ಮುಕ್ತಾಯಗೊಂಡು ಪುನಃ 6 ಗಂಟೆಗೆ ರಾಜ್ಯಪಾಲರ ಭಾಷಣವನ್ನು ಕೇಳಲು ಸೇರುವುದು. ಅದೇ ರೀತಿ ನಾಳೆ ಈ ಸಭೆಯು 11-00 ಗಂಟೆಗೆ ಸೇರುವುದು.

The House adjourned at Fifteen Minutes past five of the Clock to meet again at Eleven of the Clock on Saturday, the 25th March 1972.

WD 17081—GPB—500—28-4-72